Suspension of Rule 175 to take up a motion under Rule 146 for consideration

Mr. DEPUTY SPEAKER.—The hon. Member is permitted to move the motion.

Sri M. NAGAPPA.—Rule 175 will be a bar for taking up this motion. I therefore move:

> "That Rule 175 of the Rules of Procedure in the Mysore Legislative Assembly be suspended and the motion relating to the Mysore-Maharashtra Border disputebe taken into consideration."

Mr. DEPUTY SPEAKER.—The question is:

> "That Rule 175 of the Rules of Procedure in the Mysore Legislative Assembly be suspended and the motion relating to the Mysore-Maharashtra Border dispute be taken into consideration."

HON. MEMBERS.—Yes.

The motion was adopted.

Mr. DEPUTY SPEAKER.—Rule 175 is suspended.

Sri B. P. KADAM.—Sir, may I clarify that the issue which has been raised is not of recent occurrence? It is 13 years old.

Mr. DEPUTY SPEAKER.—I will give the hon. Member a chance and then he can have his full say, but not at this stage.

†Sri B. P. KADAM (Karwar).—I will only clarify the position now. Any amount of very angry, vociferous or vituperative words will not help a solution.

Moreover, my friends who are a party to the S. V. D. have accepted a minimum Programme for finding out a solution for all inter-State boundary disputes on democratic principles. If they do not stick to that, the S. V. D. collapses just now and so the recognition of the Leader of the Opposition also must be withdrawn.

Moreover, this is an issue which has been debated earlier. The report of the Mahajan Commission can by no stretch of imagination be taken as an award. What is an award has been defined in the Indian Arbitration Act. So there is no point in generating heat and condemning people who are far away.

Further, there is an adjournment motion standing in the name of the hon. Member Sri Nandihaly on the existing situation in Belgaum and the imposition of Section 35 of the Mysore Police Act and also the lathi charge. Many of our colleagues are still in hospital there. This is a very important matter, but you have not given him chance to move the motion.

Mr. DEPUTY SPEAKER.—The hon. Member may raise it afterwards.

Motion to consider the situation arising out of the move of the Central Government in respect of the Mahajan Commission Report deviating from the Recommendations to the detriment of the Mysore State.

SRI V. N. PATIL (Humnabad).—Sir, with your permission I beg to move:

> "That the situation arising out of the move which the Central Government is reported to be considering in respect of the Mahajan Commission Report deviating from its recommendations to the detriment of the Mysore State be taken into consideration."

MR. DEPUTY SPEAKER.—Motion moved:

> "That the situation arising out of the move which the Central Government is reported to be considering in respect of the Mahajan Commission report deviating from its recommendations to the detriment of the Mysore State be taken into consideration"

SRI B. P. NANDIHALLI.—I rise to a point of order. Under rule 52 regulating adjournment motions on a matter of urgent public importance, sub-rule (3) states that the motion shall be restricted to a specific matter of recent occurrence. This Mahajan Commission Report is not a matter of recent occurrence.

MR. DEPUTY SPEAKER.—This is not an adjournment motion.

SRI M. NAGAPPA.—I beg to move under rule 146:

> "That this House while reiterating its previous res lution urges the Government of India to accept the Mahajan Commission Report in toto and implement it forthwith any change or deviation is not only not acceptable but is condemned."

MR. DEPUTY SPEAKER.—Now Substitute Motion moved:

> "That this House while reiterating its previous resolution urges the Government of India to accept the Mahajan Commission Report in toto and implement it forthwith. Any change or deviation is not only not acceptable but is condemned."

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ, ಈಗಾಗಲೇ ಏನೊಂದು ಸನ್ನಿವೇಶವನ್ನು ನಮ್ಮ ರಾಜ್ಯದವರು ಎದುರಿಸಬೇಕಾಗಿದೆ ಎನ್ನುವುದು ಪೂರ್ತಿ ಈ ಮನೆಗೆ ಗೊತ್ತಿದೆ. ನಾನು ಈಗ ಈ ಮೋಷನ್ ಅನ್ನು ತರುವುದರ ಉದ್ದೇಶವಾದರೂ ಇಷ್ಟೇ. ಈಗ ಸನ್ನಿವೇಶ ಏನು ಬಂದಿದೆ, ಇದಕ್ಕೆ ಮುಖ್ಯ ಕಾರಣರು ಯಾರು ಇದರಿಂದ ಹೇಗೆ ನಾವು ಪಾರಾಗಬೇಕು, ಹೇಗೆ ರಾಜ್ಯದ ಹಿತರಕ್ಷಣೆಯಾಗಬೇಕು ಎನ್ನುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಮನೆಯ ಘನತೆ ಗೌರವವನ್ನು ರಕ್ಷಿಸಲು ಪಕ್ಷಬೇಧವಿಲ್ಲದೆ ಎಲ್ಲರೂ ಒಂದಾಗಬೇಕು. ನನ್ನ ಮಾನ್ಯ ಮಿತ್ರರಾದ ಶ್ರೀ ಕದಂ ಅವರು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಅವರು ಹೇಳಿದಂತಹ ವಿಷಯದ ಬಗ್ಗೆ ನನ್ನ ಸಹಾನುಭೂತಿ ಇದೆ. ಅಂದು ಬೆಳಗಾಮಿನಲ್ಲಿ ಲಾಠಿ ಚಾರ್ಜ್ ಏನಾ

(ಶ್ರೀ ವಿ. ಎನ್. ಪಾಟೀಲ್)

ಯಿತು, ಅಲ್ಲಿ ಅನ್ಯಾಯ ಏನಾಯಿತು, ಅತ್ಯಾಚಾರ ಏನಾಯಿತು ಅದನ್ನು ಖಂಡನೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಬೆಳಗಾವಿಯಲ್ಲಿ ಲಾಠಿಚಾರ್ಜ್ ಮಾಡಿದಕ್ಕೆ ಧಿಕ್ಕಾರ ಗೈಯ್ಯುವುದರಲ್ಲಿ ನಾನೂ ಕದಂರವರಿಗಿಂತ ಎಂದಿಗೂ ಹಿಂದುಳಿಯುವುವವನಲ್ಲ. ಆದರೆ ಈಗ ಬಾರ್ಡರ್ ಪ್ರಶ್ನೆ ಏನು ಬಂದಿದೆ ಇದರ ಬಗ್ಗೆ ನಾನು ಕೆಲವೊಂದು ವಿಷಯವನ್ನು ಹೇಳಬೇಕಾಗಿದೆ. ಈಗ ಉದ್ಭವಿಸಿರುವ ವಿಷಯದಮೇಲೆ ತುರ್ತು ಚರ್ಚೆಯಾಗಲೆಂಬುದೇ ನಾನು ಮೋಷನ್ ತಂದಿರುವ ಮುಖ್ಯ ಉದ್ದೇಶ. ಅದಕ್ಕಾಗಿ ಕಲಂ 145 ರ ಕೆಳಗೆ ಮೋಷನ್ ನೋಟೀಸ್ ಕಳುಹಿಸಿದ್ದೇನೆ. ಯಾವ ಬಗ್ಗೆ ಚರ್ಚಿಸೋಣ, ಯಾವ ನಿರ್ಣಯ, ಗೊತ್ತುವಳಿ, ಠರಾವು ಸರ್ವಸಮ್ಮತಿಯಿಂದ ತರೋಣ ಇವೆಲ್ಲವುಗಳು ಈ ಸಭೆಯ ಸದಸ್ಯರ ಚರ್ಚೆಯ ಧೋರಣೆಗಳನ್ನು ನೋಡಿ ಹೆಚ್ಚು ಕಡಿಮೆ ಸಭೆಯ ಉದ್ದೇಶವನ್ನು ಸ್ಪಷ್ಟೀಕರಿಸುವಂತ ಒಂದು ನಿರ್ಣಯ ತರಲು ದಾರಿ ಮಾಡಿಕೊಡುವುದಿದೆ. ಈ ನನ್ನ ಮೋಷನ್ ತಂದಿರುವ ಮುಖ್ಯ ಉದ್ದೇಶ ಇದು. ರಾಜಕೀಯ ಭಿನ್ನಾಭಿಪ್ರಾಯಗಳು, ರಾಜ್ಯದ ಭಾಷೆಯ, ಸಂಸ್ಕೃತಿಯ ಆಡಳಿತದ ಮತ್ತು ಸರ್ವೋನ್ಮುಖ ಪ್ರಗತಿಯ ದಾರಿಯಲ್ಲಿ ಅಡಿಗಲ್ಲಾಗಲು ನಾವು ಆಸ್ಪದ ಕೊಡಬಾರದು. ಈ ಬಾರ್ಡರ್ ಪ್ರಶ್ನೆ ಈ ಒಂದು ಮಟ್ಟಕ್ಕೆ ಬರಬೇಕಾದರೆ ಇದಕ್ಕೆ ಮೈಸೂರು ಸರ್ಕಾರದ ಅವಕ್ಷತೆ ಮತ್ತು ಅಲಕ್ಷತೆಯೇ ಕಾರಣವಾಗಿದೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಏತಕ್ಕೆಂದರೆ ಈಗ 6 ತಿಂಗಳ ಹಿಂದೆ, ಮತ್ತು ಅದಕ್ಕೂ ಹಿಂದೆ ಎರಡು ಮೂರು ಸಾರಿ ಗಡಿಸಮಸ್ಯೆಯ ಬಗ್ಗೆ, ಮಹಾಜನ್ ವರದಿಯ ಬಗ್ಗೆ ರೆಜಲ್ಯೂಷನ್ ಈ ಮನೆಯಮುಂದೆ ಬಂದು ಎಲ್ಲರೂ ಒಂದಾಗಿ ಅದನ್ನು ಒಪ್ಪಿಕೊಂಡು ಈ ಗಡಿ ವಿವಾದವನ್ನು ಒಂದೇ ಸಾರಿ ಕೊನೆಗಾಣಿಸಬೇಕೆಂದು ಕೇಂದ್ರಕ್ಕೆ ಒತ್ತಾಯ ಮಾಡಬೇಕು. ಮೈಸೂರು ಸ್ಟೇಟಿನಲ್ಲಿರತಕ್ಕ ಎಲ್ಲಾ ಕನ್ನಡಿಗರಿಗೂ ರಕ್ಷಣೆಯನ್ನು ಕೊಡಬೇಕು, ಮಹಾಜನ್ ಕಮಿಷನ್ ವರದಿಯನ್ನು ಪೂರ್ತಿಯಾಗಿ ಅಕ್ಷರಶಃ ಒಪ್ಪಿಕೊಂಡು ಅದನ್ನು ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು ಎಂದು ತೀರ್ಮಾನ ಮಾಡಬೇಕಾಗಿದೆ. ಹೀಗಿರುವಾಗ ಈ ಬಗ್ಗೆ ವೀರೇಂದ್ರಪಾಟೀಲರ ಮಂತ್ರಿಮಂಡಲ ಏನು ಕಾರ್ಯಕ್ರಮವನ್ನು ಕೈಗೊಂಡಿದೆ ಎಂದು ನಾನು ಕೇಳುತ್ತೇನೆ. ಈ ಸರ್ಕಾರವನ್ನು ಕಾರ್ಮಿಕರು ಏನಾದರೂ ಸವಲತ್ತನ್ನು ಕೇಳಿದರೆ ಅವರ ಕತ್ತು ಕೊಯ್ಯುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದ್ದಾರೆ. ರಾಜಕೀಯ ಕಾರಣಗಳಿಂದಾಗಿ ಭಾಷಾವಾರಿ, ಧಾರ್ಮಿಕವಾಗಿರುವ ಅಲ್ಪ ಸಂಖ್ಯಾತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇವೊತ್ತು ರಾಜ್ಯದ ಹಿತರಕ್ಷಣೆಯನ್ನು ಮಾಡತಕ್ಕಂಥ ಒಂದು ಪ್ರಶ್ನೆ ಈಗ ಬಂದಿದೆ. ಕಾಂಗ್ರೆಸ್ಸಿನಲ್ಲಿ ಇವೊತ್ತು ಅಂತಃಕಲಹ ಬಂದು ಇಂಡಿಕೇಟ್ ಸಿಂಡಿಕೇಟ್ ಎಂದು ಎರಡು ಗುಂಪುಗಳಾಗಿವೆ. ಇದರಿಂದ ಒಬ್ಬರಿಗೊಬ್ಬರಿಗೆ ಒಳಗೊಳಗೇ ಕಲಹಗಳು ನಡೆಯುತ್ತಿವೆ. ಮೈಸೂರಿನ ಸಿಂಡಿಕೇಟ್ ಕುತಂತ್ರದ ನೃತ್ಯ ನಡೆದಿರುವಾಗಲೇ ದೆಹಲಿಯಲ್ಲಿ ಏನೇನೋ ಕುತಂತ್ರಗಳೂ ಕೂಡ ನಡೆದಿವೆ. ಭಾಷೆಯ ಹೆಸರಿನಲ್ಲಿ ಕನ್ನಡ ಮರಾಠಿಗರಲ್ಲಿ ಒಡಕು ಇನ್ನೂ ಹೆಚ್ಚು ಮಾಡಲಾಗುತ್ತಿದೆ. ಇದರಲ್ಲಿ ಗಡಿ ಸಮಸ್ಯೆಗೆ ಸಂಬಂಧಪಟ್ಟಹಾಗೆ ಕೆಲವೊಂದು ವಿಚಾರ ನಡೆದಿದೆ. ಇದರ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಕೆಲವು ಸಮಾಚಾರಗಳು ಬಂದಿವೆ. ಅದರ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ನೀರು ತರಮೇಲೆ ಹೊರಳಿ ಹೋಗುತ್ತಿದ್ದಾಗ ಮಾತ್ರ ಜ್ಞಾಪಿಸಿಕೊಂಡು ವಿರೋಧಪಕ್ಷದ ನಾಯಕರುಗಳನ್ನು ಕರೆಸಿಕೊಂಡು ಅವರ ಜೊತೆಯಲ್ಲಿ ಈ ವಿಚಾರವನ್ನು ಡಿಸೆಕಸ್ ಮಾಡುತ್ತಿದ್ದಾರೆ. ಆಡಳಿತ ಪಕ್ಷದವರಿಗೆ ಡಿಫಿಕಲ್ಟೀಸ್ ಬಂದಾಗ ವಿರೋಧಪಕ್ಷದವರ ಸಹಾಯ ಮತ್ತು ರಕ್ಷಣೆ ಬೇಕಾಗುತ್ತದೆ. ಇವರಿಗೆ ತೊಂದರೆ ಇಲ್ಲದಿದ್ದರೆ ವಿರೋಧಪಕ್ಷದವರ ಕಡೆಯಿಂದ ಬಂದಂತಹ ಬೇಡಿಕೆಗಳು ನ್ಯಾಯವಾದ ಬೇಡಿಕೆಗಳಾಗುವುದಿಲ್ಲ. ಅವುಗಳನ್ನು ಇವರು ತಳ್ಳಿಹಾಕುತ್ತಾರೆ. ನಿಜವಾಗಿಯೂ ಈ ಸಿಂಡಿಕೇಟು ಆಡಳಿತ ಪಕ್ಷದವರು ಸ್ವಾರ್ಥಿಗಳು ಇವರ ಈ ಒಂದು ಮನೋಭಾವನೆಯಿಂದ ನಮ್ಮ ರಾಜ್ಯಕ್ಕೆ ಅಪಾರವಾದ ಹಾನಿಯಾಗುತ್ತದೆ. ದೆಹಲಿಯಲ್ಲಿ ಕೂಡ ಇಂಡಿಕೇಟ್ ಮತ್ತು ಸಿಂಡಿಕೇಟ್ ಅಂತಃಕಲಹದಿಂದ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದೆ. ತನ್ನ ರಾಜಕೀಯ ಭದ್ರತೆಗೋಸ್ಕರ ಬೇಕಾದ ಸಮಯ ಸಾಧಕತನಕ್ಕೆ ಇಳಿಯಲಾಗುತ್ತಿದೆ. ಇಂಥಾ ಒಂದು ಸಂದಿಗ್ಧ ಪರಿಸ್ಥಿಯಲ್ಲಿ ಸರ್ಕಾರದವರು ಮಂತ್ರಿಮಂಡಲದವರು ದೆಹಲಿಯಲ್ಲಿರುವ ಕರ್ನಾಟಕ ಪಾರ್ಲಿಮೆಂಟ್ ಸದಸ್ಯರು ಎಲ್ಲರೂ ಸೇರಿ ಏಕಕಂಠದಿಂದ ನಾವು ಮಹಾಜನ್ ಕಮಿಷನ್ನಿನ ತೀರ್ಪನ್ನು ಬಿಟ್ಟು ಒಂದು ಇಂಚು ಆಕಡೆಯಾಗಲೀ, ಈಕಡೆಯಾಗಲೀ ಸರಿಯುವುದಿಲ್ಲ ಎಂದು ನಿರ್ಣಯವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಏತಕ್ಕೆ ತಿಳಿಸಲಿಲ್ಲ ? ಈ ಬಗ್ಗೆ ಯಾವ ಕಾರ್ಯಕ್ರಮ ಇಲ್ಲಿನ ಮಂತ್ರಿಮಂಡಲ ಈವರೆಗೆ ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ನಾನು ಕೇಳಬೇಕಾಗಿದೆ. ಇದುವರೆಗೆ ದೆಹಲಿಯಲ್ಲಿರುವ ನಮ್ಮ ಮೈಸೂರು ರಾಜ್ಯದ ಪಾರ್ಲಿಮೆಂಟ್ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದು

ಕೊಂಡು ಈ ಬಗ್ಗೆ ಸರ್ಕಾರದವರು ಕ್ರಮತೆಗೆದುಕೊಳ್ಳದೇ ಏನು ಮಾಡುತ್ತಿದ್ದರು ಎಂದು ನಾನು ಕೇಳಬೇಕಾಗಿದೆ. ಭಾಷೆ ಮತ್ತು ಸಂಸ್ಕೃತಿಗಳ ಅಂತಃಕಲಹಗಳಿಗೋಸ್ಕರ ಉಪಯೋಗಿಸುವ ಈ ಬಂಡವಾಳಶಾಹಿ ಕೈಗೊಂಬೆಯಾಗಿ ದುಡಿಯುವ ನೀತಿಹೀನ, ತತ್ವಹೀನ, ಉದ್ದೇಶಹೀನ, ಕೃತಿಹೀನ. ಭಾಷಣಪ್ರೇಮಿ ಕಾಂಗ್ರೆಸಿಗರ ರಾಜ್ಯದಲ್ಲಿ ಸರ್ಕಾರವನ್ನು ಖಾಸಗಿ ಬಂಡವಾಳ ಬೆಳೆಸಲು, ಪರ್ಮಿಟ್ ರಾಜ್ಯ ಬೆಳೆಸಲು, ಲಂಚಗೊಳಿತನ ಬೆಳೆಸಲು, ಸ್ವಜನ ಪಕ್ಷಪಾತ, ಸ್ವಜಾತಿ ಪಕ್ಷಪಾತ ಬೆಳೆಸಲು ಹಂಬಲಿಸಿ ದುಡಿಯುತ್ತಿರುವವರಲ್ಲ ಭಾಷೆ, ಕಲೆ, ಸಂಸ್ಕೃತಿಗಳು ಮನುಷ್ಯನಲ್ಲಿ ನವಚೈತನ್ಯವನ್ನುಂಟುಮಾಡಿ ಒಂದುಗೂಡಿಸುವ ಶಕ್ತಿಗಳೆಂದು ನಂಬುವವರು ಯಾಗು? ಮಹಾರಾಷ್ಟ್ರದ ದೊಡ್ಡ ಜಮೀನ್ದಾರ ವರ್ಗ ತನ್ನ ಸ್ವಾರ್ಥಕ್ಕೋಸ್ಕರ ಕರ್ನಾಟಕದ ದೊಡ್ಡ ಜಮೀನುದಾರ ವರ್ಗದ ಜೊತೆಯಲ್ಲಿ ಹೋರಾಟ ನಡೆಸಿ ತನ್ನ ಸುಖಕ್ಕಾಗಿ ಕನ್ನಡದ ಇನ್ನಷ್ಟು ಹೆಚ್ಚು ಹಳ್ಳಿಗಳನ್ನು ಮರಾಠಿ ಭಾಗಕ್ಕೆ ಸೇರಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಇದೇ ತರಹ ಮರಾಠಿ ಕೆಲ ಹಳ್ಳಿಗಳಮೇಲೆ ಕನ್ನಡ ಸ್ವಾರ್ಥಿಗಳ ಕಣ್ಣು ಮರಾಠಿ ರೈತನಿಗೆ ಮಹಾರಾಷ್ಟ್ರದಲ್ಲಿ ಹಂಚಲಾದ ಭೂಮಿ ಎಷ್ಟು? ಗಾಂಧಿ ಶತಾಬ್ದಿಯಲ್ಲಿ ಎಷ್ಟು ಮರಾಠಿ ಅಥವಾ ಕನ್ನಡ ಹರಿಜನರನ್ನು ಸುಜಾತರೆನಿಸಿಕೊಳ್ಳುವವರು ಅವಮಾನುಷ ಹಿಂಸೆಗೆ ಬಲಿಕೊಡಲಿಲ್ಲ. ಎಷ್ಟು ಮರಾಠಿ ಹಾಗೂ ಕನ್ನಡ ಕಾರ್ಮಿಕರಿಗೆ ಈ ವರ್ಷ ಗ್ರಾಚುಟಿ ಬೆನಿಫಿಟ್ ಕೊಡಲಾಗಿದೆ. ಬೋನಸ್ ಕೊಡಲಾಗಿದೆ. ಡಿ.ಎ.ಲಿವಿಂಗ್ ಇಂಡೆಕ್ಸ್ ಜೊತೆಯಲ್ಲಿ ಹೊಂದಾಣಿಕೆಯಾಗುವಹಾಗೆ ಎಷ್ಟು ಕಾರ್ಮಿಕರಿಗೆ ಕೊಡಲಾಗಿದೆ. ಇವೆಲ್ಲ ಕೊಡದೆ ಇದ್ದಲ್ಲಿ ರೈತ, ಕಾರ್ಮಿಕ, ವಿದ್ಯಾರ್ಥಿ ಜಮೀನು ಇಲ್ಲದೆ ಉಳುವವನು, ಮಾತೃಭಾಷೆಯಲ್ಲಿ ಶಿಕ್ಷಣ ಹೊಂದದೆ ಇದ್ದವರು ಎಷ್ಟು ಜನ ಬಡವರು ಮಹಾರಾಷ್ಟ್ರದಲ್ಲಿದ್ದರೇನು, ಕರ್ನಾಟಕದಲ್ಲಿದ್ದರೇನು. ಇವರ ಹೆಸರಿನಲ್ಲಿ ಜಗಳ ಹಚ್ಚಿ ಇವರನ್ನು ಕಾದಾಡಿಸಿ ಇವರಿಂದ ರಕ್ತ ಹೀರಿಸುವ ಡಿವೈಡ್ ಅಂಡ್ ರೂಲ್ ಪಾಲಸಿ ಬಹಳ ಹಳೆಯದಾದರೂ ಇವೊತ್ತಿನ ಇಂಡಿಕೇಟ್ ಮತ್ತು ಸಿಂಡಿಕೇಟ್ ಎರಡೂ ಇದನ್ನೇ ನಂಬಿಕೊಂಡು ಅನುಸರಿಸಿಕೊಂಡು ಬರುತ್ತಿವೆ.

[MR. CHAIRMAN (SRI M. A. AMALORPAVAM) in the Chair]

3-30 P.M.

ಒಬ್ಬ ಅಗಸನಿಗೆ ಬಟ್ಟೆ ಒಗೆಯುವುದಕ್ಕೆ ಕೊಟ್ಟರೆ ಶುಭ್ರವಾಗಿ ಒಗೆಯುತ್ತಾನೆ. ಆದರೆ ನೀವು ಮಾತ್ರ ನಿಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಲಿಲ್ಲ. ನಮ್ಮ ಕನ್ನಡ ಹಳ್ಳಿಗಳು, ಪ್ರದೇಶಗಳು ಹೊರಗೆ ಹೋಗದಹಾಗೆ ನೋಡಿಕೊಳ್ಳಿರಿ ಅಂದರೆ, ನೀವು ನಿಮ್ಮ ಮಿನಿಸ್ಟ್ರಿ ಎಲ್ಲಿ ಉರುಳುವ ಸಮಯ ಬರುತ್ತದೋ ಎಂದು ಯಾವಾಗಲೂ ಹೆದರಿಕೊಂಡು ಬರೇ ಮಿನಿಸ್ಟ್ರಿ ಉರುಳಿಸುತ್ತಾರೋ, ಎಂಬ ಭಯಪಡುತ್ತಿದ್ದೀರಿ. ಈಗ ನಿಮ್ಮ ಮಿನಿಸ್ಟ್ರಿ ಉರುಳಿದರೂ ಚಿಂತೆ ಇಲ್ಲ, ಹೋದರೂ ಚಿಂತೆ ಇಲ್ಲ; ಆದರೆ ಕನ್ನಡ ನಾಡಿನ ಜನರಿಗೆ ಆಗುವಂತಹ ಅನ್ಯಾಯವನ್ನು ನೋಡುವುದಕ್ಕಾಗುವುದಿಲ್ಲ. ಇವತ್ತು ಎಷ್ಟೋ ಮಹಾರಾಷ್ಟ್ರದ ಜಿಲ್ಲೆಗಳಲ್ಲಿನ (ದೆಗಲೂರ—ಅಕ್ಕಲಕೋಟ) ಪ್ರದೇಶಗಳಲ್ಲಿನ ಜನತೆಗೆ ಕನ್ನಡ ಕಲಿಯುವ ಅಧಿಕಾರ ಕೊಟ್ಟಿಲ್ಲ. ಇಂಥ ಭಾಗಗಳಿಗೆ ಅನ್ಯಾಯವಾಗಿದೆ, ಇಂಥ ಭಾಗಗಳು ಹೊರಗಡೆ ಹೋಗುತ್ತಾ ಇದ್ದ ಸಮಯದಲ್ಲಿ ಮೈಸೂರು ಸರ್ಕಾರದವರು ಯಾವ ಕ್ರಮಗಳನ್ನೂ ತೆಗೆದುಕೊಳ್ಳಲಿಲ್ಲ. ಅವರ ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸಲಿಲ್ಲ. ಇದು ಬಹಳ ನಾಚಿಕೆಗೇಡಿನ ವಿಚಾರವಾಗಿದೆ. ಈಗ ಮುಖ್ಯಮಂತ್ರಿಯವರು ದೆಹಲಿಗೆ ಹೋಗಿ, ರಾಜ್ಯದ ಹಿತರಕ್ಷಣೆ ಮಾಡಿ ಎಂದು ಹೇಳಿ ಎಲ್ಲಾ ವಿರೋಧ ಪಕ್ಷದವರನ್ನು ಕೇಳುತ್ತಿದ್ದಾರೆ. ಇದು ಏನಾಗಿದೆ ಅಂದರೆ, ಬಸ್ ಹೋದಮೇಲೆ ಅದಕ್ಕೆ ಓಡಿದ ಹಾಗೆ ಆಗುತ್ತದೆ. ಇವತ್ತು ಸೋಶಿಯಲಿಸಂ ಎಂದು ಹೇಳಿಕೊಂಡು ಒಂದು ಪಕ್ಷದವರು ತಮ್ಮ ಕಡೆಗೆ ಕೆಲವರನ್ನು ಕರೆದುಕೊಳ್ಳುತ್ತಿದ್ದಾರೆ. ಸಿಂಡಿಕೇಟ್ ಗ್ರೂಪಿನವರು ಕೇಂದ್ರದವರ ಮೇಲೆ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ; ಇಂಡಿಕೇಟಿನವರು ಡಿಲ್ಲಿಯಿಂದ ನಿಮ್ಮ ಮೇಲೆ ಸೇಡು ತೀರಿಸುವುದಕ್ಕೆ ನೋಡುತ್ತಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ನಮ್ಮ ರಾಜ್ಯದ ಕನ್ನಡ ಭಾಷೆಯ ರಕ್ಷಣೆಗೆ ಯಾರೂ ಮನಸ್ಸು ಮಾಡಲಿಲ್ಲ. ಇದಕ್ಕೆ ಯಾರು ಕಾರಣರು ಅಂದರೆ ನಿಮ್ಮ ಕಾಂಗ್ರೆಸ್ಸಿಗರೇ, ಇಂಡಿಕೇಟಿನವರು ಮತ್ತು ಸಿಂಡಿಕೇಟಿನವರು. ಇವತ್ತು ಇಬ್ಬರೂ ನಮ್ಮ ರಾಜ್ಯದ ಹಿತರಕ್ಷಣೆಯನ್ನು ಮಾಡುತ್ತಾ ಇಲ್ಲ. ಆದರೆ ಒಂದು ಕಾಲ ಬರುತ್ತದೆ. ಇತಿಹಾಸಕಾರರು ನಿಮ್ಮನ್ನು ಮೋಸಗಾರರು ಎಂದು ಹೇಳಿ ಬರೆಯುತ್ತಾರೆ. ನಿಮ್ಮನ್ನು ಕನ್ನಡಿಗರಿಗೆ ಮೋಸ ಮಾಡುವಂತಹ ವಂಚಕರು ಎಂದು ಹೇಳುತ್ತಾರೆ. ಇಲ್ಲಿ ಸಿಂಡಿಕೇಟಿನವರನ್ನು ಏನಾದರೂ ಅಪೋಸಿಶನ್‌ದವರೂ ಕನ್‌ಸಾಲಿಡೇಟ್ ಮಾಡುತ್ತೇವೆಂದು ತಿಳಿದುಕೊಂಡರೆ ಅದು ತಪ್ಪು. ಕನ್ನಡ

(ಶ್ರೀ ವಿ. ಎನ್. ಪಾಟೀಲ್)

ಮಾತೃಭೂಮಿ, ಮಾತೃಭಾಷೆ, ಮಾತೃ ಸಂಸ್ಕೃತಿ. ಇವುಗಳ ಹಿತರಕ್ಷಣೆಗಾಗಿ ನಾವೂ ನ್ಯಾಯವಾದ ಹೋರಾಟ ಕೇಂದ್ರ ಸರ್ಕಾರದ ಪಕ್ಷಪಾತ ನೀತಿಯ ವಿರೋಧ ಹೂಡಬೇಕಾಗಿದೆ. ರಾಜಕೀಯ ಮತ ಭೇದಗಳು, ರಾಜ್ಯದ ಹಿತದೃಷ್ಟಿಯಿಂದ ಮರೆತು, ಒಂದಾಗಿ ರಾಜ್ಯದ ಹಿತರಕ್ಷಣೆ ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಭಾಷೆಯ ಈ ಒಂದು ವಿಷಯ ಬಿಟ್ಟು ಉಳಿದ ವಿಷಯಗಳಲ್ಲಿ ಇವರು, ಅಂದರೆ ಈ ಪ್ರತಿಗಾಮಿ ಸಿಂಡಿಕೇಟಿನವರು ಏನು ತಪ್ಪು ಮಾಡುತ್ತಿದ್ದಾರೆ, ಅನ್ಯಾಯ ಮಾಡುತ್ತಿದ್ದಾರೆ, ರೈತರ ವಿರುದ್ಧ ಏನು ದಬ್ಬಾಳಿಕೆ ಮಾಡುತ್ತಾರೆ, ಅವೆಲ್ಲದಕ್ಕೂ ನಾವು ಪ್ರತಿಭಟನೆ ಮಾಡುತ್ತೇವೆ ; ಖಂಡಿಸುತ್ತೇವೆ. ಈ ಸರ್ಕಾರ ಉರುಳಿಸುವುದೇ ನಮ್ಮ ಗುರಿ. ಇವರದ್ದು ಕೇವಲ ಒಂದು ಗಾಳಿ ಬುಗ್ಗೆ ಇದ್ದ ಹಾಗೆ. ಅದು ಗಾಳಿ ಜೋರಾಗಿ ಇದ್ದರೆ ಟಪ್ ಎಂದು ಒಡೆದು ಹೋಗುತ್ತದೆ.

ಇನ್ನು ಒಂದು ಫಂಡಮೆಂಟಲ್ ವಿಚಾರ. ಬೀದರ್ ಜಿಲ್ಲೆಯ ಕೆಲವು ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಏನೋ ಪಿತೂರಿ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಕೆಲವರು, ನಿಮ್ಮ ಹುಮ್ನಾಬಾದ್ ಕ್ಷೇತ್ರವು ಮಹಾರಾಷ್ಟ್ರಕ್ಕೆ ಹೋಗುತ್ತದೆಯೋ ಎಂದು ಕೇಳುತ್ತಿದ್ದಾರೆ. ಇದು ಕೇವಲ ನನ್ನ ಒಂದು ಕ್ಷೇತ್ರದ ಪ್ರಶ್ನೆಯಲ್ಲ; ಒಂದು ತಾಲ್ಲೂಕಿನ ಪ್ರಶ್ನೆಯಲ್ಲ; ಅಥವಾ ಒಂದು ಪಂಗಡದ ಪ್ರಶ್ನೆಯಲ್ಲ. ಬೀದರ್ ಜಿಲ್ಲೆಯಲ್ಲಿ 1956ರವರೆಗೆ ಕನ್ನಡ ಭಾಷೆಯು ಗುಲಾಮರ ಭಾಷೆ ಎಂದು ಹೇಳಿ, ಒತ್ತಾಯಪೂರ್ವಕವಾಗಿ ನಮ್ಮೆಲ್ಲರ ಮೇಲೆ ಮರಾಠಿ, ಹಾಗೂ ಉರ್ದು ಭಾಷೆಗಳನ್ನು ಹೇರಲಾಗಿದ್ದವು. ಮಾತೃ ಭಾಷೆ ಕಲಿಯುವ ಅಧಿಕಾರ ಕೂಡ ನಮ್ಮಿಂದ ಕಿತ್ತುಕೊಳ್ಳಲಾಗಿತ್ತು. ನಾವು ಬೀದರ್‌ದಿಂದ ಆರಿಸಿ ಬಂದಂತಹ ಆರು ಪ್ರತಿನಿಧಿಗಳಲ್ಲಿ ಒಬ್ಬರಿಗೂ ಕೂಡ ನಮ್ಮ ಮಾತೃ ಭಾಷೆಯಾದ ಕನ್ನಡದಲ್ಲಿ ಶಿಕ್ಷಣ ದೊರಕಿಲ್ಲ. ಕಾಂಗ್ರೆಸ್ಸಿಗರ ಅಂತಃಕಲಹ ಮತ್ತು ಸ್ವಾರ್ಥದಿಂದ ನಮಗೆ ಬರಬೇಕಾದ ಎಷ್ಟೋ ಭಾಗಗಳು ನಮಗೆ ಬರಲಿಲ್ಲ. ನ್ಯಾಯವಾಗಿ ಬಂದ ಭಾಗಗಳ ರಕ್ಷಣೆ ನಮ್ಮ ಕರ್ತವ್ಯವಾಗಿದೆ. ಅಲ್ಲಿ ಯಾರೂ ಅದನ್ನು ಕೇಳುವವರಿಲ್ಲ. ಅದಕ್ಕೆ ನಾನು ಕೇಳಿಕೊಳ್ಳುವುದೇನೆಂದರೆ, ಇವತ್ತು ಹಳೆಯ ಮೈಸೂರು, ಹೊಸ ಮೈಸೂರು, ಉತ್ತರ ಮೈಸೂರು, ದಕ್ಷಿಣ ಮೈಸೂರು ಎಂಬ ಭೇದವಿಲ್ಲದೆ ನೋಡಬೇಕು. ಕನ್ನಡ ಮಾತೃ ಭಾಷೆ ಎಲ್ಲೇ ಇದ್ದರೂ ಅದು ಒಂದಾಗಬೇಕು. ಒಂದಾಗಿದ್ದು ನಾವು ತಿರುಗಿ ಮತ್ತೆ ಒಡೆಯುವ ಯಾವ ಒಂದು ದುಃಸಾಹಸಕ್ಕೆ ಎಡೆ ಕೊಡಬಾರದು. ಇದು ರಾಜ್ಯದ ಪ್ರತಿಯೊಬ್ಬ ಪ್ರಗತಿಪರನ ಕರ್ತವ್ಯವಾಗಿದೆ.

ಇನ್ನೊಂದು ವಿಚಾರ. ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಬೀದರ್ ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಈಗಾಗಲೇ 7 ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಮತ್ತು ಆಂಧ್ರಕ್ಕೆ ಹಂಚಿಹೋಗಿ, 4 ತಾಲ್ಲೂಕುಗಳು ಮಾತ್ರ ಕರ್ನಾಟಕಕ್ಕೆ ಸೇರಿಸಲಾಗಿದೆ. ಈ ನಾಲ್ಕು ತಾಲ್ಲೂಕುಗಳಲ್ಲಿ ಮ್ಯಾಪ್ ನೋಡಿದರೆ, ಲಿಂಗ್ವಿಸ್ಟಿಕ್ ಕಂಟಿಗ್ಯುಟಿ ಎಷ್ಟು ಇದೆ ಎಂದು ತಿಳಿಯಬಹುದು. ನಾರಾಯಣ ಖೇಡ ಮತ್ತು ಜಹಿರಾಬಾದ್ ತಾಲ್ಲೂಕುಗಳಲ್ಲಿ 100ಕ್ಕಿಂತ ಹೆಚ್ಚು ಹಳ್ಳಿಗಳು ನಮ್ಮ ಕೈಬಿಟ್ಟು ಹೋಗಿವೆ. ಅದರ ಜೊತೆಗೆ ಆಡಳಿತ ದೃಷ್ಟಿ, ಆರ್ಥಿಕ ದೃಷ್ಟಿ, ಇವುಗಳನ್ನೂ ನೋಡಬೇಕು. ಯಾವ ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಹೇಳುತ್ತಾರೆ, ಅಲ್ಲಿ ಜಿಯಾಗ್ರಫಿಕಲಾಗಿ ನೋಡುವುದಾದರೆ, ಒಂದು ಭಾಷೆಯ ಹಳ್ಳಿಗಳು ಇನ್ನೊಂದು ಭಾಷೆಯ ಹಳ್ಳಿಯ ಮಧ್ಯದಲ್ಲಿ ಜೇಡಿಮೆ ಹುಳುವಿನ ಬಲೆ ನೇಯ್ದಂತೆ ಇದೆ. 5 ಹಳ್ಳಿಗಳಲ್ಲಿ ಮರಾಠಿ ಮಾತನಾಡುವವರು ಇದ್ದರೆ, 25 ಹಳ್ಳಿಗಳಲ್ಲಿ ಕನ್ನಡ ಮಾತನಾಡುವವರು ಇದ್ದಾರೆ. ಇದನ್ನು ಹೇಗೆ ವಿಂಗಡಿಸುತ್ತೀರಿ ? ಇವತ್ತು ಇಂಟರ್ ನ್ಯಾಷನಲ್ ಸಿಚುವೇಶನ್ನಿನಲ್ಲಿ ಬರ್ಲಿನ್ ಸಮಸ್ಯೆ ಬಂದು ಸೋಶಿಯಲಿಸ್ಟ್ ರಾಷ್ಟ್ರದ ಎದೆಯಲ್ಲಿ ಒಂದು ನಾಜಿ ಸಮಾಜ್ಯ ಶಾಂತಿ ಪಿತೂರಿಯಿಂದ ಬರ್ಲಿನ್ ನಗರವನ್ನು ಭಾಗ ಮಾಡಿ ಕ್ಯಾನ್ಸರ್ ಬಿತ್ತಿದ ವಿಷಯ ಹೇಗೆ ಇದೆ, ಅದೇ ರೀತಿ ಬೆಳಗಾಂನಲ್ಲೂ ಒಂದು ಸಮಸ್ಯೆಯನ್ನು ಉಂಟು ಮಾಡುತ್ತಿದ್ದಾರೆ. ರೈಲ್ವೆ ಹಳಿಯ ಈಚೆ ಕಡೆ ಕರ್ನಾಟಕ, ಆಚೆ ಕಡೆ ಮಹಾರಾಷ್ಟ್ರವೆಂದು ಸಾರಬೇಕಾದರೆ, ಇದಕ್ಕಿಂತ ದೊಡ್ಡ ರಾಜಕೀಯ ಅನ್ಯಾಯ, ಮೋಸ ಇನ್ಯಾವುದೂ ಆಗಲಾರದು. ರಾಷ್ಟ್ರದ ಎದುರಿಗಿರುವ ನಿರುದ್ಯೋಗ, ಆಹಾರ, ಶಿಕ್ಷಣ, ಆರೋಗ್ಯ, ಔದ್ಯೋಗೀಕರಣ, ವ್ಯವಸಾಯ ಕ್ರಾಂತಿ, ಕಾರ್ಮಿಕವರ್ಗಕ್ಕೆ ನ್ಯಾಯ, ಭೂಹೀನ ಕಾರ್ಮಿಕರಿಗೆ ಭೂಸ್ವಾಮಿತನ ಕೊಟ್ಟು ಉಳುವವನದೇ ಜಮೀನು ಎಂದು ಸಮಾನತೆ ತರುವ ಸಮಸ್ಯೆ ಇವೆಲ್ಲಾವುಗಳಿಂದ ಜನಸಾಮಾನ್ಯರ ಗಮನ ಭಾಷೆ ಕಲಹಗಳ ಕಡೆ ಎಳೆದರೆ ನೆರೆಹೊರೆಯ ಭಾಷೆಗಳ ರಾಜ್ಯದ ಜನತೆಯಲ್ಲಿ ವಿಷಮ ಸ್ಥಿತಿ ಉದ್ಭವಿಸುವ ಹಾಗೆ ಮಾಡುವುದರಿಂದ ಸಂತೋಷ ದೊರೆಯುವುದು ಬರೇ ಸ್ವಾರ್ಥ ಪ್ರತಿಗಾಮಿ ಸಮಾಜ ವಿರೋಧಿ ಬಂಡವಾಳ ಶಾಹಿಗಳಿಗೆ ಮಾತ್ರ ಹೊರತು, ಪುರೋಗಾಮಿ ಶಕ್ತಿಗಳಿಗೆ ಇದರಿಂದ ದೊಡ್ಡ ಹೊಡೆತ ಬೀಳುವುದು. ಎಸ್.ಆರ್.ಸಿ. ರಿಪೋರ್ಟ್ ನಂತರ ಮಾಡಿದ ಕಲಹಕ್ಕೆ

ಸ್ವಂತ ಕಾಂಗ್ರೆಸ್ಸಿನವರೇ ಮಹಾರಾಷ್ಟ್ರದವರ ಒತ್ತಾಯಕ್ಕೆ ಒಳಗಾಗಿ ರೀ ಓಪನ್ ಮಾಡಿದರು. ಮಹಾಜನ್ ಕಮಿಶನ್‌ನನ್ನು ಕನ್ನಡಿಗರು ಎಂದೂ ಕೇಳಲೇ ಇಲ್ಲ. ಮಹಾರಾಷ್ಟ್ರದವರ ಬೇಡಿಕೆಯಿಂದ ಬಂದ ಈ ಕಮಿಶನ್, ಸ್ವಂತ ಮಹಾರಾಷ್ಟ್ರದವರೇ ಇದು ಕೊನೆಯ ಕಮಿಶನ್, ಇದರ ನಿರ್ಣಯ ಕೊನೆಯದು ಎಂದು ಹೇಳಿ, ಬೇಡಿದ್ದೆಲ್ಲಾ ಸಿಕ್ಕಿಲ್ಲವೆಂದು ಈಗ ಹೊಸ ಕಲಹ ಹೂಡುವುದು, ಇದು ರಾಜಕೀಯ ಸ್ವಾರ್ಥದ ಒಂದು ರೂಪ. ಇವತ್ತು ಬೆಳಗಾಂವಿ ಎಂಥ ಒಂದು ನಗರದ ಒಂದು ಭಾಗ ಆಚೆಗೆ, ಒಂದು ಭಾಗ ಈಚೆಗೆ ಎಂದು ಹೇಳುತ್ತಿದ್ದಾರೆ. ಇವತ್ತು ಎಷ್ಟೋ ಸಂಸಾರಗಳಲ್ಲಿ ಗಂಡ ಕನ್ನಡ ಮಾತನಾಡುವವರಿದ್ದರೆ, ಹೆಂಡತಿ ಮರಾಠಿ ಮಾತನಾಡುವವರಿದ್ದಾರೆ. ಹೆಂಡತಿ ಕನ್ನಡ ಮಾತನಾಡುವವರಿದ್ದರೆ, ಗಂಡ ಬೇರೆ ಬೇರೆ ಭಾಷೆ ಮಾತನಾಡುವವರಾಗಿರುತ್ತಾರೆ. ಇವರನ್ನೆಲ್ಲಾ ಹೇಗೆ ವಿಂಗಡಣೆ ಮಾಡುತ್ತೀರಿ? ನಿಮ್ಮ ಇಂಡಿಕೇಟ್ ವರ್ಸಸ್ ಸಿಂಡಿಕೇಟ್ ರಾಜಕೀಯದಲ್ಲಿ ನಿಮ್ಮನ್ನು ಸೋಲಿಸಲು ಅವರು ಪಿತೂರಿ ನಡೆಸುತ್ತಿದ್ದಾರೆ, ಅವರನ್ನು ಸೋಲಿಸಲು ನೀವು ಪಿತೂರಿ ನಡೆಸುತ್ತಿದ್ದೀರಿ. ಹೀಗೆ ಅವರಮೇಲೆ ಇವರು, ಇವರಮೇಲೆ ಅವರು, ಎಂಬ ಈ ಒಂದು ಬಡಿದಾಟದಿಂದ ಒಂದು ಹೊಸರಾಜಕೀಯ ಕುತಂತ್ರದ ಒಳಸಂಚು ಕನ್ನಡಿಗರ ವಿರೋಧ ಮರಾಠಿಗರನ್ನು ಒಲಿಸಿಕೊಳ್ಳುವ ಆಟ ಹೂಡಿದ್ದು ಕಂಡುಬರುತ್ತದೆ. ಕರ್ಣಾಟಕ ರಾಜ್ಯದಲ್ಲಿ ಯಾರೂ ಇಂಥ ಅನ್ಯಾಯಗಳಿಗೆ ತಲೆಬಗ್ಗಿಸುವುದಿಲ್ಲ. ಮಹಾಜನ್ ವರದಿಯಲ್ಲಿ ತಪ್ಪು ದೋಷಗಳಿರಬಹುದು. ಆದರೆ ಅದನ್ನು ತನ್ನಿ ಎಂದು ಹೇಳಿದವರು ಯಾರು? ಅದನ್ನು ನೇಮಕ ಮಾಡುವಾಗ ಈಗ ಕಾಂಗ್ರೆಸ್ ಅಧ್ಯಕ್ಷರಾಗಿರುವಂತಹ ನಿಜಲಿಂಗಪ್ಪನವರು ನಿದ್ರೆ ಹೊಡೆಯುತ್ತಿದ್ದರೇನು? ಮಹಾಜನ್ ಕಮಿಶನ್ ಮಾಡಬೇಕೆಂದು ಕಾಂಗ್ರೆಸ್ ಸಮಿತಿ ನಿರ್ಣಯ ತೆಗೆದುಕೊಂಡಾಗ ಇವರು ಏನು ಮಾಡುತ್ತಿದ್ದರು? ನಿಮ್ಮ ಮೈಸೂರಿನ ಮುಖ್ಯಮಂತ್ರಿಯವರು ನಿದ್ರೆ ಹೊಡೆಯುತ್ತಿದ್ದರೆಂದು ಎಸ್. ಕೆ. ಪಾಟೀಲರವರೇ ಕೊಟ್ಟ ಹೇಳಿಕೆಯಿಲ್ಲವೇ? ಇಂಥ ದೇಶ ರಕ್ಷಣೆ ಮಾಡದಂತಹ ಜೀವಂತ ಹೆಣಗಳಿಗೆ ಬೆಲೆಕೊಟ್ಟದುದು ಬಹಳ ದುಃಖಕರವಾದ ಸಂಗತಿ. ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ಆಗ ಏನು ಮಾಡಿದರು? ಏಕೆ ಆಗ ಬಾಯಿ ಮುಚ್ಚಿಟ್ಟರು? ಮತ್ತು ಏಕೆ ಬಡಿದಾಟ ಮಾಡಲಿಲ್ಲ? ಬರೇ ಕಾಂಗ್ರೆಸ್ ಪಕ್ಷದಲ್ಲಿ ಒಡಕು ಬೇಡವೆಂಬ ದೃಷ್ಟಿಯಿಂದ ಕನ್ನಡಿಗರಿಗೆ ಮೋಸ ಮಾಡಲಿಲ್ಲವೇ?

Mr. CHAIRMAN.—The hon. Member may conlude his speech early.

Sri H. M. CHANNABASAPPA.—We have to sit at length for this. We have to make out a case best suited for Mysore. I appeal to you not to put time limit on this.

Sri S. S. ARAKERI.—I request the Chair to give more time to the Hon. Member who is coming from border District.

Sri B. P. KADAM.—How many days have been allotted for this?

Mr. CHAIRMAN.—That will be decided by the hon. Speaker.

Sri V. N. PATIL.—I have initiated the debate. I am coming from border area. I may kindly be given more time to justify the demands of the people of the border areas, for a peaceful co-existance, and for the finality of this ticklsh issue once and for all, and not to be kept open time and again to be used as a liner in the hands of selfish Syndicate and Indicate Congressmen, who have exercised inside tracking issues and make people to fight one another, in order to hide their failures.

ಈಗ ಒಂದು ವಿಚಾರವನ್ನು ನಾನು ಹೇಳುತ್ತಿದ್ದೆ. ಸೆಂಟ್ರಲಿನಲ್ಲೂ ನಿಮ್ಮ ಕಾಂಗ್ರೆಸ್ಸಿನವರ ಆಡಳಿತ ಇತ್ತು, ಮೈಸೂರಿನಲ್ಲೂ ನಿಮ್ಮ ಕಾಂಗ್ರೆಸ್ಸಿನವರ ಆಡಳಿತವೇ ಇತ್ತು. ನಿಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲೂ ಇರುವಾಗ ಅದನ್ನು ಬಗೆಹರಿಸುವಂತದ್ದು ನಿಮ್ಮ ಕೆಲಸ. ನಿಮ್ಮ ಪ್ರೆಶರ್ ಅವರಮೇಲೆ ಹಾಕಿ, ಕನ್ನಡಿಗರಿಗೆ ಅನ್ಯಾಯ ಮಾಡಬೇಡಿ ಎಂದು ಹೇಳಬೇಕಾಗಿತ್ತು. ಇವತ್ತು ಕನ್ನಡದ 10–20 ಹಳ್ಳಿಗಳು ಈ ಕಡೆ ಇರುವುದು, ಆ ಕಡೆ ಇದ್ದರೂ ಏನೂ ಅನಾಹುತವಾಗುವುದಿಲ್ಲ ಆದರೆ ಕನ್ನಡಿಗರಲ್ಲಿ ಮತ್ತು ಮರಾಠಿಯಲ್ಲಿ ಒಂದು ಮೈತ್ರಿಯ ಬಂಧುತ್ವ ಉಂಟಾಗಬೇಕು. ಆ

(SRI V. N. PATIL)

ದೃಷ್ಟಿಯಿಂದ ಇದನ್ನು ಆವಾಗಲೇ ಒಂದು ಕ್ಲೋಸ್ಡ್ ಚಾಪ್ಟರ್ ಎಂದು ಮಾಡಬೇಕಾಗಿತ್ತು. ಪುನಃ ಯಾಕೆ ಅದನ್ನು ತೆಗೆದರು ? ಮಾನ್ಯ ನಿಜಲಿಂಗಪ್ಪನವರು ತಮ್ಮ ಪಕ್ಷದ ಹಿತರಕ್ಷಣೆಯು ಕನ್ನಡ ನಾಡಿನ ಹಿತರಕ್ಷಣೆಗಿಂತ ಹೆಚ್ಚಿನದ್ದೆಂದು ಆಗ ತಿಳಿದಿದ್ದರು. ಆದಕ್ಕಾಗಿ ಅವರು ಆಗ ಬಾಯಿ ಮುಚ್ಚಿಕೊಂಡಿದ್ದರು. ಕಾಂಗ್ರೆಸ್ ಅಧ್ಯಕ್ಷರು ತಕ್ಕ ಕ್ರಮ ತಗೆದುಕೊಂಡು ಕನ್ನಡ ನಾಡಿನ ಹಿತ ರಕ್ಷಣೆಯನ್ನು ಕಾಪಾಡಿದ್ದರೆ ನಮಗೆ ನಿರಾಶೆಯಾಗುತ್ತಿರಲಿಲ್ಲ. ಅದನ್ನು ಅವರು ಮಾಡದೆ, ನಮ್ಮ ಕತ್ತನ್ನು ಕೊಯ್ಯುವ ಕೆಲಸವನ್ನು ಅವರಿಗೆ ಕೊಡುತ್ತಿದ್ದಾರೆ. ಮಹಾಜನ್ ಕಮಿಶನಿಗೆ ಮೊದಲು ವಿರೋಧಿಸಿದರೂ ಕೂಡ ಕನ್ನಡಿಗರೂ ಅದಕ್ಕೆ ಸಹಕಾರ ಕೊಟ್ಟಿರುವುದು ಒಂದೇ ಒಂದು ಉದ್ದೇಶ ದಿಂದ. ಆದರೂ ಕನ್ನಡ ಮರಾಠಿ ಇವೆರಡು ಭಾಷೆಯ ಜನತೆಯ ಮಧ್ಯ ಫ್ಯೂಡಲ್ ಮತ್ತು ಕಮ್ಯುನಲ್ ಫೋರ್ಸಸ್ ವಿಷಮತೆಯ ಕಲ್ಮಷ ಹುಟ್ಟಿಸಿದ ವಾತಾವರಣ ಬೇಗನೇ ದೂರವಾಗಿ ಸ್ಥಿರವಾದ ಶಾಂತಿ ಒಂದು ಸ್ಥಿರವಾದ ಮೈತ್ರಿ ಬೆಳೆದು ರಾಜ್ಯದಲ್ಲಿ ಕ್ಷುಲ್ಲಕ ಕಲಹಗಳಿಲ್ಲದೆ ರಾಜ್ಯದ ಜನತೆಯ ಗಮನ ತರಲೇಬೇಕಾದ ಸೋಶಿಯಲಿಸಂ ಕಡೆಗೆ ಸೆಳೆಯುವುದು ಸಾಧ್ಯವಾಗಬಹುದೆಂದು ಕೂಡಲೆ ಬೇಕಾದ ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಕಾರ್ಮಿಕ ರೈತಾಪಿಗಳನ್ನು ದಾಸ್ಯಜೀವನದಿಂದ ಬಂಧನ ಮುಕ್ತರನ್ನಾಗಿ ಮಾಡುವ ಸಲುವಾಗಿ, ರಾಜ್ಯದ ಪ್ರಗತಿಶೀಲ ಶಕ್ತಿಗಳನ್ನು ಒಂದುಗೂಡಿಸುವ ಸಲುವಾಗಿ ಮಾತ್ರ ಈ ಭಾಷೆ ಸಮಸ್ಯೆಯನ್ನು ಕೊನೆಗಾಣಿಸಲು ಮಹಾಜನ್ ಕಮಿಶನ್ ವರದಿಯನ್ನು ಹೇಗೆ ಬರಲಿ, ಏನೇ ಬರಲಿ, ಒಪ್ಪಲಾಗುವುದೆಂದು ಅನಂತ ಹೇಳಿಕೆಗಳನ್ನು ಕೊಡಲಾಗಿದ್ದ ವಿಷಯ ಇನ್ನೂ ಯಾರೂ ಮರೆತಿಲ್ಲ. ಜನತೆಯ ಜ್ಞಾಪನಾ ಶಕ್ತಿ ಇನ್ನೂ ಅಷ್ಟು ಅಶಕ್ತವಾಗಿಲ್ಲ. ನಮ್ಮ ಮರಾಠಿಯವರು ಬೇರೆ ಬಂದರೂ ಅವರ ಬಗ್ಗೆ ನಮಗೆ ಗೌರವವಿದೆ. ದ್ವೇಷವಿಲ್ಲ ಆದರಲ್ಲಿ ಎರಡು ಮೂರು ಫಂಡಮೆಂಟಲ್ ಇಷ್ಯೂಸ್ ಇರುತ್ತವೆ. ಮಾನ್ಯ ಶ್ರೀ ಕದಂ ಅವರು ಹೇಳಿದರು, ನ್ಯಾಯವಾಗಿ ಡೆಮೊಕ್ರಟಿಕ್ ಮಾತಿನಮೇಲೆ ನಿರ್ಣಯವಾಗಿದ್ದರೆ ಅದಕ್ಕೆ ಒಪ್ಪುತ್ತೇನೆಂದು. ಆದರೆ ಈಗ ಸಾಮ್ರಾಜ್ಯ ಶಾಹಿಗಳ ಪಿತೂರಿಯಿಂದಾಗಿ ಬರ್ಲಿನ್ ನಗರವನ್ನು ಎರಡು ತುಂಡು ಮಾಡಿದಂತೆ ಬೆಳಗಾಂನಲ್ಲಿ ಮಾಡಿದೆ. ಅದು ನ್ಯಾಯವೇ ಫಜಲಾಲಿ ಕಮಿಷನ್ನಿನವರು ವಿಲೇಜ್ as a unit ಅನ್ನುವುದನ್ನೇ ಮಾತ್ರ ಒಪ್ಪದಂತೆ it must be taken with other factors such as........ಲಿಂಗ್ವಿಸ್ಟಿಕ್ ಕಂಟಿಗ್ಯುಯಟಿ-ಜಿಯಾಗ್ರಫಿಕ್ ಕಾಂಟಿಗ್ಯುಯಟಿ ಇರಬೇಕೆಂದು ಹೇಳಿದ್ದಾರೆ. ಮುಖ್ಯವಾಗಿ There must be administrative convenience, Economic Viability ಎಂಬುದಾಗಿಯೂ ಹೇಳಿದ್ದಾರೆ. At the same time, peace should be uppermost in the minds of those who rules ಕೋಲಾರ ಜಿಲ್ಲೆಯಲ್ಲಿ ತೆಲಗು ಮಾತನಾಡುತ್ತಿದ್ದಂಥವರು ಈಗ ಮೈಸೂರು ರಾಜ್ಯದಲ್ಲಿದ್ದಾರೆ. ಕೋಲಾರದಲ್ಲಿರ ತಕ್ಕಂಥ ತೆಲಗು ಜನರು ಅಲ್ಲಿನ ಆ ಭಾಷೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

Sri B. P. KADAM.—May I know from the Hon. Member what exactly the stand of his party so far as the border issue is concerned, and may I know whether there are linguistic states in the Soviet Union and what is the principle on which demarcation line is drawn there ?

Sri V. N. PATIL.—Sir, since the Hon. Member has asked the question in English, I would like to reply him in English.

In Soviet Russia there are several nationalities and each nationality is independently based on a different language and dialect. But there the problem was solved not on the basis of struggle or agitation of the vested interests, but on the basis of a common urge unified and agreed programme of a people under socialist State free from exploitation and free from pressure taking what belonged to them and giving what belonged to another. That problem was very smooth during the period of comrade Lenin, the founder of first Socialist State, because there was no element of exploitation and equal rights of the other section were recognised as sacred. Whereas, now a linguistic agitation is being started in our State and by that the real beneficiaries are the upper

strata and vested interests in the name of Kannada and Marati and they are making common people to fight each other. The poorer section and working class and pesantry are least intersted in this game of the vested interest feudals and are not in the forefront to secure either this village this side or that village that side.

With regared to the stand of the party, I am not expected to reveal my party's stand to Sri Kadam, because those are in-camera discussions and could only be revealed to a person who belongs to our party and who is interested in our party. Resolutions are public documents and he knows about them. Sri Kadam is neither a member of our party nor a sympathiser. The stand of the Karanatak party is known to one and all that our party in Karnataka opposed the very appointment of Mahajan Commission as we thought it is reopening the settled issue, which will break pease and which will be an impediment in the way of establishing peace, Side tracking the working class and peasantry from their real struggle against the class enemy the exploiting land-lords and manopoly industrialists. Initially we opposed the appointment of one-man Commission. To maintain the status quo was the best remedy. It was Sri Nijalingappa, as the Congress President, who slept over the matter and allowed issues to be reopened on account of his surrendering habit, whereas our party has made it clear that either status quo ante prior to Mahajan Commission may be maintained in toto or when once the Commission is entrusted to give a finding, its award may be implemented as it will close the chapter once and for all and will help in maintaining and establishing peace progress between two fighting sections. It was very easy under socialism for the Russians to solve that problem and it will be equally easy for us hereto tosolve the problem the moment we establish socialism here and the moment we are under a Socialist State, as it will be state free from this rotten Syndicate gangsterism and silly Indicate adventurism. At that time, Sri Kadam as a representative of Maharashtra can take his rights without much fuss and as a representative of Kannadigas I can take what villages are to come to my language. The fuss and agitational attitude playing in the hands of feudal vested interests is on account of vested intrest both at the Centre and here. Once we come under socialism throughout India, the matter can be solved within a day or two.

It is not village as a unit that should be considered as the criteria, but along with it linguistic majority, economic viability and administrative convenience should be considered along with the historical cultural affinities. None of the Commissions *viz.*, the Dhar Commission, the Fazal Ali Commission and even the Mahajan Commission have accepted 'Village as a unit' as the only formula. 'Village as a Unit' was taken as a complimentary factor while deciding such issues. To settle such issues, we will have to look to all the principles in a democratic way without allowing onself to be swayed by emotions as shouting 'Shivaji Maharaj Kee Jai' or 'other Jais' without being permitted to be guided by linguistic Chauvinism it is better to understand the real difficulties and its implications in order to avoid bitterness that

(SRI V. N. PATIL)

helps only rural feudals and landlords in either side of the State to whip up mass frenzy for their selfish gains.

After all Mahajan has followed and walked into the footsteps and the beaten track that was followed by similar Commission which were predecessors to him. He has no other option under the given circumstances to stick to the terms of reference and the common followed principles. Even the latest Chandighar issue was not solved on village as a unit basis, otherwise Fazilka ought not to have gone to Hariyana. Ultimately it is the spirit of give and take that should guide the course of action for the common good. But now the so called oral latest proposals of the Central Government has opened a new Chapter in the so far calm and quiet atmosphere. As we were predicting here in Mysore State and watching keenly the possible fall of the Syndicate regime by trying to consolidate our position, avoiding open split in the S. V. D. which was more than split. It was for this purpose we united once again. But to my surprise, I dare say that by such oral proposals the Union Government or you may call the Indicate has played in the hands of the Syndicate Government here at Mysore. I could have never thought that the Indira Gandhi Government could play the chess in such an undeplomatic way to benefit the Syndicate Ministry here, may be to consolidate the Indicate position in Maharastra.

ಈಗ ಹೈದರಾಬಾದ್ ಕರ್ಣಾಟಕ ಹಾಗೂ ಬೆಳಗಾಂ ಬಾಂಬೇ ಕರ್ಣಾಟಕದ ಕೆಲವು ಕನ್ನಡ ಭಾಗಗಳು ಏನಿವಿಯೋ ಅವುಗಳ ಬಗ್ಗೆ ದೆಹಲಿಯ ಕಡೆ ಏನೇನು ಪ್ರೊಪೋಜಲ್ಸ್ ಆಗಿವೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಜೇಬಿನಲ್ಲಿ ಇಟ್ಟು ಕೊಂಡು ಕೂತರೆ ಅವರ ಕರ್ತವ್ಯ ಮಾಡಿದಂತಾಗುವುದಿಲ್ಲ. ಆ ಭಾಗಗಳನ್ನು ಕೊಡುವುದಕ್ಕೆ ನಾನು ಒಪ್ಪಲಿಲ್ಲವೆಂದು ಇಲ್ಲಿ ಆನೆಸ್ಟಾಗಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಆ ರೀತಿ ಮಾಡದೆ ಸುಮ್ಮನೆ ಅವರು ಇನ್ನೂ ರೈಟಿಂಗ್‌ನಲ್ಲಿ ಕೊಟ್ಟಿಲ್ಲವೆಂದು ಹೇಳುವುದು ಸರಿಯಲ್ಲ. ಅವರು ಒಂದು ವೇಳೆ ಪ್ರೊಪೋಜಲ್ಸ್ ಕೊಡದಿದ್ದರೆ, ಇವರು ತಮ್ಮ ಒಂದು ಜವಾಬ್ದಾರಿಯಿಂದ ಇಲ್ಲಿ ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡತಕ್ಕ ಒಂದು ಗಂಡಸುತನ, ಧೈರ್ಯ, ಎದೆಗಾರಿಕೆ ಪಡೆಯಬೇಕು. ಅದಿಲ್ಲದೆ ಏನೋ ಒಂದು ರೀತಿ ಆ ವಿಷಯವನ್ನು ಸಸ್‌ಪೆನ್ಸ್‌ನಲ್ಲಿ ಇಟ್ಟಿದ್ದಾರೆ. ಅದು ಸರಿಯಲ್ಲ. ಹೈದರಾಬಾದ್ ಕರ್ಣಾಟಕದ ಬಿದರ್ ಜಿಲ್ಲೆಯಲ್ಲಿ 11 ತಾಲ್ಲೂಕುಗಳ ಪೈಕಿ 4 ತಾಲ್ಲೂಕುಗಳು ಮಾತ್ರ ಬಿದರ್ ಕರ್ಣಾಟಕಕ್ಕೆ ಸೇರಿವೆ. 5–6 ಲಕ್ಷ ಜನಸಂಖ್ಯೆ ಇರಬಹುದು. ಬಿದರ್ ಜಿಲ್ಲೆಗೆ ಇಕನಾಮಿಕ್ ವೈಯಬಲ್ ಆಗಿ ಇರಬೇಕಾಗಿದೆ. ಆದರೂ ಅಲ್ಲಿ ದ್ವೇಷ ಹುಟ್ಟು ವುದಕ್ಕೆ ಕಾರಣವಾಗುತ್ತದೆ. ಅಲ್ಲಿ ಶಾಂತಿ ರಕ್ಷಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತೇನೆ. ಇವತ್ತು ಹೈದರಾಬಾದ್ ಕರ್ಣಾಟಕದಲ್ಲಿ ಯಾವ್ಯಾವ ಭಾಗಗಳು ಹೈದರಾ ಬಾದ್ ಸ್ಟೇಟಿನಿಂದ ಮರ್ಜ್ ಆಗಿ ಮೈಸೂರು ಕರ್ಣಾಟಕಕ್ಕೆ ಸೇರಿವೆ ಎಂಬುದನ್ನು ಹೇಳಿದ್ದಾರೆ. ಈಗಾಗಲೇ ಬಿದರ್ ಜಿಲ್ಲೆ, ಗುಲ್ಬರ್ಗ ಜಿಲ್ಲೆ ಮತ್ತು ರಾಯಚೂರಿನ ಕೆಲವು ಭಾಗಗಳ ಬಗ್ಗೆ ಹೈದರಾಬಾದ್ ಅಸೆಂಬ್ಲಿಯಲ್ಲಿ ಒಂದು ಯೂನಾನಿಮಸ್ ರಿಜಲ್ಯೂಷನ್ ಮೂಲಕ ಕರ್ಣಾಟಕಕ್ಕೆ ಸೇರಿಸಲಾಗಿದೆ. ಅದು ಕೇಂದ್ರ ಸರ್ಕಾರಕ್ಕೆ ಸಬ್‌ಮಿಟ್ ಆಗಿದೆ. ಪಾರ್ಲಿಮೆಂಟಿನಲ್ಲಿ ಅದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡಿದೆ. ಅದನ್ನು ಅವರು ಒಮ್ಮತದಿಂದ ಕನ್‌ಸಿಡರ್ ಮಾಡ ಬೇಕು. ಬಿದರ್ ಜಿಲ್ಲೆಯ ಕೆಲವು ತಾಲ್ಲೂಕುಗಳು, ಗುಲ್ಬರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳು, ಮತ್ತು ರಾಯಚೂರಿನ ಕೆಲವು ತಾಲ್ಲೂಕುಗಳು ಮೈಸೂರು ಕರ್ಣಾಟಕಕ್ಕೆ ಸೇರಿವೆಯೆಂದು ಹೇಳುವಾಗ ಅದರ ಬಗ್ಗೆ ಈಗಿನ ಸಂದರ್ಭದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಇಂಡಿಕೇಟ್ ಸರ್ಕಾರ ದೆಹಲಿಯಲ್ಲಿದ್ದರೂ ಅವರಿಗೂ ಅಧಿಕಾರವಿಲ್ಲ. ಸಿಂಡಿಕೇಟ್ ಸರ್ಕಾರಕ್ಕೂ ಅಧಿಕಾರವಿಲ್ಲ. ಆಗ ಕಾಂಗ್ರೆಸ್ ಸಂಸ್ಥೆಗೆ ಯಾರಾದರೂ ಚಿತಾವಣಿ

ಮಾಡುತ್ತಾರೆ. ಫಜಲಾಲಿ ಕಮಿಷನ್ನಿನವರು ಲಿಂಗ್ವಿಸ್ಟಿಕ್ ಕಂಟಿಗ್ಯುಯಟಿ, ಜಿಯಾಗ್ರಫಿಕ್ ಕಂಟಿಗ್ಯುಯಟಿ ಮತ್ತು ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್, ಇಕನಾಮಿಕ್ ವಯಬಿಲಿಟಿಗಳಿಗಾಗಿ ಬಹಳ ಮಹತ್ವವನ್ನು ಕೊಟ್ಟಿದ್ದರು. ಆ ರೀತಿ ಇದ್ದ ಕಾರಣವೇ ಇವತ್ತೂ ಕೋಲಾರ ಜಿಲ್ಲೆಯಲ್ಲಿ ಪ್ರಿಡಾಮಿನೆಂಟ್ಲಿ ತೆಲುಗು ಭಾಷೆ ಇದ್ದರೂ ಕೂಡ ನಮ್ಮ ಕನ್ನಡ ಬಾಂಧವರು ಅವರ ಜೊತೆಯಲ್ಲಿ ಬಹಳ ಚೆನ್ನಾಗಿದ್ದಾರೆ. ಅಲ್ಲಿ ಈಗ ತೆಲುಗು ಮತ್ತು ಕನ್ನಡ—ಹೀಗೆ ಎರಡು ಭಾಷೆಯಲ್ಲಿ ಶಿಕ್ಷಣವಿದ್ದು ಶಾಂತ ವಾತಾವರಣ ಮತ್ತು ಅಲ್ಲಿನ ಜನತೆಗೆ ಸವಲತ್ತಿನ ಅಡ್ಮಿನಿಸ್ಟ್ರೇಷನ್ ಇರುತ್ತದೆ. ಬೆಳಗಾಂನಲ್ಲಿ ಮರಾಠಿಯವರಿಗೆ ಅನ್ಯಾಯ ಮಾಡಿದಂತೆ ಯಾವ ತರಹದಲ್ಲಿಯಾಗಲೀ ಕೋಲಾರದಲ್ಲಿ ತೆಲುಗುಭಾಷೆ ಮಾತನಾಡುವ ನಮ್ಮ ಕನ್ನಡ ಬಾಂಧವರಿಗೆ ಮಾಡದೆ ನ್ಯಾಯವನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಈ ಸಭೆಯ ಗಮನಕ್ಕೆ ಎರಡು ವಿಷಯಗಳನ್ನು ತರುತ್ತಿದ್ದೇನೆ. ಇವತ್ತು ಚಂಡೀಗಡವನ್ನು ಪಂಜಾಬಿಗೆ ಕೊಟ್ಟಿದ್ದಾರೆ. ಫಜಿಲ್ಕಾವನ್ನು ಹರಿಯಾಣಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಯಾವ ಮೂಲ ತತ್ವ ಇದೆಯೆಂದು ನಾನು ಕೇಳುತ್ತೇನೆ. ವಿಲೇಜ್ ಒಂದು ಯೂನಿಟ್, ಲಿಂಗ್ವಿಸ್ಟಿಕ್ ಯೂನಿಟ್ ಎಂಬುದಾಗಿ ತೆಗೆದುಕೊಂಡರೆ ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಮಾತ್ರ ಮುಖ್ಯವೆಂದು ಗಮನದಲ್ಲಿಡಲಿಲ್ಲವೇ? ಒಂದು ಕಡೆ ಸಾಯುವುದಕ್ಕೂ ತಯಾರು, ಇನ್ನೊಂದು ಕಡೆ ಕೊಲ್ಲುವುದಕ್ಕೂ ತಯಾರು. ಆದ್ದರಿಂದ ಬರೀ ಶಾಂತ ರಕ್ಷಣೆಗಾಗಿ ಅಲ್ಲಿ ತರಬೇಕಾದರೆ ಈ ರೀತಿಯಾಗಿ ವಿಲೇಜ್ ಯೂನಿಟ್ ಅಥವಾ ಲಿಂಗ್ವಿಸ್ಟಿಕ್ ಕಂಟಿಗ್ಯುಯಟಿ ನೋಡಿದರೆ ಅದು ಸರಿಹೋಗುವುದಿಲ್ಲ. ಶಾಂತಿಯಿಂದ ನ್ಯಾಚುರಲ್ ಡೆವಲಪ್‌ಮೆಂಟನ್ನು ನೋಡಬೇಕಾಗುತ್ತದೆ. ಅದಕ್ಕೆ ಅವರು ಒಪ್ಪಲಿಲ್ಲ. ಎಷ್ಟೋ ಕಾಲದಿಂದಲೂ ನಮ್ಮ ಮಹಾರಾಷ್ಟ್ರದವರು ಪಾಠಸ್ಕರ್ ಫಾರ್ಮುಲವೆಂದು ಹೇಳುತ್ತಿದ್ದರು. ಆಂಧ್ರದಿಂದ 25-34 ಹಳ್ಳಿಗಳ ಪ್ರಶ್ನೆ ಸಣ್ಣ ಪ್ರಶ್ನೆ ಇದ್ದು ಉಭಯಪಕ್ಷದವರೂ ಅಂದರೆ ತಮಿಳುನಾಡು ಮತ್ತು ಆಂಧ್ರಪ್ರದೇಶಗಳು ಒಪ್ಪಿದುದಾದರಿಂದ ಹಳ್ಳಿಗೆ ಘಟಕವೆಂದು ಹಿಡಿಯಲಾಯಿತು. ಇದು ಹೇಗಿದೆಯೆಂದರೆ, ಕೋಲು ಮುರಿಯಬಾರದು, ಹಾವು ಸಾಯಬಾರದೆಂಬಂತಿದೆ. ಆದರೆ ಪಾಠಸ್ಕರ್ ಫಾರ್ಮುಲದಲ್ಲಿ ಏನು ಹೇಳಿದ್ದಾರೆ ಆ ಒಂದು ನೀತಿಯನ್ನು ಎಲ್ಲ ಕಡೆಗಳಲ್ಲಿಯೂ, ಎಲ್ಲ ಕಮಿಷನ್ನುಗಳು ಒಪ್ಪಿಲ್ಲ. ಇವರು ಅದನ್ನು ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಪ್ರಾಕ್ಟಿಕಲ್ಲಾಗಿ ಆ ಮೆಥಡ್ಸನ್ನು ಜಾರಿಗೆ ತರಬೇಕು. ಬೇರೆ ಮೆಥಡ್ಸನ್ನು ಜಾರಿಗೆ ತರುವುದರಿಂದ 'ಚ' ಏನೂ ನಡೆಯುವುದಿಲ್ಲ. ಇದರ ಬಗ್ಗೆ ನಾನು ಒಂದು ದೊಡ್ಡ ಅಲಿಗೇಷನ್ ತರಬೇಕೆಂದಿದ್ದೇನೆ. ಮಾನ್ಯ ಶ್ರೀ ವೀರೇಂದ್ರಪಾಟೀಲ ಅವರ ಮನಸ್ಸಿನಲ್ಲಾಗಲೀ, ಮೈಸೂರು ಸರ್ಕಾರದ ಮನಸ್ಸಿನಲ್ಲಾಗಲೀ ಈ ಸಮಸ್ಯೆಯನ್ನು ಬೇಗನೆ ಬಗೆಹರಿಸುವುದಕ್ಕಾಗುವುದಿಲ್ಲ. ಯಾರೋ ಹೇಳಿದರು, ಇಂಡಿಕೇಟ್ ಮತ್ತು ಸಿಂಡಿಕೇಟ್ ಒಂದಾಗಿ ಹೇಗೆ ಬೆಳೆಯುತ್ತದೆಂದು. ಅದನ್ನು ಅಪೊಜಿಷನ್ ಅವರು ಕುರಿತು ಹೇಳುವುದಕ್ಕೆ ಹೇಗೆ ಬರುತ್ತದೆ? ನಾವು ಈ ಹೌಸಿನಲ್ಲಿ ಅವರ ತಪ್ಪುಗಳನ್ನು ಬೈಲಿಗೆ ಎಳೆದರೆ ಆಗ ಸೂಕ್ಷ್ಮವಾದ ಒಳ್ಳೆಯ ಸಲಹೆಗಳನ್ನು ಕೊಡುವುದಕ್ಕೆ ಸಾಧ್ಯವಿದೆ. ಆಗ ಸ್ಟೇಟ್ ಇಂಟರೆಸ್ಟ್ ಬರುತ್ತದೆ. ಆಗ ಅಪೊಸಿಷನ್ ಅವರು ನಮ್ಮ ಜೊತೆಗೆ ಬರುತ್ತಾರೆಂದು ಹೇಳುವ ಒಂದು ನೀತಿಯನ್ನು ಬಿಡಬೇಕು. ಆದರೆ ಮೂರು ತಿಂಗಳಿಗೊಂದು ಸಾರಿ ಸ್ಟೇಟ್ ಇನ್‌ಡೇಂಜರ್ ಎಂಬುದಾಗಿ ಅವರು ಹೇಳುವಾಗ ಕುರಿ ಹಿಂಡಿನಂತೆ ನಾವೂ ಅಪೊಜಿಷನ್ ಪಕ್ಷಗಳಲ್ಲಿ ಅವರ ಜೊತೆಯಲ್ಲಿ ಬರುತ್ತೇವೆಂದು ತಿಳಿದರೆ ಅದು ಶುದ್ಧ ತಪ್ಪು, ಹುಚ್ಚು ಭ್ರಮೆ ಎಂದು ಊಹಾಪೋಹವಾಗಿ ನಾವು ಹೇಳಬಯಸುತ್ತೇನೆ. ನಾನು ಈ ಮನೆಯ ಎದುರಿಗೆ 146ನೇ ಕಲಂನ ಪ್ರಕಾರ ಈ ಗೊತ್ತುವಳಿ ತಂದಿದ್ದ ಮುಖ್ಯ ಕಾರಣ ಕೂಲಂಕಷವಾಗಿ ಸವಿಸ್ತಾರವಾಗಿ ಈಗ ರಾಜ್ಯದ ಎದುರಿಗೆ ಉದ್ಭವಿಸಿರುವ ಸಮಸ್ಯೆ ಚರ್ಚೆಯಾಗಲೇ ಬೇಕು. ನಾವು ನಿರ್ಣಯಗಳನ್ನು ಕೈಕೊಳ್ಳಬೇಕು. ಹಾಗೂ ಯಾವುದೇ ನಿರ್ಣಯ ಆತುರದಿಂದ ತಗೊಳ್ಳದೆ ಪೂರ್ತಿ ಚರ್ಚೆಯಾಗಿ ಈ ಸನ್ನಿವೇಶದಲ್ಲಿ ನೀಚವಾದ ಗಂಡಾಂತರ ನಮ್ಮ ರಾಜ್ಯಕ್ಕೆ ಎಷ್ಟು, ಸಿಂಡಿಕೇಟಿನ ಸ್ವಾರ್ಥ ಎಷ್ಟಿದೆ ಹಾಗೂ ಇಂಡಿಕೇಟಿನವರು ಆಡುತ್ತಿರುವ ಜೂಜಾಟ, ಆ ಜೂಜಾಟದಲ್ಲಿ ಬೇರೆಬೇರೆಯಾಗಿ ಹಂಚಿಹೋಗಿರುವ ಕನ್ನಡ ಪ್ರದೇಶಗಳು. ಅದರ ಹಿತರಕ್ಷಣೆ, ಇದರಲ್ಲಿ ಹೀರೋ ಆಗಲು ನಡೆಸಿರುವ ಪ್ರಯತ್ನಗಳು ಶ್ರೀ ನಿಜಲಿಂಗಪ್ಪನವರ ಪಾತ್ರ, ಶ್ರೀ ವೀರೇಂದ್ರ ಪಾಟೀಲರ ಪಾತ್ರ, ಶ್ರೀಮತಿ ಇಂದಿರಾ ಗಾಂಧಿಯವರ ಪಾತ್ರ, ಚವಾಣ್ ಅವರ ಪಾತ್ರ ಇವೆಲ್ಲವನ್ನೂ ಬೈಲಿಗೆಳೆದವು. ಮೂರ್ದಾಬಾದ್ ಎನ್ನುವ ನಮ್ಮಿಂದ ಇಂಡಿಕೇಟ್ ಜಿಂದಾಬಾದ್ ಎನ್ನಿಸಿಕೊಳ್ಳುವ ಮೂರ್ಖತನ ಬಿಡಬೇಕೆಂದು ಚಿತಾವಣೆ ಕೊಟ್ಟು, ಬಂದ ಬಂದ ಸಮಸ್ಯೆಗಳಿಗೆ ನಿಮ್ಮ ನಡೆನುಡಿಗಳು ನೋಡಿ ಮಾತ್ರ ನಮ್ಮ ನಿಲುವೂ ನಿರ್ಧಾರ ಮಾಡುವೆವು ಎಂದು ಹೇಳಬಯಸುತ್ತೇನೆ.

ಅದಕ್ಕೆ ನಾನು ಸರಕಾರದವರಿಗೆ ಒಂದು ವಿಷಯ ತಿಳಿಸಬೇಕೆಂದಿದ್ದೇನೆ. ಈ ರಾಜ್ಯದ ಜನತೆ ಕುರಿ ಹಿಂಡು ಅಲ್ಲ. ನೀವೇನಾದರೂ ಕೇಂದ್ರದ ಪ್ರೆಜರಿಗೆ ಒಳಗಾಗಿ ನಿಮ್ಮ ಪಾರ್ಟಿ

(SRI V. N. PATIL)

ಯಾವರು ಕೇಂದ್ರಕ್ಕೆ ಸರಂಡರ್ ಆದರೆ ಮತ್ತು ಕೇಂದ್ರಸರಕಾರದವರ ಗುಡ್ ಬುಕ್ಸ್‌ನಲ್ಲಿ ಇರಬೇಕು ನಿಮ್ಮವರನ್ನು ಅಲ್ಲಿ ಯಾರಾದರೂ ಮಂತ್ರಿಮಂಡಲದಲ್ಲಿ ತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾರದ ಪ್ರಭಾವಕ್ಕೆ ಮಣಿಯುವುದಾದರೆ ಬೆಳಗಾಂ ಮತ್ತು ಬೀದರ್ ಜನತೆ ಕುರಿಗಳು ಅಲ್ಲ. ಅವರು ಒಂದು ಜಿಲ್ಲೆಯನ್ನೂ ಕೂಡ ಬಿಟ್ಟು ಕೊಡುವುದಕ್ಕೆ ತಯಾರು ಇಲ್ಲ. ಅಂತಹ ಸನ್ನಿವೇಶ ಬಂದರೆ ಅದನ್ನು ಎದುರಿಸುವುದಕ್ಕೆ ತಯಾರು ಇದ್ದಾರೆ ಎಂದು ತಿಳಿದುಕೊಳ್ಳಬೇಕು. ನಮಗೆ ಈವೊತ್ತಿನ ದಿವಸ ರಾಜ್ಯ ಸರಕಾರದಮೇಲೆ ಒಂದು ಸಂಶಯ ಬರುತ್ತಾ ಇದೆ. ಅವರು ಕೇಂದ್ರ ಸರಕಾರಕ್ಕೆ ಸರಂಡರ್ ಆಗಬಹುದು ಎಂದು. ಈಗ ಮೈಸೂರಿನ ಹಕ್ಕುಬಾಧ್ಯತೆಗೆ ಧಕ್ಕೆ ಬಂದಿದೆ. ಕಾಸರಗೋಡನ್ನು ರಕ್ಷಣೆ ಮಾಡಬೇಕೆಂದು ನಿಮ್ಮನ್ನು ಕೂಗಿ ಕೇಳುತ್ತಿದ್ದಾರೆ. ನೀವು ಆ ರೀತಿ ಕಾಸರಗೋಡಿನ ಜನರನ್ನು ರಕ್ಷಣೆ ಮಾಡದೆ ಇದ್ದರೆ ನಿಮ್ಮನ್ನು ಮೋಸಗಾರರು, ವಂಚಕರು, ದ್ರೋಹಿಗಳು ಎಂದು ಕರೆಯಬೇಕಾಗುತ್ತದೆ. ಮಹಾಜನ್ ಕಮಿಷನ್ ವರದಿ ಬಿಟ್ಟು ಒಂದು ಇಂಚು ಭೂಮಿಯೂ ಆಚೆಗೆ ಹೋಗುವುದಕ್ಕೆ ನಾವು ತಯಾರು ಇಲ್ಲ. ಕೇಂದ್ರಸರಕಾರದವರು ಎಷ್ಟೇ ಪ್ರಷರ್ ಹಾಕಿದರೂ ನೀವು ವೀರೇಂದ್ರ ಪಾಟೀಲರು ಗಂಡಸಿನಂತೆ ವರ್ತಿಸಬೇಕು. ಕರ್ನಾಟಕದ ಹಿತಕ್ಕೆ ಧಕ್ಕೆ ಬಂದಾಗ ನೀವು ಎನ್ ಬ್ಲಾಕ್ ಆಗಿ ರೆಸಿಗ್‌ನೇಷನ್ ಕೊಡುವುದಕ್ಕೆ ತಯಾರು ಇದ್ದೀರಾ ಎಂದು ಕೇಳುತ್ತೇನೆ. ಜೊತೆಗೆ ನನ್ನ ಮಿತ್ರರೂ ರಸಿಗ್‌ನೇಷನ್ ಕೊಡುವುದಕ್ಕೆ ತಯಾರಾಗಿದ್ದಾರೆಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ಮತ್ತೊಂದು ಸಾರಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—I now call upon Hon. Member Sri Nanje Gowda to move his substitute motion.

Sri H. N. NANJE GOWDA.—Sir, I beg to move the following substitute motion :

"That this House is of opinion that no change in the boundar.es of Mysore State fixed in the S.R.C. Act, 1956 should be made except for such minor changes, as may be found necessary, by the Southern Zonal Council."

Mr. CHAIRMAN.—Motion moved :

"That this House is of opinion that no change in the boundaries of Mysore State fixed in the S.R.C. Act, 1956, should be made except for such minor changes, as may be found necessary, by the Sothern Zonal Council."

†ಶ್ರೀ ಎಂ. ನಾಗಪ್ಪ (ರಾಯಚೂರು).—ಈ ದಿವಸ ಮೈಸೂರು ರಾಜ್ಯದ ಅಥವಾ ಕರ್ನಾಟಕ ರಾಜ್ಯದ ಒಂದು ಪರೀಕ್ಷೆಯ ಸಮಯ ಎಂದು ನಾನು ಭಾವಿಸಿದ್ದೇನೆ. ಈಗ ನಾವು ಮಹಾಜನ್ ಕಮಿಷನ್ ರಿಪೋರ್ಟ್ ಏನಿತ್ತು, ಫಜಲ್ ಅಲಿ ಕಮಿಷನ್ ರಿಪೋರ್ಟ್ ಏನಿತ್ತು, ಪಾಟಸ್ಕರ್ ಸೂತ್ರಗಳು ಏನಿತ್ತು ಎಂದು ವಿಚಾರ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಈಗಾಗಲೇ ಈ ಮಾನ್ಯ ಸಭೆ ಒಂದು ನಿರ್ಣಯವನ್ನು ಕೈಗೊಂಡಿದೆ. ಆ ನಿರ್ಣಯದ ಪ್ರಕಾರ ಮಹಾಜನ್ ಮಾಡಿದಂತಹ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಒಂದು ನಿರ್ಣಯ ಈ ಸಭೆ ಈಗಾಗಲೇ ಮಾಡಿದೆ. ಅದನ್ನು ಕೇಂದ್ರಸರಕಾರಕ್ಕೂ ಕಳುಹಿಸಿಕೊಟ್ಟಿದೆ. ಆದರೆ ಈ ದಿವಸ ಬಂದಂತಹ ಒಂದು ಸಂದಿಗ್ಧ ಪರಿಸ್ಥಿತಿ ಎಂದರೆ ಈ ಕಾಂಗ್ರೆಸ್ಸಿನಲ್ಲಿ ಬಂದ ಬಿರುಕು ಅದೇ ಕರ್ನಾಟಕ ರಾಜ್ಯಕ್ಕೆ ಬಿರುಗಾಳಿಯಾಗಿ ಬೀಸುತ್ತಿದೆ ಎನ್ನುವ ಮಾತನ್ನು ನಾವು ವಿಚಾರ ಮಾಡಬೇಕಾಗಿದೆ. ನಾವು ಇವೊತ್ತು ಸಿಂಡಿಕೇಟ್ ಇದಕ್ಕೆ ಕಾರಣ, ಇಂಡಿಕೇಟ್ ಇದಕ್ಕೆ ಕಾರಣ ಎನ್ನುವ ವಿಷಯವನ್ನು ವಿಚಾರಿಸದೆ ಕೆಲವು ವಿಷಯಗಳನ್ನು ನಾವು ಪರಿಶೀಲಿಸಬೇಕಾಗುತ್ತದೆ. ಮೊದಲನೆಯದಾಗಿ ಈ ಮಹಾಜನ್ ಕಮಿಷನ್ ಅಸ್ತಿತ್ವಕ್ಕೆ ಬರುತ್ತಾ ಇರಲಿಲ್ಲ. ಈ ಮಹಾಜನ್ ಕಮಿಷನ್ ಅಸ್ತಿತ್ವಕ್ಕೆ ಬರಬೇಕಾದರೆ ಅದಕ್ಕೆ ಮೂಲ ಕಾರಣಭೂತರು ಈಗ ಇರತಕ್ಕ ಸಿಂಡಿಕೇಟ್ ಅಧ್ಯಕ್ಷರಾದಂಥ ನಿಜಲಿಂಗಪ್ಪನವರು. ನಿಜಲಿಂಗಪ್ಪನವರು ಹೆಸರುವಾಸಿ

ಯಾಗಿದ್ದಾರೆ. ಕರ್ಣಾಟಕ ರಾಜ್ಯವನ್ನು ಸ್ಥಾಪನೆ ಮಾಡುವುದರಲ್ಲಿ ಅವರದ್ದು ಮೇಲುಕೈ ಆಗಿತ್ತು. ಈ ದಿವಸ ನಿಜಲಿಂಗಪ್ಪನವರು ಕರ್ಣಾಟಕ ರಾಜ್ಯವನ್ನು ವಿಂಗಡಣೆಮಾಡಲು ಹೊರಟಿದ್ದಾರೆ ಎನ್ನುವ ಭಾವನೆ ನಮ್ಮಲ್ಲಿ ಬರುತ್ತಿದೆ. ಅವರ ಹೆಸರನ್ನು ಸುವರ್ಣಾಕ್ಷರದಲ್ಲಿ ಬರೆಯಬೇಕು ಎಂದು ಈವರೆಗೆ ಇತಿಹಾಸಕಾರರಿಗೆ ಇತ್ತು. ಮುಂದೆ ವಿಚಾರ ಮಾಡತಕ್ಕಂಥ ಇತಿಹಾಸಕಾರರಿಗೆ ಅವರ ಹೆಸರನ್ನು ಕಪ್ಪು ಅಕ್ಷರಗಳಲ್ಲಿ ಬರೆಯಬೇಕು ಎನ್ನುವ ಉದ್ದೇಶ ಬರುತ್ತದೆ. ಇದಕ್ಕೆ ಎರಡು ಮೂರು ಕಾರಣಗಳನ್ನು ತೋರಿಸುತ್ತೇನೆ. ಮೊದಲನೆಯ ಕಾರಣ ಅವರು ಮಹಾಜನ್ ಕಮಿಷನ್ ನೇಮಕಕ್ಕೆ ಮುಂಬಯಿ ಅಧಿವೇಶನದಲ್ಲಿ ಒಪ್ಪಿಗೆ ಕೊಟ್ಟದ್ದು. ಆ ದಿವಸ ಮಹಾಜನ್ ಕಮಿಷನ್ ನೇಮಕದ ಬಗ್ಗೆ ಈ ಮಾನ್ಯ ಸಭೆಯು ಮತ್ತು ರಾಜ್ಯದ ಜನತೆಯನ್ನು ಅವರು ಒಪ್ಪಿಸಿದರು. ಮಹಾಜನ್ ರಿಪೋರ್ಟು ಬಂದನಂತರ ಅನೇಕ ಪಕ್ಷಗಳಲ್ಲಿ ಅದರ ಬಗ್ಗೆ ಭಿನ್ನಾಭಿಪ್ರಾಯ ಇತ್ತು. ಮಹಾಜನ್ ಕಮಿಷನ್‌ರವರು ಕೊಟ್ಟಂಥ ರಿಪೋರ್ಟನ್ನು ನಾವು ಒಪ್ಪಬಾರದು? ನಮಗೆ ಮಹಾರಾಷ್ಟ್ರ ಏರಿಯಾದಿಂದ ಬರತಕ್ಕ ಭಾಗ ಏನಿದೆ ಅದನ್ನು ನಾವು ಕೇಳಬೇಕು, ಈಗ ಕೊಟ್ಟಿರುವುದು ಸರಿಯಾದದ್ದು ಅಲ್ಲ, ಈಗ ಆದವಾನಿ, ಆಲೂರು, ರಾಯದುರ್ಗ ಕಾಸರಗೋಡು, ತಾಳವಾಡಿ ಅನೇಕ ವಿಷಯಗಳು ಚರ್ಚಾಸ್ಪದವಾಗಿಯೇ ಉಳಿದಿವೆ: ಎಲ್ಲಾ ವಿಷಯಗಳೂ ಸಹ ಒಂದೇ ಸಾರಿ ನಿರ್ಣಯ ಆಗಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಅವನ್ನು ನಾವು ಚರ್ಚಿಸಿದೆವು. ಆದರೆ ಈ ಸಭೆಯಲ್ಲಿ ಒಂದು ನಿರ್ಣಯ ಪಾಸ್ ಆದಾಗ ಈ ಸಭೆಗೆ ಆಶ್ವಾಸನೆ ಕೊಟ್ಟಂಥ ಆಗಿನ ಮುಖ್ಯ ಮಂತ್ರಿಗಳು ಇವೊತ್ತು ಇಲ್ಲಿ ಇಲ್ಲದೆ ಇರುವುದು ನಮ್ಮ ದುರ್ದೈವ. ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ. ಅವರ ಮಾತಿಗೆ ಬೆಲೆ ಕೊಟ್ಟು ನಮ್ಮಲ್ಲಿ ಭಿನ್ನಾಭಿಪ್ರಾಯ ಇದ್ದರೂ ಸಹ ಮಹಾಜನ್ ಕಮಿಷನ್ನರ ರಿಪೋರ್ಟಿನ ಬಗ್ಗೆ ರಾಜ್ಯದಲ್ಲಿ ಒಂದೇ ಅಭಿಪ್ರಾಯ ಇರಬೇಕು ಎನ್ನುವ ಉದ್ದೇಶದಿಂದ ಅದಕ್ಕೆ ಸಮ್ಮತಿಸಿದೆವು. ಅದರ ಪರಿಣಾಮ ಈಗ ಬಂದಂಥ ಬಿರುಗಾಳಿಗೆ ನಾವು ತುತ್ತಾಗಿದ್ದೇವೆ. ಆದರೆ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಸಭೆಯಲ್ಲಿ ಒಂದು ಸೂಚನೆ ಪಾಸ್ ಆದಮೇಲೆ, ಅವರು ಕೇಂದ್ರದಲ್ಲಿ ತಮ್ಮ ಒಂದು ಪಕ್ಷದ ಆಳ್ವಿಕೆಯಲ್ಲಿರುವ ವ್ಯಕ್ತಿಗಳನ್ನು ಒಂದುಗೂಡಿಸಿಕೊಂಡು ಈ ಸಭೆ ಮಾಡಿದಂತಹ ನಿರ್ಣಯವನ್ನು ಕಾರ್ಯಗತ ಮಾಡತಕ್ಕಂಥ ಶಕ್ತಿ ಅವರಿಗೆ ಇರಲಿಲ್ಲ. ಅದು ಅವರ ಎರಡನೆಯ ದೋಷ. ಈವೊತ್ತು ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳಾಗಿ ಇಂಡಿಕೇಟ್, ಸಿಂಡಿಕೇಟ್ ಆಗಿ ಈವೊತ್ತು ನೀತಿ ನಿಯಮಗಳು ಯಾವುದೂ ಇಲ್ಲ. ನಿಜಲಿಂಗಪ್ಪನವರ ರಾಜಕೀಯ ಏನಿದೆ ಎಂದರೆ ಇಂದಿರಾಗಾಂಧೀ ಅವರ ಮೇಲೆ ಪ್ರತಿಕ್ರಿಯೆ ತೆಗೆದುಕೊಳ್ಳಬೇಕು ಏಕೆಂದರೆ ಅವರು ವೀರೇಂದ್ರ ಪಾಟೀಲರ ಮಂತ್ರಿಮಂಡಲ ಉರುಳಿಸಬೇಕು ಎನ್ನುವ ಉದ್ದೇಶದಿಂದ ಮೈಸೂರಿನಲ್ಲಿ ಜನರನ್ನು ರೊಚ್ಚಿಗೆ ಎಬ್ಬಿಸಿ ಗಲಾಟೆ ಆಗಲಿ ಎಂದು ಒಂದು ಪಿತೂರಿಯನ್ನು ಹೂಡಿದ್ದಾರೆ ಎಂದು ಹೇಳುತ್ತಾರೆ. ಅದರಲ್ಲಿ ಸತ್ಯಾಂಶ ಇದೆಯೇ, ಇಲ್ಲವೇ, ಏನೇ ಪಕ್ಷಗಳು ಇರಲಿ, ಪಂಗಡಗಳು ಇರಲಿ ಎರಡು ಕಾಂಗ್ರೆಸ್ ಇರಲಿ ಅದನ್ನು ನಾವು ಒಪ್ಪಲು ತಯಾರು ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರಿಗೆ ಇತಿಹಾಸ ಗೊತ್ತು. ಹಿಂದಿನ ಇತಿಹಾಸದ ಕೆಲವು ಪುಟಗಳನ್ನು ತಿರುವಿ ಹಾಕಿ ನೋಡಿ ಅವರು ಮಾಡತಕ್ಕ ಕಾರ್ಯವನ್ನು ಅವರೇ ನೆನಸಿಕೊಳ್ಳಲಿ ಎಂದು ನಾನು ಇಷ್ಟೇ ಹೇಳುತ್ತೇನೆ.

ಎರಡನೆಯದಾಗಿ ಈಗಾಗಲೇ ಬಿದರೆ ಬಗ್ಗೆ ನನಗೆ ತಿಳಿದಮಟ್ಟಿಗೆ ಸಾಧಾರಣ 108 ಹಳ್ಳಿಗಳು ಇವೆ. ಇದೇ ರೀತಿ ಇಡೀ ಹೈದರಾಬಾದ್ ಕರ್ನಾಟಕದ ಎಲ್ಲಾ ಭಾಗಗಳೂ ಇವೆ. ಇದಕ್ಕೆ ಯಾರೂ ಸಮರ್ಥಿಸಲಾರರು ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ದಿವಸ ಈ ಸಭೆಯಲ್ಲಿ ಮತ್ತೊಮ್ಮೆ ಒಂದು ರೆಸಲ್ಯೂಷನ್ ಮಾಡಬೇಕು. ಕನಿಷ್ಠ ಎಂದರೆ ಅವರು ನಮ್ಮ ಈ ಒಂದು ರೆಸಲ್ಯೂಷನ್ ಆದರೂ ಓಟು ಮಾಡಲಿ ಅಥವಾ ಸರ್ಕಾರದವರೇ ಅವರಿಗೆ ಶಕ್ತಿ ಇದ್ದರೆ, ಈ ವಿಷಯದ ಬಗ್ಗೆ ಆಸಕ್ತಿ ಇದ್ದರೆ ಅವರೇ ಒಂದು ರೆಸಲ್ಯೂಷನ್ ಮಂಡಿಸಲಿ. ಮಹಾಜನ್ ಕಮಿಷನ್ ವರದಿಯನ್ನು ಅಕ್ಷರಶಃ ಕಾರ್ಯಗತಗೊಳಿಸದಿದ್ದರೆ ಈ ಸಭೆಯ ಸದಸ್ಯರು ಮತ್ತು ಇಡೀ ಮಂತ್ರಿಗಳು ತಮ್ಮ ಪದವಿಗಳಿಗೆ ರಾಜೀನಾಮೆ ಕೊಟ್ಟು ಹೋರಾಟ ಮಾಡಲು ಸಿದ್ಧವಾಗಬೇಕು. ಕರ್ನಾಟಕ ರಾಜ್ಯದ ಪ್ರತಿಯೊಬ್ಬ ಯುವಕನೂ ಯೋಧನಂತೆ ಹೋರಾಟ ಮಾಡಲಿಕ್ಕೆ ಸಿದ್ಧನಾದರೆ, ಇಂದಿರಾ ಗಾಂಧಿಯವರು ಗವರ್ನರ್ ರೂಲನ್ನೊ, ಅಥವಾ ಅಧ್ಯಕ್ಷರ ರೂಲನ್ನೋ ಇಲ್ಲಿ ಹೇರಿಸಿ ಇಲ್ಲಿನ ರಾಜ್ಯ ಆಳಿ, ಇಲ್ಲಿರತಕ್ಕ ಕನ್ನಡ ಜನರ ಕೆಚ್ಚೆದೆಯನ್ನು ಪರೀಕ್ಷೆ ಮಾಡಿ ನೋಡಲಿ ಎಂದು ಹೇಳುತ್ತೇನೆ.

4-00 P. M.

ಇನ್ನು ಹೆಚ್ಚು ಭಾಷಣ ಮಾಡುವುದಿಲ್ಲ. ಈಗ ಕಾರ್ಯಮಾಡಿ ತೋರಿಸಬೇಕಾಗಿದೆ, ಮಾತುಗಳಿಂದ ಅಲ್ಲ. ನನಗೆ ಗೊತ್ತಿದ್ದ ಹಾಗೆ ನಿಜಲಿಂಗಪ್ಪನವರು ಹಿಂದೆ ಸಹಿತ ಈ ರಾಜ್ಯಕ್ಕೆ ಮೋಸ

(ಶ್ರೀ ಎಂ. ನಾಗಪ್ಪ)

ವನ್ನು ಮಾಡಿದ್ದಾರೆ ಎಂದು ಕೇಳಿದ್ದೇನೆ. ಅವರು ಪಾವಗಡವನ್ನು ಪಡೆಯಲಿಕ್ಕೆ ಮಾತ್ರ ಅಲ್ಲಿನ ರಾಯದುರ್ಗ ಮತ್ತು ಅದೋನಿಯನ್ನು ಕೈಬಿಟ್ಟರು ಎಂದು ಹೇಳುವುದು ಜನಜನಿತವಾಗಿದೆ. ಅಂತಹ ಒಂದು ನೀತಿಯನ್ನು ಅನುಸರಿಸಿದರೆ ಇದರಲ್ಲಿ ಯಶಸ್ವಿಯಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ವೀರೇಂದ್ರಪಾಟೀಲ್‌ರವರಿಗಾಗಲಿ ಅಥವಾ ನಿಜಲಿಂಗಪ್ಪನವರಿಗಾಗಲಿ ಅಥವಾ ಈಗಿರತಕ್ಕ ಕ್ಯಾಬಿನೆಟ್‌ಗಾಗಲಿ ಇದರಿಂದ ಕೆಟ್ಟ ಹೆಸರು ತಪ್ಪುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಒಂದು ದಿಟ್ಟ ಹೆಜ್ಜೆಯನ್ನಿಟ್ಟು ಅದಕ್ಕೆ ಈ ಮಾನ್ಯ ಸಭೆಯ ಎಲ್ಲ ಮಾನ್ಯಸದಸ್ಯರೂ ಬೆಂಬಲ ಕೊಡಬೇಕೆಂದು ಹೇಳಿ ನನ್ನ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಇವತ್ತಿನ ಈ ಸಮಸ್ಯೆ ನಿಜವಾಗಿಯೂ ಬಹಳ ಗಂಭೀರವಾಗಿದೆ. ಕೇಂದ್ರ ಸರ್ಕಾರದವರು ಈ ಗಡಿ ಸಮಸ್ಯೆಯ ವಿಷಯದಲ್ಲಿ ನಮ್ಮ ಕರ್ನಾಟಕ ರಾಜ್ಯದ ಇತಿಹಾಸಕ್ಕೆ ವಿರುದ್ಧವಾಗಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಸೂಚನೆಗಳಾದರೂ ಕೂಡ ಯಾವುದು ಅಂತ ಸರಿಯಾದ ರೀತಿಯಲ್ಲಿ ನಮ್ಮ ಸರ್ಕಾರಕ್ಕಾಗಲೀ, ಜನತೆಗಾಗಲೀ ಅವರು ತಿಳಿಸಿಲ್ಲ. ವರ್ತಮಾನ ಪತ್ರಿಕೆಯಲ್ಲಿ ಬಂದ ವಿಷಯವನ್ನು ನೋಡುವಾಗ ಅವರು ಕೊಟ್ಟಂಥ ಎಲ್ಲಾ ಸೂಚನೆಗಳು ನಮ್ಮ ಮೈಸೂರು ರಾಜ್ಯದ ಸಂಪೂರ್ಣ ಇತಿಹಾಸಕ್ಕೇ ವಿರುದ್ಧವಾಗಿ ಕಾಣುತ್ತಿದೆ. ನಮ್ಮ ಸರ್ಕಾರದ ಉದಾಸೀನತೆ ಅಥವಾ ಅಶಕ್ತತೆಯಮೇಲೆ ಈ ಸಮಸ್ಯೆಯನ್ನು ಹೊರಿಸಿದಂತೆ ಆಗಿದೆ. ಶ್ರೀಮಾನ್ ನಿಜಲಿಂಗಪ್ಪನವರು ನಮ್ಮ ಮುಖ್ಯಮಂತ್ರಿಗಳಾಗಿದ್ದಾಗ ಅವರು ಕಾಂಗ್ರೆಸ್‌ನ ವರ್ಕಿಂಗ್ ಕಮಿಟಿ ಮೆಂಬರಾಗಿದ್ದರು. ಮುಂಬೈ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಈ ಗಡಿ ಸಮಸ್ಯೆ ಕೂಡಲೇ ತೀರ್ಮಾನವಾಗಬೇಕೆಂದು ಒತ್ತಾಯ ಹಾಕಿದ್ದರ ಮೇಲೆ ನಮ್ಮ ರಾಜ್ಯವೂ ಕೂಡ ಅದಕ್ಕೆ ತಲೆಬಾಗಲೇ ಬೇಕಾಯಿತು. ನಮ್ಮ ದೇಶದ ಬಹಳ ಯೋಗ್ಯ ಮನುಷ್ಯರಾದ ಜಸ್ಟೀಸ್ ಮಹಾಜನ್‌ರು ಸುಪ್ರೀಂಕೋರ್ಟಿನ ಮಾಜಿ ನ್ಯಾಯಾಧೀಶರೂ, ಒಳ್ಳೆಯ ದೇಶಪ್ರೇಮವುಳ್ಳಂಥ ಒಬ್ಬ ಮಹಾನ್ ವ್ಯಕ್ತಿಯೂ ಆಗಿದ್ದವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರ ಮತ್ತು ಮೈಸೂರು ಸರ್ಕಾರ ತಮ್ಮ ಎಲ್ಲಾ ಕೇಳಿಕೆಗಳನ್ನೂ ಅದರ ಮುಂದೆ ಇಟ್ಟು, ಅದಕ್ಕೆ ಬೇಕಾದ ರಿಕಾರ್ಡುಗಳನ್ನು ಕೊಟ್ಟು ಸುಮಾರು ಎರಡು ವರ್ಷಗಳ ಕಾಲ ಅವರು ಇಡೀ ರಾಜ್ಯದಾದ್ಯಂತ ಸಂಚಾರ ಮಾಡಿ ತಮ್ಮ ತೀರ್ಪನ್ನು ಕೊಟ್ಟಿದ್ದಾರೆ. ಅವರು ಉದಾತ್ತವಾಗಿ ಕೊಟ್ಟಂಥ ತೀರ್ಪನ್ನು ಸಂಪೂರ್ಣವಾಗಿ ಸ್ವೀಕಾರ ಮಾಡಿ, ರಾಜ್ಯಗಳಲ್ಲಿ ಇರುವಂತಹ ಸಣ್ಣ ಸಣ್ಣ ವಿವಾದಗಳನ್ನು ತೀರ್ಮಾನ ಮಾಡಬೇಕಾಗಿದ್ದುದು ಕೇಂದ್ರ ಸರ್ಕಾರದ ಕರ್ತವ್ಯವಾಗಿತ್ತು. ಆದರೆ ರಾಜಕೀಯ ದೃಷ್ಟಿಯಿಂದ ಅದರಲ್ಲೂ ಕೂಡ ಮಹಾರಾಷ್ಟ್ರದ ಮುಖಂಡರ ಒತ್ತಾಯದಿಂದ ಅದರಲ್ಲೂ ಕೂಡ ಈಗ ಗೃಹಮಂತ್ರಿಗಳಾಗಿರತಕ್ಕ ಚವಾನ್‌ರವರ ಖಾಸಗಿ ಒತ್ತಾಯದಿಂದ ಈ ಮಹಾಜನ್ ರಿಪೋರ್ಟನ್ನು ಜಾರಿ ಮಾಡಲಿಲ್ಲ. ಜಾರಿಮಾಡದಿದ್ದಾಗ ನಮ್ಮ ರಾಜ್ಯ ಸರ್ಕಾರವಾದರೂ ಕೂಡ ಅದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ಒತ್ತಾಯ ಮಾಡಿ ಅದು ಕಾರ್ಯಗತ ಮಾಡುವಂತಹ ಒಂದು ಕೆಲಸ ನಮ್ಮ ರಾಜ್ಯ ಸರ್ಕಾರದ ಕೆಲಸವಾಗಿತ್ತು, ಕರ್ತವ್ಯವಾಗಿತ್ತು. ನಮ್ಮ ರಾಜ್ಯ ಸರ್ಕಾರ ತಮ್ಮ ಕರ್ತವ್ಯದಲ್ಲಿ ತಪ್ಪಿದ್ದಾರೆ. ಈ ರಾಜ್ಯದ ಜನತೆ ಈ ವಿಷಯದಲ್ಲಿ ಒಮ್ಮತದಿಂದ ಇದ್ದಾರೆ, ಅದು ಮಾತ್ರವಲ್ಲ ಇದು ಕಾರ್ಯಗತವಾಗುವಂತೆ ಮಾಡಲಿಕ್ಕೆ ಜನ ಸ್ವಾರ್ಥತ್ಯಾಗ ಮಾಡಲಿಕ್ಕೂ ಮತ್ತು ಯಾವ ಕಾರ್ಯ ಮಾಡಲಿಕ್ಕೂ ಕೂಡ ನಮ್ಮ ರಾಜ್ಯದ ಎರಡೂ ಮುಕ್ಕಾಲುಕೋಟಿ ಜನ ಸಿದ್ಧರಾಗಿದ್ದಾರೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು ಇಂತಹ ಒಂದು ಒತ್ತಾಯದ ಪ್ರಸಂಗವನ್ನು ಉಂಟುಮಾಡಿದ್ದಾರೆ. ಮಹಾರಾಷ್ಟ್ರ ಕ್ಷೇತ್ರದಿಂದ ಹೆಚ್ಚಿನ ಸಹಕಾರ ಅವರ ಮಂತ್ರಿಮಂಡಲಿಕ್ಕೆ ಇರುವುದರಿಂದ ಅವರನ್ನು ಕೇವಲ ಸಂತೈಸುವುದಕ್ಕಾಗಿಯೇ ಈ ರೀತಿಯ ಒಂದು ಉಪಾಯವನ್ನು ತಂದಿದ್ದಾರೆ, ಇದು ನಮ್ಮ ರಾಜ್ಯದ ದೃಷ್ಟಿಯಿಂದಾಗಲಿ ಅಥವಾ ನಮ್ಮ ದೇಶದ ದೃಷ್ಟಿಯಿಂದಾಗಲಿ ನ್ಯಾಯವಾದುದಲ್ಲ. ಮತ್ತು ನಮ್ಮ ದೇಶದ, ನಮ್ಮ ರಾಜ್ಯದ ಹಿತಾಸಕ್ತಿಗೂ ಕೂಡ ಇದು ತೊಂದರೆ ತರುವಂತಹದು. ಇದನ್ನು ಎದುರಿಸಬೇಕಾದುದು ಈ ಸಂದರ್ಭದಲ್ಲಿ ಕರ್ನಾಟಕ ಜನತೆಯಾದ ನಮ್ಮ ಕರ್ತವ್ಯ ಎಂಬುದು ಬಹಳ ಸ್ಪಷ್ಟವಾಗಿದೆ. ಮಹಾಜನ್ ರಿಪೋರ್ಟ್‌ನಲ್ಲಿ ಸೂಚನೆ ಮಾಡಿದಂತಹ ಪ್ರದೇಶಗಳು ನಮ್ಮ ರಾಜ್ಯದಲ್ಲಿ ಉಳಿಯಬೇಕಾದುದು ಮಾತ್ರವಲ್ಲ ಇನ್ನೂ ಅನೇಕ ಪ್ರದೇಶಗಳು ನಮಗೆ ಬರಬೇಕಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡನ್ನು ತಕ್ಷಣ ಆ ಜಿಲ್ಲೆಗೆ ಪಡೆಯುವಂತಹ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅಲ್ಲಿನ ಜನತೆಯ ಸಂಪರ್ಕ ಸಂಪೂರ್ಣ ಮೊದಲು ಮಂಗಳೂರು ನಗರದ ಒಳಗೆ ಇತ್ತು. ಅಲ್ಲಿಯ ಜನರೂ ಕೂಡ ತುಳು ಭಾಷೆ ಮಾತನಾಡುವವರು.

ಅಲ್ಲಿನ ವ್ಯಾಪಾರ ವ್ಯವಹಾರ ಎಲ್ಲವೂ ಕೂಡ ಮಂಗಳೂರಿನ ಒಟ್ಟಿಗೆ ಇತ್ತು. ಅಲ್ಲಿಯ ಹುಡುಗರೂ ಕೂಡ ಶಾಲಾ ಕಾಲೇಜುಗಳಿಗೆ ಹೋಗಬೇಕಾದರೆ ಮಂಗಳೂರಿಗೇ ಬರಬೇಕಾಗಿತ್ತು. ಹೀಗಿದ್ದು ಅಲ್ಲಿನ ಜನತೆ ಕೂಡ ಮಂಗಳೂರಿನಲ್ಲಿ ಸೇರಬೇಕೆಂದು ಅವರ ಒಕ್ಕೊರಲಿನ ಒತ್ತಾಯ ಇದೆ. ಮತ್ತು ಮಹಾಜನ್‌ರವರೂ ಕೂಡ ಆ ಪ್ರದೇಶದಲ್ಲಿ ಹೋಗಿದ್ದಾಗ ಅಲ್ಲಿನ ರಿಕಾರ್ಡ್‌ಗಳನ್ನೆಲ್ಲಾ ಪರಾಂಬರಿಸಿ ಕೇವಲ ತಾತ್ವಿಕ ದೃಷ್ಟಿಯಿಂದ ಮಾತ್ರವಲ್ಲ ವ್ಯವಹಾರ ದೃಷ್ಟಿಯಿಂದಲೂ ಕೂಡ ಕಾಸರಗೋಡು ಮತ್ತು ಚಂದ್ರಗಿರಿಯ ಉತ್ತರ ಭಾಗವನ್ನು ಮೈಸೂರಿಗೆ ಸೇರಿಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಮತ್ತು ಮಂಗಳೂರು ಹಾಗೂ ಕಾಸರಗೋಡಿನ ಜನತೆಯನ್ನು ಪ್ರಶಂಸಿಸಿದ್ದಾರೆ. ಏಕೆಂದರೆ ಅಲ್ಲಿಯ ಜನತೆ ನ್ಯಾಯವಾದ ರೀತಿಯಲ್ಲಿ ಅವರ ಹೇಳಿಕೆಯನ್ನು ಕೊಟ್ಟಿದ್ದಾರೆ ಯಾವ ಒಂದು ಗಲಾಟೆಯನ್ನೂ ಮಾಡಿಲ್ಲ ಎಂದು ಹೇಳಿದ್ದಾರೆ. ಇವತ್ತಿನ ಒಂದು ಸಮಸ್ಯೆಯನ್ನು ಪರಾಮರ್ಶಿಸುವಾಗ ಒಂದು ವಿಷಯ ಕಾಣುತ್ತದೆ ಏನೆಂದರೆ ಯಾರು ಗಲಾಟೆ ಮಾಡಲಿಕ್ಕೆ ತಯಾರಾಗಿದ್ದಾರೋ, ಯಾರು ಬೆಂಕಿ ಇಡಲಿಕ್ಕೆ ತಯಾರಾಗಿದ್ದಾರೋ, ಯಾರು ರಾಜಕೀಯ ಒತ್ತಡ ತರಲಿಕ್ಕೆ ತಯಾರಾಗಿದ್ದಾರೋ ಅಂತಹವರಿಗೆ ಕೇಂದ್ರ ಸರ್ಕಾರ ಮಣಿಯುವ ಹಾಗೆ ಗೊತ್ತಾಗುತ್ತದೆ. ಸರ್ಕಾರ ನಡೆಸುವವರು ಒಂದು ನ್ಯಾಯ ದೃಷ್ಟಿಯಿಂದ ಮತ್ತು ತತ್ವದ ದೃಷ್ಟಿಯಿಂದ ಕೆಲಸವನ್ನು ಮಾಡಬೇಕಾಗುತ್ತದೆ, ಅಂತಹ ಸರ್ಕಾರವೇ ರಾಜಕೀಯ ಗೊಂದಲ ಮಾಡಿ, ಯಾರೋ ಕೆಲವು ಜನರ ಒತ್ತಾಯಕ್ಕೆ ಇತರ ರಾಜ್ಯ ಸರ್ಕಾರಗಳನ್ನು ಬಲಾತ್ಕಾರ ಮಾಡುವುದು ನಿಜವಾಗಿಯೂ ನಾಚಿಕೆಗೇಡು ಎಂದು ನಾನು ಹೇಳಬಯಸುತ್ತೇನೆ. ಮೈಸೂರು ರಾಜ್ಯಕ್ಕೆ ಯಾವುದೇ ಒಂದು ರೀತಿಯಲ್ಲಿ ಇವತ್ತು ಅನ್ಯಾಯ ಮಾಡುವುದಕ್ಕೆ ಅವರು ತೊಡಗಿದ್ದಾರೆ. ಅವನ್ನು ತಡೆಗಟ್ಟುವುದಕ್ಕೆ ಇಡೀ ಮೈಸೂರಿನ ಜನತೆ ಒಟ್ಟಾಗಿ ರಾಜ್ಯ ಸರ್ಕಾರಕ್ಕೆ ಬೆಂಬಲ ಕೊಡುವುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಎಚ್ಚರಿಕೆ ಕೊಟ್ಟು ಅವರಿಗೆ ಸರಿಯಾದ ಮಾರ್ಗದರ್ಶನ ಮಾಡುವುದು ನಮ್ಮ ಕರ್ತವ್ಯ ಎಂದು ಹೇಳುತ್ತೇನೆ. ಈ ವಿಷಯದಲ್ಲಿ ನಮ್ಮ ಮೈಸೂರು ರಾಜ್ಯದ ಜನತೆ ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ತಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಬದ್ಧರಾಗಿದ್ದೇವೆ ಮತ್ತು ಜವಾಬ್ದಾರರಾಗಿದ್ದೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ),—ಮಾನ್ಯ ಅಧ್ಯಕ್ಷರೇ, ಈ ದಿವಸ ಮಹಾರಾಷ್ಟ್ರ ಮತ್ತು ಮೈಸೂರು ದೇಶಗಳ ಗಡಿ ವಿವಾದದ ಬಗ್ಗೆ ಕೆಲವು ವಿಷಯಗಳು ಪತ್ರಿಕೆಯಲ್ಲಿ ವರದಿಯಾಗಿದೆ. ಅವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು ಎಂಬ ಪ್ರಸ್ತಾವವನ್ನು ಈ ಸಭೆಯ ಮುಂದೆ ಶ್ರೀಮಾನ್ ವಿ. ಎನ್. ಪಾಟೀಲರು ಮಂಡಿಸಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಈ ಬೆಳವಣಿಗೆಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಲು ಪ್ರಾಮುಖ್ಯವಾದ ಕಾರಣಗಳಿವೆ. ಇದು ನಮ್ಮ ರಾಜ್ಯಕ್ಕೆ ಮುಖ್ಯವಾಗಿ ಸಂಬಂಧಪಟ್ಟ ಪ್ರಶ್ನೆ, ಇದು ಬಹುಶಃ ಪಕ್ಷಾತೀತವಾದ ಪ್ರಶ್ನೆ, ಇದು ಎಲ್ಲಾ ರಾಜಕೀಯ ಭಿನ್ನಾಭಿಪ್ರಾಯಗಳಿಗೂ ಮೀರಿರುವ ಪ್ರಶ್ನೆ. ನಮ್ಮ ಕರ್ಣಾಟಕದಲ್ಲಿರುವ ವಿವಿಧ ಪಕ್ಷಗಳಿಗೆ ಸೇರಿರುವ ಎಲ್ಲರ ಅಸ್ತಿತ್ವದ ಪ್ರಶ್ನೆ. ಇದನ್ನು ಚರ್ಚಿಸಬೇಕಾದರೆ ಒಂದು ದೃಷ್ಟಿಯಿಂದ ಹಿಂದೇನಾಯಿತು, ಇಂದೇನಾಗುತ್ತದೆ, ಇದನ್ನು ಹೀಗೆಯೇ ಬಿಟ್ಟರೆ ಮುಂದೇನಾಗುತ್ತದೆ ಎಂಬುದನ್ನು ನೋಡಬೇಕೇ ಹೊರತು ಕೇವಲ ನಿಜಲಿಂಗಪ್ಪನವರ ತಪ್ಪನ್ನೆಣಿಸಿ ಪಟ್ಟಿ ಮಾಡುವುದಾಗಲಿ ಅಥವಾ ಈ ಸರಕಾರದ ಸಾಕಷ್ಟು ಪ್ರಭಾವ ಈ ವಿಚಾರದಲ್ಲಿ ಬೀರುತ್ತಿಲ್ಲ ಎಂದು ಹೇಳುವುದಾಗಲಿ ಸಲ್ಲದು. ಈ ಅವಕಾಶವನ್ನು ಅದಕ್ಕೆ ಉಪಯೋಗಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅದರಲ್ಲಿ ಸಾರ್ಥಕವಿಲ್ಲ ಎಂಬುದು ನನ್ನ ಅಭಿಪ್ರಾಯ. ಇಂದು ಇದನ್ನು ನಾವು ಮೂಲಭೂತವಾಗಿ ವಿಚಾರ ಮಾಡಬೇಕಾಗಿದೆ. ಪತ್ರಿಕೆಯಲ್ಲಿ ಬಂದಿರುವ ಸುದ್ದಿ ನಿಜವಾಗಿಯೂ ಕೂಡ ಈ ಸಭೆಯ ಸದಸ್ಯರನ್ನು ಮತ್ತು ಈ ರಾಜ್ಯದ ಎಲ್ಲಾ ಜನರನ್ನೂ ದಂಗುಬಡಿಸಿದೆ. ಇದರ ಇತಿಹಾಸ ನನಗೆ ಗೊತ್ತಿದೆ. ನಾವು ನಮಗೆ ಈ ಪ್ರದೇಶ ಬೇಕು, ಆ ಪ್ರದೇಶ ಬೇಕು ಎಂದು ಕಚ್ಚಾಟ ಪ್ರಾರಂಭಿಸಿಲ್ಲ ಮತ್ತು ರಾಜ್ಯ ಪುನರ್ವಿಂಗಡನೆಯಾದಾಗ 4 ಹಳ್ಳಿಗಳು ಒಬ್ಬರಿಗೆ ಹೆಚ್ಚಾಗಿ ಸೇರಿರಬಹುದು. ಆದರೆ ಇಡೀ ಭಾರತ ಒಂದೇ ಎಂದು ಹೇಳುವಾಗ ಇಂಥ ಪ್ರಶ್ನೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬಾರದು ಎಂಬುದು ನಮ್ಮ ರಾಜ್ಯದ ನಿಲುವಾಗಿತ್ತು. ಮಹಾಜನ್ ಕಮಿಷನ್ ರಚನೆಯಾಗಲು ಯಾರು ಕಾರಣರೆಂಬುದು ಎಲ್ಲರಿಗೂ ಗೊತ್ತಿದೆ. ಮಹಾಜನ್ ವರದಿ ಬಂದಮೇಲೆ ಅದರಲ್ಲಿ ಮಾಡಿರುವ ಶಿಫಾರಸುಗಳು ಅನೇಕ ಸಂದರ್ಭಗಳಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ಉಂಟುಮಾಡುವಹಾಗಿದ್ದರೂ ಈ ಗಡಿ ವಿವಾದ ಬೇಗ ಪರಿಹಾರವಾಗಬೇಕು ಎಂಬ ಉದ್ದೇಶದಿಂದ ನಾವು ಮಹಾಜನ್ ವರದಿಯನ್ನು ಒಪ್ಪುತ್ತೇವೆ, ಅದನ್ನು ಕೇವಲ ಸಣ್ಣಪುಟ್ಟ ಬದಲಾವಣೆಗಳ ವಿನಾ ಸಂಪೂರ್ಣವಾಗಿ ಜಾರಿಗೆ ತರಬೇಕು ಎಂದು ನಮ್ಮ ಅಭಿಪ್ರಾಯವನ್ನು ಸೂಚಿಸಿ ಹಿಂದೆ ನಿರ್ಣಯ ಮಾಡಿದ್ದೆವು, ಅದರ ಬಗ್ಗೆ ಕೇಂದ್ರದ ಪ್ರತಿಕ್ರಿಯೆಯೇನೆಂಬುದು ಇದುವರೆಗೂ ಕೂಡ ಗೊತ್ತಾಗಿಲ್ಲ. ಈಗ ಸಿಡಿಲುಬಡಿದ ರೀತಿ

(ಶ್ರೀ ಕೆ. ಎಚ್. ಶ್ರೀನಿವಾಸ್)

ಯಲ್ಲಿ ವಾರ್ತೆ ಬಂದಿದೆ. ಪತ್ರಿಕೆಗಳಲ್ಲಿ ವರದಿಯಾಗಿರುವುದು ಸತ್ಯವಾಗಿದ್ದರೆ ಮಹಾಜನ್ ಅವಾರ್ಡಿನಲ್ಲಿ ನಮಗೆ ಕೊಟ್ಟಿರುವ 247 ಹಳ್ಳಿಗಳಲ್ಲಿ ಕೇವಲ 8 ಹಳ್ಳಿಗಳು ಮಾತ್ರ ನಮಗೆ ಸಿಕ್ಕುವುವು. ಮಹಾರಾಷ್ಟ್ರಕ್ಕೆ ಹಿಂದೆ ಶಿಫಾರಸ್ಸು ಮಾಡಿರುವ ಹಳ್ಳಿಗಳಲ್ಲದೆ ಈಗ ಖಾನಾಪುರದಲ್ಲಿ ಸುಮಾರು 18, ಹಳಿಯಾಳ ಒಂದು ಟೌನು ಸೇರಿ 90 ಹಳ್ಳಿ, ಬಿದರ್ ಜಿಲ್ಲೆಯಲ್ಲಿ 118 ಹಳ್ಳಿ, ಹೋಗುವುದು ಅಲ್ಲದೆ ಬೆಳಗಾಂ ನಗರದ ಪ್ರಶ್ನೆ ಮೂಲಭೂತವಾಗಿದೆ. ಅದನ್ನು ವಿಭಜಿಸಲಾಗುವುದು. ಅದನ್ನು ರೈಲ್ವೆ ಲೈನಿನ ಆಧಾರದಮೇಲೆ ವಿಭಜಿಸಲಾಗುವುದು. ರೈಲ್ವೆ ಲೈನಿನ ಒಂದು ಕಡೆ ನಮಗೆ ಇನ್ನೊಂದು ಕಡೆ ಮಹಾರಾಷ್ಟ್ರಕ್ಕೆ—ಈ ರೀತಿ ವಿಭಜನೆಯಾಗುವುದೆಂದು ತಿಳಿದುಬಂದಿದೆ. ಅಷ್ಟೇ ಅಲ್ಲ ಬೆಳಗಾಂ ವಿಭಜನೆಯಾಗಿ ಆ ಕಡೆ ಸೇರುವ 7 ಹಳ್ಳಿಗಳಿವೆ. ಅಲ್ಲಿನ ಜನಸಂಖ್ಯೆ ಸುಮಾರು 35 ಸಾವಿರ ಇದೆ, ಅವು ಕೂಡ ಮಹಾರಾಷ್ಟ್ರಕ್ಕೆ ಸೇರುವುವು ಎಂಬ ಸುದ್ದಿ ಇದೆ. ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಕೇಂದ್ರ ಸರಕಾರದ ಅಧಿಕಾರಿಗಳು ಬಂದು ಮಾತನಾಡಿಕೊಂಡು ಹೋದರೆಂದು ಪತ್ರಿಕೆಯಲ್ಲಿ ವರದಿಯಾಗಿದೆ, ಮುಖ್ಯಮಂತ್ರಿಗಳು ಬರವಣಿಗೆಯಲ್ಲಿ ತಿಳಿಸಿದರೆ ಪರಿಶೀಲಿಸುವುದಾಗಿ ವರದಿಯಾಗಿದೆ. ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಏನನ್ನು ಹೇಳಲೂ ತಯಾರಾಗಿಲ್ಲ. ಅದು ನಮಗೆ ಇನ್ನೂ ಹೆಚ್ಚು ಅನುಮಾನಕ್ಕೆ ಆಸ್ಪದವಾಗಿದೆ. ಹೊಸ ಸಲಹೆ ಪ್ರಕಾರ ಮಹಾಜನ್ ಕಮಿಷನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕಾರಮಾಡಿ ಯಾವುದೇ ರೀತಿಯ ಕಾರಣಗಳನ್ನು ಕೊಡದೆ ಯಾವುದೇ ಸ್ಪಷ್ಟವಾದ ಆಧಾರವಿಲ್ಲದೆ ಖುಷಿ ಬಂದ ರೀತಿಯಲ್ಲಿ ಇಷ್ಟು ಉದ್ದವಾದ ಇತಿಹಾಸವಿರುವ ವಿವಾದವನ್ನು ತಮಗೆ ತೋರಿದ ರೀತಿಯಲ್ಲಿ ಪರಿಹಾರಮಾಡಬೇಕೆಂಬ ಭಾವನೆ ಕೇಂದ್ರ ಸರಕಾರಕ್ಕೆ ಇರುವಂತೆ ತೋರುತ್ತದೆ. ಹಾಗೇನಾದರೂ ಇದ್ದರೆ ಇದು ಬಹಳ ಶೋಚನೀಯವಾದ ವಿಚಾರ. ಈ ದಿವಸ ನಾವು ಮಹಾಜನ್ ವರದಿಯನ್ನು ಒಪ್ಪಿರುವುದಕ್ಕೆ ಕಾರಣ ಅದು ನ್ಯಾಯವನ್ನು ದೊರಕಿಸುತ್ತದೆಂದಲ್ಲ ಹೇಗಾದರೂ ಆಗಲಿ, ಒಂದು ಕಮಿಷನ್ ಮಾಡಿ ವರದಿ ಕೊಟ್ಟಮೇಲೆ ಗಡಿ ವಿವಾದ ಆಖೈರಾಗಿ ಮುಗಿದರೆ ಸಾಕು, ಕೇವಲ ವಾದ ವಿವಾದ ಮಾಡುತ್ತಿದ್ದರೆ ಖಂಡಿತ ವಿವಾದ ಬಗೆಹರಿಯುವುದಿಲ್ಲ. ಕಮಿಷನ್ ಬಹಳ ನಿಷ್ಪಕ್ಷಪಾತವಾಗಿ ಎಲ್ಲವನ್ನೂ ಯೋಚನೆಮಾಡಿ, ಅನೇಕ ಅಂಶಗಳನ್ನು ಗಮನಿಸಿ ಒಂದು ಶಿಫಾರಸು ಮಾಡಿರುವಾಗ ಅದನ್ನು ಒಪ್ಪಬೇಕು ಎಂಬ ಒಂದು ತತ್ವದ ಆಧಾರದಮೇಲೆ ನಾವು ಒಪ್ಪಿರುವುದು, ಇಂದು ಗಡಿ ಸಮಸ್ಯೆ ಸೈಂಟಿಫಿಕ್ ಆಗಿ ಒಂದು ಗುಲಗಂಜಿಯಷ್ಟು ಕೂಡ ಹೆಚ್ಚು ಕಡಿಮೆ ಇಲ್ಲದೆ ಪರಿಹಾರವಾಗಿದೆ ಎಂದು ನಾವು ನಂಬಿಲ್ಲ. ಮಹಾಜನ್‌ರವರೂ ಕೂಡ ಹೀಗೆ ಹೇಳಿದ್ದಾರೆ. ''It seems to me that there is no scientific yard stick in deciding matters which concern huge population and their well being.'' ಕೆಲವೊಂದು ತತ್ವಗಳನ್ನು ಮಹಾಜನ್‌ರವರು ಆಧಾರವಾಗಿಟ್ಟುಕೊಂಡಿದ್ದಾರೆ. ಅವರ ವರದಿಯಲ್ಲಿ ನಾಲ್ಕನೆ ಅಧ್ಯಾಯದಲ್ಲಿ ಪ್ರಸ್ತಾಪಮಾಡಿ ಸಮರ್ಥನೆ ಮಾಡಿದ್ದಾರೆ. ಅದನ್ನು ಒಪ್ಪುತ್ತೇನೆ, ಆ ತತ್ವ ಅಂತ ಮಹತ್ವದ್ದಲ್ಲ, ಆ ಕಾರಣ ಅದನ್ನು ಅದನ್ನು ಅನ್ವಯಿಸಬಾರದು, ಅನ್ವಯಿಸಿದರೆ ಆ ತತ್ವದ ಬುಡ ಕಳಚಿ ಅದಕ್ಕೆ ಸಂಪೂರ್ಣವಾದ ವಿರುದ್ಧವಾದ ಪರಿಣಾಮವಾಗುವುದು ಎಂದು ಸಾಕಷ್ಟು ಗಡಿವಿವಾದಕ್ಕೆ ಸಂಬಂಧಪಟ್ಟ ರಾಜಕೀಯ ವಾದವಿವಾದ ಮಾಡಿದ್ದಾರೆ. ಇದನ್ನು ಕೂಲಂಕಷವಾಗಿ ವಿಚಾರಮಾಡಿ ಅವರು ಯಾವ ಆಧಾರವನ್ನು ಅನ್ವಯಿಸಿ ತಮ್ಮ ಶಿಫಾರಸನ್ನು ಮಾಡಿದ್ದಾರೆಂಬುದನ್ನು ಪ್ರಸ್ತಾಪಮಾಡಿದ್ದಾರೆ. ಈ ದಿವಸ ನಮಗೆ ಬಂದಿರುವ ಸಲಹೆ ಪ್ರಕಾರ ಒಂದು ಹಳ್ಳಿಯನ್ನು ಒಂದು ಯೂನಿಟ್ಟಾಗಿ ಇಡುವುದಕ್ಕೆ ಸಾಧ್ಯವಿಲ್ಲ, ಬಹುಶಃ ನಾಲ್ಕನೆಯ ಅಧ್ಯಾಯದಲ್ಲಿ ಮೂರನೆ ಪುಟದಲ್ಲೋ ಏನೋ ಕೊನೆಯ ಪಕ್ಷ 20 ಸಾವಿರ ಜನಸಂಖ್ಯೆ ಇರುವ ಪ್ರದೇಶ ಬಿಟ್ಟು ಅದಕ್ಕೆ ಕಡಿಮೆ ಯೂನಿಟ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಈಗ ನೋಡಿದರೆ ಇದ್ದಕ್ಕಿದ್ದಂತೆ ಹಳ್ಳಿಗಳಲ್ಲಿ ಸಿಂಪಲ್ ಮೆಜಾರಿಟಿ ಇದೆ ಎನ್ನುವ ಕಾರಣ ಕ್ಕೋಸ್ಕರ ಎಲ್ಲ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಹೇಳುತ್ತಿದ್ದಾರೆ. ಬೆಳಗಾಂಅನ್ನು ಯಾವ ಲೆಕ್ಕದಮೇಲೆ ವಿಭಜನೆ ಮಾಡುತ್ತಿದ್ದಾರೆ ಎನ್ನುವ ಕಾರಣ ನಮಗೆ ಈ ಹೊತ್ತಿನವರೆಗೂ ಪತ್ರಿಕೆಗಳಲ್ಲಿ ಕಂಡುಬಂದಿಲ್ಲ. 1951ನೇ ಸೆನ್ಸಸ್, 1961ನೇ ಸೆನ್ಸಸ್ ತೆಗೆದುಕೊಂಡರೆ ಮಹಾರಾಷ್ಟ್ರದವರ ಮೆಜಾರಿಟಿ ಇದ್ದರೆ ಅದು ಬಹಳ ಅಲ್ಲ. ಅದು ಕಾಸ್ಮೊಪಾಲಿಟನ್ ಆಗಿರತಕ್ಕ ಊರು. ಅದನ್ನು ಮಹಾರಾಷ್ಟ್ರಕ್ಕೆ ಕೊಡುವುದಕ್ಕೆ ಏಕೆ ಸಾಧ್ಯವಿಲ್ಲ ಎನ್ನುವುದನ್ನು ಮಹಾಜನ್ ವರದಿಯಲ್ಲಿ ಸುದೀರ್ಘವಾಗಿ ಸಮರ್ಥನೆ ಮಾಡಿದ್ದಾರೆ. ಇದ್ದಕ್ಕಿದ್ದಂತೆ ಬೆಳಗಾಂ ವಿಭಜನೆ ಮಾಡಬೇಕು ಎನ್ನುವುದನ್ನು ಯಾವ ಆಧಾರದಮೇಲೆ ಹೇಳುತ್ತಿದ್ದಾರೆಂದರೆ ಊರಿನ ಮಧ್ಯೆ ಒಂದು ರೈಲ್ವೆ ಲೈನ್ ಹೋಗಿರುವುದನ್ನು ಆಧಾರವಾಗಿಟ್ಟುಕೊಂಡು ಹೇಳುತ್ತಿದ್ದಾರೆ. ಇದು ಕೇವಲ ಒಂದು ರಾಜ್ಯದ ಸಮಸ್ಯೆಯಲ್ಲ, ಮೈಸೂರು ರಾಜ್ಯದ ಮೇಲೆ ಇದರ ಪರಿಣಾಮ ಏನು ಬರುತ್ತದೆ ಎನ್ನುವುದು ಪ್ರಾಮುಖ್ಯವಾದು

ದಲ್ಲ. ರಾಜ್ಯದಲ್ಲಿನ ನಾನಾ ಸಮಸ್ಯೆಗಳನ್ನು, ಅದೂ ಕೋಟಿಗಟ್ಟಲೆ ಜನತೆಗೆ ಸಂಬಂಧಪಟ್ಟಿರತಕ್ಕ ಸಮಸ್ಯೆಗಳನ್ನು ಇಷ್ಟು ಲಘುವಾಗಿ ಕಾಣುತ್ತೇವೆ, ತಕ್ಷಣ ನಮಗೆ ಖುಷಿ ಕಂಡಹಾಗೆ ಪರಿಹಾರ ಸೂತ್ರವನ್ನು ಜಾರಿ ಮಾಡುತ್ತೇವೆ ಎಂದರೆ ಇಡೀ ರಾಜ್ಯದಲ್ಲಿ ಎಂಥ ಪರಿಸ್ಥಿತಿ ಉತ್ಪನ್ನವಾದೀತು ? ಹಳಿಯಾಳ ಮೈಸೂರು ರಾಜ್ಯಕ್ಕೆ ಸೇರುವುದು ಬೇಡ ಎಂದರೆ, ಅದೇ ರೀತಿಯಲ್ಲಿ ಬೆಂಗಳೂರು, ಕೋಲಾರ, ಬಳ್ಳಾರಿ ಎಲ್ಲ ಕಡೆಗೂ ಅದೇರೀತಿ ಬರಬೇಕಾಗಬಹುದು. ಒಂದು ಊರಿನಲ್ಲಿ, ಒಂದು ಕಡೆ ಯಾವುದೇ ಒಂದು ಭಾಷೆಯ ಜನ ಅಥವಾ ಜಾತಿಯ ಜನ ಮೆಜಾರಿಟಿಯಲ್ಲಿದ್ದಾರೆಂದಕೂಡಲೇ ಅದನ್ನು ಆ ಕಡೆಗೆ ವರ್ಗಾವಣೆ ಮಾಡುತ್ತಾರೆಂದರೆ, ಬೆಂಗಳೂರು ನಗರವನ್ನು ಕೂಡ ನಾವು ವಿಭಜಿಸಬೇಕಾದ ಪರಿಸ್ಥಿತಿ ಬರಬಹುದು, ಮುನಿಸಿಪಾಲಿಟಿಗಳಲ್ಲಿ ಒಂದೊಂದು ವಾರ್ಡನ್ನೂ ವಿಭಜಿಸಬೇಕಾಗಿ ಬರಬಹುದು, ಗುಜರಾತ್ ಭಾಷೆ ಮಾತನಾಡುವ ಜನರು ಹೆಚ್ಚಾಗಿದ್ದರೆ ಆ ಭಾಗ ಗುಜರಾತಿಗೆ ಸೇರಬೇಕು, ಉರ್ದು ಮಾತನಾಡುವ ಜನರಿದ್ದರೆ ಅದನ್ನು ಭಾಗಮಾಡಿ ಪಾಕಿಸ್ತಾನಕ್ಕೆ ಸೇರಿಸಬೇಕು ಎನ್ನುವ ವಾದವೂ ಬರಬಹುದು. ಈ ರೀತಿ ಶಾಸ್ತ್ರೀಯವಾಗಿ ಯಾವುದೇ ತರ್ಕಕ್ಕೂ ನಿಲುಕದೆ ಇರತಕ್ಕ ವಿಚಾರ. ಯಾವ ಆಧಾರದ ಮೇಲೆ ಈ ಪ್ರಶ್ನೆಯ ಇತ್ಯರ್ಥ ನಡೆಯುತ್ತದೆ ಎನ್ನುವುದು ತಿಳಿಯದೆ ಪ್ರಾಯಶಃ ನಮ್ಮೆಲ್ಲರಿಗೂ ಏನು ಮಾಡಬೇಕು ಎನ್ನುವ ಕಿಂಕರ್ತವ್ಯ ಮೂಢ ಪರಿಸ್ಥಿತಿಯುಂಟಾಗಿದೆ ಎಂದರೆ ತಪ್ಪಾಗಲಾರದು. ಸಣ್ಣಪುಟ್ಟ ತಿದ್ದುಪಡಿ ಮಾಡಿ ಜಾರಿಗೆ ಕೊಡುತ್ತಾರೆಂದರೆ ನಾವು ಕೂಡ ಪರಿಶೀಲನೆ ಮಾಡಬಹುದಾಗಿತ್ತು. ಮಹಾಜನ್ ಕಮಿಷನ್ ವರದಿಯಲ್ಲಿ ಹೇಳಿರುವ ಕಾಸರಗೋಡು ಬಗ್ಗೆ ಏನೇನೂ ವಿಚಾರವಿಲ್ಲ. ಪತ್ರಿಕೆಯಲ್ಲಿ ಕೆಲವು ಮಾತುಗಳು ಪ್ರಧಾನಿಯವರು ಹೇಳಿದರು ಎಂದು ವರದಿಯಾಗಿದೆ. ಅದು ಸತ್ಯವೆಂದರೆ ಬಹಳ ಶೋಚನೀಯವಾದ ಮಾತು. ಈ ವರದಿ ಸ್ಯಾಕ್ರೋಸಾಂಗ್ಟ್ ಅಲ್ಲವೆಂದರೆ ಯಾವುದೂ ಸ್ಯಾಕ್ರೋಸಾಂಗ್ಟ್ ಆಗುವುದಿಲ್ಲ, ನಮ್ಮ ರಾಜ್ಯಾಂಗವೂ ಕೂಡ ಸ್ಯಾಕ್ರೋಸ್ಯಾಂಕ್ಟ್ ಆಗುವುದಿಲ್ಲ. ಇಡೀ ರಾಜ್ಯದ ಆಡಳಿತವನ್ನು ನಡೆಸತಕ್ಕ ಜನ ತಾವೇ ರಚನೆ ಮಾಡಿರತಕ್ಕ ಉನ್ನತ ಆಯೋಗದ ವರದಿಯನ್ನು ಇಷ್ಟು ಲಘುವಾಗಿ ಕಂಡರೆ ಅದರ ಪರಿಣಾಮ ಏನಾದೀತು, ಬಾಕಿ ಸಮಸ್ಯೆಗಳ ಬಗ್ಗೆ ಕೂಡ ಇಂಥ ಉನ್ನತ ಮಟ್ಟದ ಆಯೋಗಗಳು ಕೊಡತಕ್ಕ ವರದಿಗಳ ಬಗ್ಗೆ ಏನು ಭಾವನೆ ಜನರಲ್ಲಿ ಉಳಿದೀತು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಇನ್ನೂ ಶೋಚನೀಯವಾದ ಮಾತು ಎಂದರೆ, ಕಾಸರಗೋಡಿನ ಬಗ್ಗೆ. ತಾಳವಾಡಿ ಬಗ್ಗೆ, ಇವಕ್ಕೆಲ್ಲ ಏನು ಹೇಳುತ್ತಾರೆಂದರೆ ಅಲ್ಲಿ ಅಜಿಟೇಷನ್ ಇಲ್ಲ ಎನ್ನುವ ಮಾತು, ಇದಕ್ಕಿಂತ ಶೋಚನೀಯವಾದ ಮಾತನ್ನು ಜವಾಬ್ದಾರಿ ಜನರು ಆಡುವುದಕ್ಕೆ ಸಾಧ್ಯವಿಲ್ಲ ಎಂದು ನನಗನ್ನಿಸುತ್ತದೆ. ಪ್ರತಿಯೊಂದು ಸಾಧನೆಯನ್ನು ಕೂಡ ರಸ್ತೆಯಲ್ಲಿ ಮಾಡಬೇಕು, ಬೀದಿ ದೀಪ ಒಡೆದು ಮಾಡಬೇಕು, ರೈಲ್ವೆ ಟ್ರೈನ್ ಸುಟ್ಟು ಮಾಡಬೇಕು, ಸಿಟಿ ಬಸ್ಸುಗಳ, ಸರ್ಕಾರಿ ಕಾರುಗಳ ಗಾಜುಗಳನ್ನು ಒಡೆದು ಸುಧಾರಿಸಬೇಕು ಎಂದರೆ, ಅದೇ ಸಾಧನೆಯ ಮಾರ್ಗ ಎಂದು ಸಾಧನೆಯಾದರೆ ನಾವೂ ಕೂಡ ಅದಕ್ಕೆ ಹಿಂಜರಿಯುವುದಿಲ್ಲ ಎಂದು ನನಗನ್ನಿಸುತ್ತದೆ. ಅಂಥ ವಿಷಯಗಳನ್ನು ನಾವು ಇಂಥ ಅಸೆಂಬ್ಲಿಯಲ್ಲಿ ಬಗೆಹರಿಸಬೇಕು, ಇಂಥ ವಿಷಯಗಳನ್ನು ಸಂಬಂಧಪಟ್ಟ ಜನನಾಯಕರು ಕಲೆತು, ಬಹಳ ಸಮಾಧಾನ ಚಿತ್ತರಾಗಿ ವಿವೇಚನೆ ಮಾಡಿ, ವಾದವಿವಾದಗಳನ್ನು ನಡೆಸಿ ಬಗೆಹರಿಸಬೇಕು ಎಂದು ನಾವು ಇನ್ನೂ ಕೂಡ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಆ ನಂಬಿಕೆಯನ್ನ ನಾವು ಇಟ್ಟುಕೊಂಡಿದ್ದರೆ ಅದರಿಂದ ನಮ್ಮ ಹಿತಕ್ಕೆ ಮಾರಕವಾಗುತ್ತದೆಂದರೆ ನಾವೂ ಕೂಡ ನಮ್ಮ ನಂಬಿಕೆಯನ್ನು ಬದಲಾಯಿಸಿ ರಸ್ತೆಯಲ್ಲಿ ನಡೆಸುವ ಕೃತ್ಯಗಳಲ್ಲಿ ನಂಬಿಕೆ ಇಡಬೇಕಾಗುತ್ತದೆ ಎಂದು ನನಗನ್ನಿಸುತ್ತದೆ.

ಈ ಸಂದರ್ಭದಲ್ಲಿ ನಾವು ಏನು ಮಾಡಬೇಕು ? ಮಹಾಜನ್ ಕಮೀಷನ್ ಅವಾರ್ಡನ್ನು ನಾವು ಒಪ್ಪಿಕೊಂಡಿದ್ದೇವೆ, ಅದೇ ಪ್ರಕಾರ ನಿರ್ಣಯ ಮಾಡಿದ್ದೇವೆ. ಅದನ್ನು ಶೀಘ್ರಗತಿಯಲ್ಲಿ ಜಾರಿಯಲ್ಲಿ ಕೊಡಬೇಕೆಂದು ಒತ್ತಾಯ ಮಾಡಿದರೂ ಕೂಡ ಅದು ಕೇವಲ ಅರಣ್ಯರೋದನವಾಗಿದೆ. ಅದನ್ನು ಜಾರಿಗೆ ಕೊಡುವ ಬದಲು ಅದನ್ನು ಕಸದ ಬುಟ್ಟಿಗೆ ಎಸೆದು, ಬೇರೆ ರೀತಿಯಲ್ಲಿ ನಮ್ಮ ಮೇಲೆ ಹೇರುವ ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಇದು ಯಾವುದೇ ಪಕ್ಷದ ಪ್ರಶ್ನೆಯಲ್ಲ, ಇಂಡಿಕೇಟ್ ಸಿಂಡಿಕೇಟ್ ಪ್ರಶ್ನೆಯಲ್ಲ, ಒಂದೊಂದು ಪಕ್ಷದವರೂ ತಮ್ಮ ರಾಜಕೀಯ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕಾದ ಪ್ರಶ್ನೆಯಲ್ಲ. ಇದು ಇಡೀ ರಾಜ್ಯದ ಪ್ರಶ್ನೆ, ನಮ್ಮೆಲ್ಲರ ಅಭಿಮಾನದ ಪ್ರಶ್ನೆ, ನಮ್ಮ ಅಸ್ತಿತ್ವದ ಪ್ರಶ್ನೆ, ಹೀಗಿರತಕ್ಕಂಥ ಪ್ರಶ್ನೆಯನ್ನು ನಾವು ಬಹಳ ಗುರುತ್ವದಿಂದ ನೋಡಬೇಕಾಗಿದೆ. ಅದಕ್ಕಾಗಿ ನಾವು ಹಿಂದೆ ಮಾಡಿರುವಂಥ ನಿರ್ಣಯವನ್ನು ಕೇವಲ ಪುನರುಚ್ಚಾರಣೆ ಮಾಡಿದರೆ ಸಾಲದು. ನಾವು ಈ ಹೊತ್ತು, ತಕ್ಷಣ ಈ ಸಭೆಯ ಸದಸ್ಯರನ್ನು ಒಳಗೊಂಡಿರತಕ್ಕ ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡಿರತಕ್ಕ ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡಿರತಕ್ಕ ಒಂದು ಪ್ರಾತಿನಿಧಿಕ ಮಂಡಳಿಯನ್ನು, ಒಂದು ಶಿಷ್ಟಮಂಡಳಿಯನ್ನು ಡೆಲ್ಲಿಗೆ ಕಳುಹಿಸಿಕೊಟ್ಟು ಅಲ್ಲಿರತಕ್ಕ ಎಲ್ಲ ಪಾರ್ಲಿಮೆಂಟ್ ಸದಸ್ಯರಿಗೆ, ಮಂತ್ರಿಗಳಿಗೆ, ಪ್ರಧಾನ ಮಂತ್ರಿಗಳಿಗೆ, ಇದು ಇಡೀ

(ಶ್ರೀ ಕೆ. ಎಚ್. ಶ್ರೀನಿವಾಸ್)

ಕನ್ನಡ ರಾಜ್ಯದ ಅಸ್ತಿತ್ವದ ಪ್ರಶ್ನೆ, ಇದರಲ್ಲಿ ರಾಜಕೀಯ ಮಾಡುವುದಕ್ಕೆ ಒಪ್ಪುವುದಿಲ್ಲ, ಇದರಲ್ಲಿ ಯಾವುದೇ ರೀತಿಯ ರಾಜಕೀಯಕ್ಕೆ ಅವಕಾಶವಿಲ್ಲ, ಈ ವಿಷಯದಲ್ಲಿ ಸಂಪೂರ್ಣವಾಗಿ ಒಂದಾಗಿದ್ದೇವೆ ಎನ್ನುವುದನ್ನು ಮನವರಿಕೆ ಮಾಡಿಕೊಡುವುದು ಅತ್ಯಂತ ಅಗತ್ಯವಾದ ವಿಷಯವೆಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ನಾವು ಈ ಹೊತ್ತು ಈ ವಿಷಯವನ್ನು ಒಗ್ಗಟ್ಟಿನಿಂದ ಎದುರಿಸುದ್ದೇವೆಂಧಾದರೆ ಬಹುಶಃ ನಮ್ಮ ಮೇಲೆ ಯಾವುದೇ ಸಕಾರಣದಿಂದ ಕೂಡಿಲ್ಲದೆ ಇರತಕ್ಕ ನಿರ್ಧಾರವನ್ನು ಹೇರುವಂಥ ಧೈರ್ಯ ಕೇಂದ್ರ ಸರ್ಕಾರಕ್ಕೆ ಬರಲಾರದು. ಹಾಗೆ ನೋಡದೆ ನಾವು ಬೇರೆ ದೃಷ್ಟಿಕೋನದಿಂದ ನೋಡಿದರೆ, ನಾವು ಐಕಮತ್ಯದಿಂದ ಇಲ್ಲದೆ ನಮ್ಮಲ್ಲಿ ಅನೈಕ್ಯತೆಯನ್ನು ಬೆಳೆಸಿಕೊಂಡರೆ ನಮ್ಮ ಅತ್ಮನಾಶಕ್ಕೆ ಹಾದಿಯನ್ನು ಮಾಡುತ್ತೇವೆ. ಆದ್ದರಿಂದ ನಾವು ಸೂಕ್ತವಾದ ನಿರ್ಣಯವನ್ನು ಕೈಗೊಳ್ಳಬೇಕು. ಒಬ್ಬೊಬ್ಬರು ಒಂದೊಂದು ಸಬ್‌ಸ್ಟಿಟ್ಯೂಟ್ ಮೋಷನ್ ಅದರಮೇಲೆ ಕಳುಹಿಸುವುದು ಸಲ್ಲದು. ನಮ್ಮಲ್ಲಿನ ಎಲ್ಲ ಪಕ್ಷದ ಮುಖಂಡರೂ ಸೇರಿ ನಮ್ಮ ಭಾವನೆಗಳು ಏನಿವೆ, ನಮ್ಮ ವಾದವೇನಿದೆ, ನಮ್ಮ ರಾಜ್ಯದ ಭಾವನೆ ಏನಿದೆ. ಅದನ್ನು ಪ್ರತಿಬಿಂಬಿಸುವಂಥ ನಿರ್ಣಯವನ್ನು ನಾವು ಒಮ್ಮತದಿಂದ ಈ ಸದನದಲ್ಲಿ ಪಾಸ್ ಮಾಡಬೇಕು ಮತ್ತು ಸರಿಯಾದ ಡೆಲಿಗೇಷನ್ ಕಳುಹಿಸಿ ಕೇಂದ್ರ ಸರ್ಕಾರದವರಿಗೆ ಹಾಗೂ ಪಾರ್ಲಿಮೆಂಟ್ ಸದಸ್ಯರಿಗೆ ಮನವರಿಕೆ ಮಾಡಿಕೊಳ್ಳಬೇಕು ಎಂದು ಹೇಳಿ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. P. KADAM (Karwar).—Sir, I am not in a position to say anything by way of upholding or appreciating the Motion of hon. Member Sri V. N. Patil. I very well understand the words he has used, namely : ಕನ್ನಡ ರಾಜ್ಯದ ರಕ್ಷಣೆಗಾಗಿ, ಮಾತೃಭಾಷೆಯ ರಕ್ಷಣೆಗಾಗಿ, ಕನ್ನಡಿಗರ ಹಿತ ರಕ್ಷಣೆಗಾಗಿ I have stated often on the floor of the Assembly that if the hon. Members want our support for getting Adoni, Madaksira, Talvadi and even Kasargode, nationalist-minded people–whether they speak Marathi or any other language, will not hesitate to extend their support to them. Here, my learned friend who is a lawyer, was not in a position to give me a straight reply to my question because what he was saying was in conflict with the ideology of his own Party and with the tenets and principles upheld by his Party, namely, the C.P.I. The main principle enunciated by both the Communist Parties, the C. P. I. and the C.P.(M) is that inter State border disputes must be settled on well-laid democratic principles. What are those principles ? The principles are : Taking village as unity, contiguity of territory and linguistic majority. These are the principles which have been ennunciated by the Communist Parties ; and they have been maintained in their charter even after their split. Sri S. A. Dange happens to be the Chairman of the C.P.I. of which Sri V. N. Patil is a member.

4–30 P.M.

The other day Mr. Gopalan was here. If anybody goes through the Proceedings of Parliament when the States Re-organisation Bill was under consideration, it will be found that Mr. Gopalan himself as Leader of the Communist Party in 1956 had moved an amendment suggesting a permanent Boundary Commission which will settle all existing boundary disputes as well as those which may arise subsequently on the same principles, namely, village as the unit, linguistic majority and contiguity of territory. Here is not a question of anybody speaking any language, but here is a question whether we Indians can rise to

sublime height and strive to have national integration. Are we to go on fighting amongst ourselves as we have been fighting for the sake of small territories between Maharshtra and Mysore for the last 13 years? I care a tuppens whether this territory is here or there. But one thing has been proved by history that language has got the greatest impact on culture. This has been proved by European history because even after the fall of Napoleon the people there claimed a status for their language because it had the greatest impact on their culture. Here in India we have people speaking so many languages. It was the cry of the Indian National Congress to have linguistic States so that local people may have education in their own language, carry on the administration in their own language and have expansion in every way in their own language. That was the principle enunciated during the entire freedom movement. Can we go back upon it simply because we are independent now?

(MR. SPEAKER in the Chair)

We cannot go back on these principles. They are very relevant. The root cause for raising this issue are the poor Marathi people from Karwar, Bidar and Belgaum. These people have repeatedly sent their representatives to the Assembly and have elected their representatives to the Village Panchayats and Taluk Boards and have passed almost unanimous resolutions demanding their merger with Maharashtra. Because these people speak a different language and have a different culture, after the reorganisation of States we have been denied educational facilities, social and cultural development. We have been denied employment and we have been subjugated and we are treated as the slaves of the Government of Mysore. How long are we to tolerate this situation? Therefore, with the utmost vehemence at our command we demand that these areas should go to Maharashtra on the candid principle of village as unit, linguistic majority and contiguity of territory. I support the principle enunciated by the hon. Member Sri Srinivas. We must be guided by the interests of the entire country and we must take into consideration the question of national integration. Let him convince his party about these principles. These are principles which are sacred and which have been proved to be correct not only here but even in the U.S.S.R. This is an issue which has been burning for the last so many years and it has to be solved once for all so that we may all live together peacefully and amicably and help each other.

Then, Sir, somebody said that the Mahajan Commission recommendation is an award. What is an award is defined in the Indian Arbitration Act and under that this can never be an award. At the most it is only a recommendation which the Government of India may consider. I am of the opinion that the Mahajan Commission report is a fallacious report, perverse to the core and not based on any uniform principle. The principle that has been adopted varies from place to place. It is

(SRI B. P. KADAM)

most disadvantageous to Maharashtra. He seems to have taken a partisan attitude. This report is most unprincipled. Its proper place is in the waste paper basket and it must be sent to its proper place and nowhere else. Somebody said that we must be prepared for "Atmabali" I fully disagree with that. We should not fight amongst ourselves, because after all we are Indians and we should help each other because fighting amongst ourselves will weaken us and not promote the cause of national integration. If the country is weakened, nobody is safe. So I agree that this issue must be solved on certain well-laid down and accepted principle so that India can progress towards its goal.

My friend Sri V. N. Patil must know that even in the U.S.S.R. there are linguistic States. I asked him a straight question, but he was just hesitating to give a straight answer. Let me tell him that no less a person than the former President of India Dr. Radhakrishnan after his tour of the Soviet Union has paid tributes to that country and said that in the Soviet Union there are so many linguistic states on well-laid down principles and there is no friction there. Let my friend Sri V. N. Patil understand that and let him not fight shy to admit it. The linguistic stages there are called nationalities.

Sri RAMAKRISHNA HEGDE.—Let me tell the hon. Member that I had been to the Soviet Union and I had toured the Soviet Union for 15 days and there are no linguistic States there.

Sri B. P. KADAM.—I have read several books on the Soviet Union and I have also quoted no less a person than the former President of India Dr. Radhakrishnan. Let my friend not claim monopoly of knowledge about the Soviet Union simply because he has gone to Soviet Union. I would like to ask him whether he toured during the day or during the night ?

The representatives of Village Panchayats and Taluk Boards in Karwar, Supa and Haliyal have unanimously passed resolutions. Out of 21 Village Panchayats, 15 Village Panchayats are controlled by Marathi-speaking people. In spite of that the Mahajan Commission has come to a perverse conclusion. The same thing has been done in Khanapur, Bhalki and Bidar. These elected representatives have passed resolutions that they want to be merged with Maharashtra.

Sri G. CHANDRAKANT.—What about Sholapur ?

Sri B. P. KADAM.—I have seen the proceedings of the former Hyderabad Assembly about Bhalki and Bidar and I have quoted them here also. Some Hon. Member said about Matunga. It is in Bombay City in Maharashtra. Let him not think about it.

Sri V. N. PATIL.—What about Sholapur ? Why don't you hand over Sholapur to Mysore ?

Sri B. P. KADAM.—We are prepared to hand over any area if the Government of India is considering on some principles the question of handing over the territories. I do believe that the Kannada-speaking areas must go to Mysore and the Marathi-speaking areas must go to Maharastra. The same is the case with Sholapur areas also.

Sri SHARANGOUDA INAMDAR.—What is applied to villages and areas should also be applied to cities also. The same principle should be applied to Belgaum City.

Sri B. P. KADAM.—The principle that once adopted should always be adopted to cities, towns and villages also. I care a little for cities. As I have stated earlier, the Kannada-speaking areas must come to Mysore and the same theory must be followed in the case of Marathi-speaking areas. The Government of India have sent some *ad hoc* suggestions. We are opposed to those suggestions. We want a solution on principles alone. If a principle is conceded that areas from Karwar and Bidar Districts are to go to Maharastra, let the Kannada-speaking areas come to Mysore. Let the Government of India be specific on some principles. The Maharastrians are not ambitious, but we want to fight on some principles. Some reasonableness should be there to decide issues. Some difficulties are created by Congres leaders. The Government of India should make up its mind to solve the burning problem. It is the sacred duty of every individual to help to solve the problem. It is the sacred duty of every citizen to help in solving this national problem and help to preserve the national integrity. The resolution moved by the hon. Member Sri V. N. Patil is not acceptable. I hope the Government of Mysore will help to find a solution to the border issues so that there will be finality for this issue and the people of border areas would be able to live in a cordial atmosphere.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಕನಿಷ್ಠ 45 ನಿಮಿಷಗಳ ಕಾಲವನ್ನಾದರೂ ದಯವಿಟ್ಟು ಕೊಡಬೇಕು. ನಾನು ಈ ಹಿಂದೆ ರಾಜ್ಯಪಾಲರ ಭಾಷಣದ ಬಗ್ಗೆ ಸಹಾ ಮಾತನಾಡುವುದಕ್ಕೆ ಅವಕಾಶವನ್ನು ಕೇಳಿರಲಿಲ್ಲ. ಮೈಸೂರು ಮತ್ತು ಮಹಾರಾಷ್ಟ್ರಗಳ ಗಡಿ ವಿವಾದದ ಬಗ್ಗೆ ನಾವೆಲ್ಲರೂ ಆ ಮಹಾಜನ್ ಅವರು ಕೊಟ್ಟಿರತಕ್ಕ ಒಂದು ವರದಿಯೇನಿತ್ತು ಅದೇ ಅಖೈರು ತೀರ್ಮಾನವೆಂದು ಭಾವಿಸಿದ್ದದು ಮತ್ತು ಅದನ್ನು ಈವರೆಗೂ ಕಾರ್ಯಗತ ಮಾಡುವುದಕ್ಕೆ ನಾವು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಇದ್ದುದು ಈ ದಿವಸ ಯಾವ ಹಂತಕ್ಕೆ ಮುಟ್ಟಿದೆ ಎಂಬುದನ್ನು ನೋಡಿದರೆ ನಾವು ರೈಲು ಗಾಡಿ ಮಾರ್ಚಾಗಿ ಹೋದ ನಂತರ ನಾವು ಗಾಡಿಯಲ್ಲಿ ಕುಳಿತುಕೊಳ್ಳುವುದಕ್ಕೆ ಹೊರಟಂತಾಗಿದೆ. ಈ ಗಡಿ ವಿವಾದವನ್ನು ನಾವು ಈ ಹಿಂದೆಯೇ ತೀರ್ಮಾನ ಮಾಡುವುದಕ್ಕೆ ಆಗ ಏನೊಂದು ಚಳವಳಿಯನ್ನು ನಾವು ಹೂಡಿದ್ದೆವೋ ಅದನ್ನು ನಾವು ಆ ದಿವಸ ಮುಂದುವರಿಸದೆ ಹಾಗೂ ಈ ವಿಚಾರದಲ್ಲಿ ಮುಂದೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ತೀರ್ಮಾನ ಮಾಡಿ ಅದಕ್ಕೆ ಸೂಕ್ತ ಸಮಿತಿಯನ್ನು ನೇಮಕ ಮಾಡಿ ಇದನ್ನು ಮುಂದುವರಿಸದೆ ಇದ್ದುದೇ ಈ ದಿವಸ ಇಷ್ಟಕ್ಕೆಲ್ಲಾ ಕಾರಣವಾಯಿತು ಎಂದು ನನಗೆ ಅನಿಸುತ್ತಿದೆ.

ಆದರೆ ಶ್ರೀಮಾನ್ ಕದಂರವರು ಬಹಳ ಪ್ರಿನ್‌ಸಿಪಲ್ ಬಗ್ಗೆ ಮಾತನಾಡಿದ್ದಾರೆ. ಹಾಗೆ ಅವರು ಒಂದು ತತ್ವವನ್ನು ಅನುಸರಿಸಿ ನಡೆಯತಕ್ಕವರಾಗಿದ್ದರೆ ಈ ಹಿಂದೆ ಅವರು ಏತಕ್ಕೆ ಆ ಮಹಾಜನ್ ಕಮಿಷನ್ನನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡಿದರು? ಹಾಗೇ ಅವರೇ ಅದನ್ನು ಆ ದಿನ ಒತ್ತಾಯ ಮಾಡಿ ಆ ಕಮಿಟಿಯು ತನ್ನ ವರದಿಯನ್ನು ಕೊಟ್ಟ ಮೇಲೆ

(ಶ್ರೀ ಎಸ್. ಭೀಮಣ್ಣ)

ಅದು ತಮಗೆ ಅನುಕೂಲವಾಗಿಲ್ಲ ಎಂದು ತತ್ವಗಳನ್ನು ಗಾಳಿಗೆ ತೂರಿ ಈಗ ಬೇರೆ ಹಾದಿ ಹಿಡಿದು ಮಾತನಾಡುತ್ತಿದ್ದರೂ ಅವರು ಬಹಳ ಪ್ರಿನ್ಸಿಪಲ್ಲಿಗೆ ಹೊಡೆದಾಡತಕ್ಕವರೆಂದು ಹೇಳುತ್ತಿರುವುದರಲ್ಲಿ ಅರ್ಥವಿಲ್ಲ. ಈ ವಿಚಾರದಲ್ಲಿ ಮಹಾಜನ್ ಕಮೀಷನ್‌ಗಿಂತಲೂ ಹಿಂದೆ ನೇಮಕವಾಗಿದ್ದ ಫಜಲಾಲಿ ಕಮೀಷನ್ನಿನವರು 4—6 ವರ್ಷಗಳ ಕಾಲ ಇಡೀ ದೇಶವನ್ನೆಲ್ಲಾ ಸುತ್ತಿ ಎಲ್ಲಾ ಅಂಶಗಳನ್ನೂ ವಿಚಾರ ಮಾಡಿ ಅವರು ಒಂದು ಅಖೈರು ವರದಿಯನ್ನು ಒಪ್ಪಿಸಿದ್ದರು. ಹಿಂದೆ ನಮ್ಮ ಪಾರ್ಲಿಯಮೆಂಟಿನಲ್ಲಿ ದೀರ್ಘವಾಗಿ ಚರ್ಚೆ ನಡೆದು ಅದರ ಮೇಲೆ ಒಂದು ತೀರ್ಮಾನವನ್ನು ಮಾಡಿದ್ದಾಗಿದೆ. ನಾವು ಈ ದಿವಸ ನಮ್ಮ ಆಡಳಿತವನ್ನು ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ನಡೆಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿರುವ ನಾವು ಒಂದಾವರ್ತಿ ಆದ ತೀರ್ಮಾನಕ್ಕೆ ಮನ್ನಣೆ ಕೊಡದೆ, ತಮಗೇನು ಸೊಗಸುತ್ತದೋ ಅಂಥ ಒಂದು ತೀರ್ಮಾನ ಸಿಕ್ಕುವವರೆಗೂ ಹೀಗೆ ತಕರಾರು ಮಾಡುತ್ತಾ ಹೋಗುವುದು ಯಾವ ಮಾದರಿಯ ಪ್ರಜಾಪ್ರಭುತ್ವ? ನಮಗೆ ಇಂಥ ಪ್ರಜಾಪ್ರಭುತ್ವಕ್ಕಿಂತ ಆ ಹಿಟ್ಲರಿಜಂ ಮತ್ತು ನಾಜಿಇಜಂಗಳೇ ಒಳ್ಳೆಯದೆಂದು ಹೇಳಬೇಕಾಗುತ್ತದೆ. ಈ ವಿಚಾರ ಒಂದಾವರ್ತಿ ರಾಜ್ಯ ಪುನರ್ವಿಂಗಡಣೆಯ ಆಯೋಗದವರಿಂದ ತೀರ್ಮಾನವಾಗಿದ್ದು ಅದನ್ನು ಪಾರ್ಲಿಯಮೆಂಟು ಅಕ್ಷರಶಃ ಒಪ್ಪಿಕೊಂಡಿದ್ದರೂ ಮತ್ತೆ ಅದರ ಬಗ್ಗೆ ಇನ್ನೊಂದು ಕಮಿಷನ್ನನ್ನು ನೇಮಕ ಮಾಡುವಂತೆ ಒತ್ತಾಯ ಮಾಡಿದವರೂ ಈ ಮಹಾರಾಷ್ಟ್ರೀಯರೇ; ಅದಕ್ಕೆ ಮೈಸೂರಿನ ಜನತೆ ಒಪ್ಪಿರಲಿಲ್ಲ. ಅದಕ್ಕಾಗಿ ಸುಮಾರು 1-2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾಯಿತು. ಹಾಗೆ ಖರ್ಚು ಮಾಡಿ ಅವರು ದೇಶವನ್ನೆಲ್ಲಾ ತಿರುಗಿ ಒಂದು ವರದಿಯನ್ನು ಕೊಟ್ಟನಂತರ ಅದಕ್ಕೆ ಮನ್ನಣೆಯನ್ನು ಕೊಡಬೇಕಾದ್ದು ಎಲ್ಲರ ಕರ್ತವ್ಯ. ಅಂಥ ಯಾವ ಒಂದು ಪ್ರಿನ್ಸಿಪಲ್ಲಿಗೂ ಒಪ್ಪದ ಇವರು ಈ ದಿವಸ ಹೇಗೆ ಪ್ರಿನ್ಸಿಪಲ್ ಅನುಸರಿಸಿ ಮಾತನಾಡುತ್ತಿದ್ದಾರೆ? ಇವರು ಮಾಡುತಕ್ಕ ವಾದ ಅದು ನಾಜಿಯಿಸಂಗಿಂತ ಬಹಳ ಕ್ರೂರವಾದುದಾಗಿದೆ. ನಮಗೆ ಇದೊಂದು ಬಹಳ ದುರ್ದೈವದ ದಿವಸ; ಈ ದಿವಸ ಮಾತನಾಡುವುದಕ್ಕೆ ನನಗೆ ಬಹಳ ವ್ಯಥೆಯಾಗುತ್ತದೆ. ನಾವು ಯಾವುದೇ ಒಂದು ವಿಚಾರವನ್ನಾಗಲೀ ಅದು ಸೀಮಾ ಮೀರಿ ಹೋದ ಮೇಲೆ ಏನು ಮಾತನಾಡಿದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಈ ದಿವಸ ನಮ್ಮ ಪರಿಸ್ಥಿತಿ ಹಾಗಾಗಿದೆ. ಹಿಂದೇನು ಆ ಒಂದು ಭಾರತ ಮತ್ತು ಪಾಕೀಸ್ಥಾನಗಳೆಂದು ಎರಡು ದೇಶಗಳನ್ನು ನಿರ್ಮಾಣ ಮಾಡಲಾಯಿತೋ ಅಂದು ದೇಶದಲ್ಲಿ ರಕ್ತದ ಕೋಡಿ ಹರಿಯಿತು. ಆ ದಿವಸ ಅವರನ್ನು ಒಂದು ಭಾಷೆಯ ಆಧಾರದ ಮೇಲೆ, ಅವರು ಆ ಅರಬ್ಬಿ ಭಾಷೆಯನ್ನಾಗಲೀ ಅಥವಾ ಪರ್ಷೀ ಭಾಷೆಯನ್ನಾಗಲಿ ಮಾತನಾಡುತ್ತಿದ್ದಾರೆಂದು ಅವರಿಗೆ ನಾವು ಆ ಪಾಕಿಸ್ಥಾನವನ್ನು ನಿರ್ಮಾಣ ಮಾಡಲಿಲ್ಲ. ಹಾಗಿದ್ದರೂ ಈ ದಿವಸ ದೇಶಕಟ್ಟುವುದಕ್ಕಾಗೇ ಕುಳಿತಿದ್ದೇವೆಂದು ಹೇಳತಕ್ಕ ಜನರು ಅಧಿಕಾರವನ್ನು ಕೈಲಿಟ್ಟುಕೊಂಡು ಕೆಲವರಿಗೆ ಈ ಭಾಷಾ ಸೆರೆಯನ್ನು ಕುಡಿಸಿ, ಆ ರಾಕ್ಷಸಿಯ ಕೈಗೆ ಸಿಕ್ಕಿ ಜನತೆ ದೇಶದಲ್ಲಿ ಹೊಡೆದಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದು ಬಹಳ ದುರ್ದೈವ ಸಂಗತಿ.

ಪ್ರಿನ್ಸಿಪಲ್ ಎಂದರೆ ಏನು? ಪ್ರಿನ್ಸಿಪಲ್ ಎನ್ನುವುದಕ್ಕೆ ಅರ್ಥ ಏನು? ಪ್ರಿನ್ಸಿಪಲ್ ಎನ್ನುವುದಕ್ಕೆ ಡೆಫನಿಷನ್ ಏನು ಎಂದು ನಾನು ಕೇಳುತ್ತೇನೆ. ಪಾರ್ಲಿಮೆಂಟ್‌ನಲ್ಲಾಗಲಿ, ಯಾವ ರಾಜ್ಯದಲ್ಲೇ ಆಗಲಿ ಒಂದು ವಿಷಯವನ್ನು ಒಂದು ಪ್ರಿನ್ಸಿಪಲ್ ಪ್ರಕಾರ ಒಂದು ಸಾರಿ ತೀರ್ಮಾನ ಮಾಡಿದ ನಂತರ ಮತ್ತೊಮ್ಮೆ ಬೇರೆ ರೀತಿಯಾಗಿ ಹೋಗುವುದು ಪ್ರಿನ್ಸಿಪಲ್‌ಗೆ ವಿರುದ್ಧವಾಗುತ್ತದೆ ಎಂದು ನಾನು ಹೇಳುತ್ತೇನೆ. ಕೇಂದ್ರಸರ್ಕಾರದವರು ಮಹಾಜನ್ ಕಮೀಷನ್ ರಚನೆ ಮಾಡಿದರು. ಅದು ಆದನಂತರವೂ ಅವರು ವರದಿ ಕೊಟ್ಟಮೇಲೆ ಮತ್ತೊಮ್ಮೆ ಈ ರೀತಿ ಪುನರ್ವಿಮರ್ಶೆ ಮಾಡುವುದು ಇದನ್ನು ರಾಕ್ಷಸೀ ಕೃತ್ಯವೆಂದು ಹೇಳಬಹುದು. ಒಂದು ವಿಷಯದಲ್ಲಿ ಒಂದುಸಾರಿ ಫೈನಲ್ ಜಡ್ಜ್‌ಮೆಂಟ್ ಆದಮೇಲೆ ಪುನಃ ಅದನ್ನು ಬದಲಾವಣೆ ಮಾಡುವುದು ಪ್ರಿನ್ಸಿಪಲ್‌ಗೆ ವಿರುದ್ಧವಾಗುವುದರಿಂದ ಅದನ್ನು ನಾನು ಒಪ್ಪುವುದಿಲ್ಲ. ಮತ್ತು ಪಾರ್ಲಿಮೆಂಟ್‌ನಲ್ಲಿ ಆ ಬದಲಾವಣೆಗನುಗುಣವಾಗಿ ಕಾನೂನು ಪಾಸು ಮಾಡಿದರೂ ಒಪ್ಪುವುದಿಲ್ಲ. ಈ ರೀತಿ ಮಾಡುವುದು ಒಂದು ಕೆಟ್ಟ ಪರಿಸ್ಥಿತಿ ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಕುಳಿತಿತಕ್ಕಂಥ ಲೀಡರ್ಸ್ ಶಕುನಿಮಾಮನ ಹಾಗೆ ಪಾರ್ಟ್ ಮಾಡುತ್ತಿದ್ದಾರೆ. ಈಗಾಗಲೇ ಪಂಜಾಬ-ಹರಿಯಾಣದ ಮಧ್ಯೆ ಚಂಡೀಘಢದ ವಿಷಯ ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದರು. ಈಗ ಮೈಸೂರು-ಮಹಾರಾಷ್ಟ್ರ ಗಡಿ ಸಮಸ್ಯೆ ವಿಚಾರ ಬಂದಿದೆ. ಅದನ್ನು ಬದಲಾವಣೆ ಮಾಡುವುದಕ್ಕೆ ಸ್ಟೇಟ್ ಲೆವಲ್‌ನಲ್ಲಾಗಲಿ, ಸೆಂಟ್ರಲ್ ಲೆವಲ್‌ನಲ್ಲಾಗಲಿ ಅವಕಾಶ ಕೊಡುವುದು ಸರಿಯಲ್ಲ. ವಾಸ್ತವಿಕವಾಗಿ ನೋಡಿದರೆ ಅವರ ವಿಚಾರ ನಮಗೆ ಗೊತ್ತಾಗುತ್ತದೆ.

ಈ ಅಸೆಂಬ್ಲಿಯಲ್ಲಿ ಒಂದು ಸಾರಿ ಅಲ್ಲ, ಎರಡು ಸಾರಿ ಅಲ್ಲ, ಈ ವಿಷಯ ಬಗ್ಗೆ 3–4 ಸಾರಿ ಚರ್ಚೆನಡೆದು ರೆಸಲ್ಯೂಷನ್ ಮಾಡಿ ಆಯಿತು. ಸರ್ಕಾರವೇ ಆಗಲಿ, ಸಾರ್ವಜನಿಕರೇ ಆಗಲಿ ಈ ವಿಷಯ ನಾಲ್ಕು ಸಾರಿ ಚರ್ಚೆ ಮಾಡಬೇಕಾಗಿ ಬಂದಿದೆ. ಈವೊತ್ತು ಸಿಂಡಿಕೇಟ್, ಇಂಡಿಕೇಟ್ ಆಗಿ ಕೇಂದ್ರ ಸರ್ಕಾರ ಸ್ಥಿರ ಇಲ್ಲದೆ ಬೆಂಕಿ ಹತ್ತಿ ಬೂದಿ ಆದನಂತರ ಈ ವಿಚಾರ ಮಾತ್ತೆ ಎತ್ತಿದ್ದಾರೆ. ಈ ಅಸೆಂಬ್ಲಿಯಲ್ಲಿ ಚರ್ಚೆ ಆಗಿ ರೆಸಲ್ಯೂಷನ್ ಪಾಸ್ ಆಗಿದೆ. ಇದಕ್ಕೆ ಒಂದು ಆಕ್ಷನ್ ಕಮಿಟಿ ಫಾರಂ ಮಾಡಿ. ಅವರು ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಿ. ನಾನು ಹೇಳುವುದು ಇದು ಮೊದಲನೇ ಸಾರಿ ಅಲ್ಲ. ಮೂರು ವರ್ಷದಿಂದಲೂ ಹೇಳುತ್ತಾ ಇದ್ದೇನೆ. ಇದರ ಬಗ್ಗೆ ಶಾಂತರೀತಿಯಿಂದ ರೆಪ್ರೆಸೆಂಟೇಷನ್ ಮಾಡಿದ್ದಾಯಿತು. ಈವೊತ್ತಿನ ದಿವಸ ಮಹಾರಾಷ್ಟ್ರಕ್ಕೆ ನಾಲ್ಕು ಎಕರೆ ಭೂಮಿ ಅಲ್ಲ, ನೂರಾರು ಹಳ್ಳಿಗಳು ಅಲ್ಲಿಗೆ ಹೋದರೂ ಸಂತೋಷ. ಆದರೆ ಒಂದು ಸಾರಿ ಒಂದು ವಿಷಯ ನಿರ್ಣಯ ಆದಮೇಲೆ ಅದರ ವಿರುದ್ಧ ನಡೆದರೆ ಪ್ರಾಣ ಹೋದರೂ ಆ ಪ್ರಿನ್ಸಿಪಲ್ ಪ್ರಕಾರ ನಡೆಯಬೇಕು ಎಂದು ಹೇಳುತ್ತೇನೆ. ಈ ಸದನದ ವಿರುದ್ಧವಾಗಿ ಮಾಡುತ್ತಾ ಇರತಕ್ಕಂಥ ಮತ್ತು ಈ ರೀತಿ ಅನ್ಯಾಯ ಮಾಡುತ್ತಾ ಇರತಕ್ಕಂಥ ಕೇಂದ್ರ ಸರ್ಕಾರದವರಿಗೆ ಏನು ಒಂದು ಪ್ರಿನ್ಸಿಪಲ್ ಇದೆ ಎನ್ನುವುದನ್ನು ಎತ್ತಿ ತೋರಿಸಬೇಕಾಗಿದೆ. ಈವೊತ್ತು ಒಂದು ಘಟನಾವಳಿ ಪ್ರಕಾರ, ಸಂವಿಧಾನದ ಪ್ರಕಾರ ಒಂದು ಸಾರಿ ಡಿಸಿಷನ್ ಆದನಂತರ ಹತ್ತು ಹತ್ತು ಸಾರಿ ಈ ವಿಷಯವನ್ನು ಮತ್ತೆ ತೆಗೆದುಕೊಂಡು ಹೋಗುವುದು ಸರಿಯಲ್ಲ. ನಾವು ಅಂತರರಾಷ್ಟ್ರದ ಮಟ್ಟದಲ್ಲೂ ಏನೇನು ನಡೆಯುತ್ತಿದೆ ಎಂದು ನೋಡುತ್ತಾ ಇದ್ದೇವೆ. ಕಾಶ್ಮೀರ ಪ್ರಶ್ನೆ ಈವೊತ್ತು ಏನಾಗಿದೆ ಎಂದು ತಿಳಿದುಕೊಂಡಿದ್ದೇವೆ. ನಮ್ಮ ದೇಶದಲ್ಲಿರುವ ಜನರು ಎಲ್ಲರೂ ಒಂದೇ, ಒಂದೇ ಅಣ್ಣತಮ್ಮಂದಿರು, ಒಂದೇ ರಾಷ್ಟ್ರೀಯತ ಭಾವನೆಯಿಂದ ಕೂಡಿದವರು ಎಂದು ಹೇಳುವುದನ್ನು ಬಿಟ್ಟು ರಾಜ್ಯ ರಾಜ್ಯಗಳಲ್ಲಿ ಬಾರ್ಡರ್ ವಿಷಯದಲ್ಲಿ ಜಗಳ ತಂದು ಹಾಕುವುದನ್ನು ಉಪಯೋಗ ಮಾಡಿಕೊಂಡಿದ್ದಾರೆ. ನಮ್ಮ ಮನಸ್ಸು ಸ್ವಚ್ಛ ಇದ್ದರೆ ವಾಸ್ತವಿಕವಾಗಿ ಈ ರೀತಿ ಆಗುತ್ತಾ ಇರಲಿಲ್ಲ. 22 ವರ್ಷದಿಂದಲೂ ಪಾಕೀಸ್ತಾನದಲ್ಲಿ ಏನು ಅನ್ಯಾಯ ನಡೆಯುತ್ತಾ ಇದೆ ಎಂದು ನೋಡುತ್ತಾ ಇದ್ದೇವೆ. ಮತ್ತು ಜಯಚಂದ್, ಮೀರ್‌ಸಾದಿಕ್ ಅಲಿ ಕಾಲದಲ್ಲೂ ಏನಾಗಿತ್ತು ಎಂದು ನೋಡಿದ್ದೇವೆ. ಆದುದರಿಂದ ಈವೊತ್ತಿನ ದಿವಸ ನಾವು ಎಚ್ಚರಿಕೆಯಿಂದ ಇರಬೇಕಾಗಿದೆ ಎಂದು ಸರ್ಕಾರಕ್ಕೆ ತಿಳಿಸಬೇಕಾಗಿದೆ. ನಿಜಾಮರು ಹೋದನಂತರ ನಾವು ಸುಖವಾಗಿರಬಹುದು ಎಂದು ತಿಳಿದಿದ್ದೆವು. ಆದರೆ 22 ವರ್ಷದ ಹಿಂದಿನ ಇತಿಹಾಸ ನೋಡಿದರೆ ಆ ರಾಜ್ಯವೇ ಇದಕ್ಕಿಂತ ಒಳ್ಳೆಯದಿತ್ತು ಎಂದು ನನಗೆ ಸ್ಪಷ್ಟವಾಗಿ ಕಾಣಿಸುತ್ತಾ ಇದೆ. ಈವೊತ್ತಿನ ಪ್ರಜಾಪ್ರಭುತ್ವದಲ್ಲಿ ಏನು ಆಗುತ್ತಾ ಇದೆ ಎನ್ನುವುದನ್ನು ನೋಡುತ್ತಾ ಇದ್ದೇವೆ. ರಾಜಕೀಯ ರಂಗದಲ್ಲಿ ಇದಕ್ಕೆ ಕಲರ್ ಕೊಟ್ಟು ಈರೀತಿ ಮಾಡುತ್ತಾ ಇದ್ದಾರೆ. ಸಮಾಜದ ವ್ಯಕ್ತಿಗಳು ಕಾನೂನು, ಸಂವಿಧಾನ ರಾಷ್ಟ್ರೀಯ ಸಲುವಾಗಿ ಮಾಡಿದ್ದು ಎನ್ನುವುದನ್ನು ಗಮನಿಸುವುದಿಲ್ಲ. ಸೆಂಟ್ರಲ್ ಮಟ್ಟದಲ್ಲೇ ಆಗಲಿ, ರಾಜ್ಯ ಮಟ್ಟದಲ್ಲೇ ಆಗಲಿ ಒಂದು ಸ್ಟೇಟ್‌ನಲ್ಲಿ ಪ್ರತಿಯೊಂದು ಜಿಲ್ಲೆಯೂ ತನ್ನ ಪಕ್ಷದವರಿಗೆ ಇರಬೇಕು ಎನ್ನುವ ವಿಚಾರ ಇದೆ. ಇದಕ್ಕೆ ರಾಜಕೀಯ ರಂಗದ ಕಲರ್ ಕೊಟ್ಟಿದ್ದಾರೆ. ಇವರಿಗೆ ಯಾವ ತತ್ವವೂ ಇಲ್ಲ. ಚೈನಾ ಮತ್ತು ರಷ್ಯಾ ಏನು ಮಾಡುತ್ತಿದ್ದಾರೆ ಎಂದು ನೋಡುತ್ತಾ ಇದ್ದೇವೆ. ಹಿಂದೆ ಹಿಟ್ಲರ್ ಯಾವರೀತಿ ಮಾಡುತ್ತಾ ಇದ್ದನು ಎಂದು ನೋಡಿದ್ದೇವೆ. ಯಾವುದೇ ರಾಷ್ಟ್ರವಾಗಲಿ ಅದರ ಶಕ್ತಿಯನ್ನು ಅವಲಂಬಿಸಿ ಕಾರ್ಯಕ್ರಮ ಹಾಕಿಕೊಂಡು ತನ್ನ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುತ್ತದೆ. ಇದನ್ನು ಯೋಚನೆ ಮಾಡಬೇಕಾಗಿದೆ. ಯಾವುದೇ ಸರ್ಕಾರವಾಗಲಿ ಅವರಲ್ಲಿ ಸಂಘಟನೆ ಇಲ್ಲದಿದ್ದರೆ, ಶಕ್ತಿ ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಆಂಧ್ರವನ್ನು ಪ್ರತ್ಯೇಕ ಮಾಡುವುದಕ್ಕೆ ಪೊಟ್ಟಿ ಶ್ರೀರಾಮುಲು ಏನು ಮಾಡಿದರು ಎಂದು ನೋಡಿದ್ದೇವೆ. ಅದೇ ರೀತಿ ಮಹಾರಾಷ್ಟ್ರದವರು ಗೋವ ಸೇರಿಸಬೇಕು ಎನ್ನುವ ಬಗ್ಗೆ ಏನು ಮಾಡಿದರೆಂಬುದನ್ನು ನೋಡಿದ್ದೇವೆ. ಈ ಸರ್ಕಾರ ಈ ವಿಷಯದಲ್ಲಿ ಏನು ಮಾಡುತ್ತಾ ಇದೆ ಎಂದು ನೋಡುತ್ತಾ ಇದ್ದೇವೆ. ಈವೊತ್ತು ಸಂತ್ ಫತೇಸಿಂಗ್ ಅವರ ಉಪವಾಸ ಪರಿಣಾಮವಾಗಿ ಯಾವರೀತಿ ಚಂಡೀಘಡವನ್ನು ಹರಿಯಾಣಕ್ಕೆ ಸೇರಿಸದೆ ಪಂಜಾಬಿಗೆ ಸೇರಿಸಿದರು ಎನ್ನುವುದನ್ನೂ ನೋಡಿದ್ದೇವೆ. ಹರಿಯಾಣದಲ್ಲಿರುವ ಮಿತ್ರರಲ್ಲಿ ಸಾಕಷ್ಟು ಶಕ್ತಿ ಮತ್ತು ಸಂಘಟನೆ ಇದ್ದರೆ ಚಂಡೀಘಡ ಪಂಜಾಬಿಗೆ ಹೋಗುತ್ತಿರಲಿಲ್ಲ. "ಮೈಟ್ ಈಸ್ ರೈಟ್" ಎನ್ನುವ ಹಾಗೆ ಮುಂದೆ ಬರುವ ಈ ಜಗತ್ತಿನಲ್ಲಿ ಈರೀತಿ ಮಾಡುವುದು ಸಾಧ್ಯ ಎಂದು ಕಾಣುತ್ತದೆ. ವತ್ತರೆ ಸರಿ, ಸರಿದರೆ ಮತ್ತು ಈರೀತಿ ಮಾಡುವುದು ನ್ಯಾಯವಲ್ಲ. ಇದು ಈವೊತ್ತಿನ ಸಂವಿಧಾನದಲ್ಲಿ ಇಲ್ಲವೇ ಇರುವುದನ್ನು ಮತ್ತು ಕಾನೂನಿನಲ್ಲಿ ಏನೇನೂ ಇಲ್ಲದೇ ಇರುವುದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇವೊತ್ತು ಎಲ್ಲಿ ಏನು ಅಧಿಕಾರ ಇದೆಯೋ ಅದರಂತೆ ಮಾಡುತ್ತಾರೆ. ಮಹಾಜನ್ ಕಮೀಷನ್ ನೇಮಕ ಮಾಡಬೇಕಾದ ಕಾರಣ ಏನಿತ್ತು?

(ಶ್ರೀ ಎಸ್. ಭೀಮಣ್ಣ)

ಮತ್ತು ಇದ್ದಂಥ ಕೊಶ್ಚನ್‌ಗಳು ಸಾಲ್ವ್ ಆಗದೇ ಹೋದರೆ ಆ ಕೊಶ್ಚನ್ನೇ ಸ್ಲೋಗನ್‌ಗಳಾಗಿ ಆಗುತ್ತದೆ ಎಂದು ಜವಹರ್‌ಲಾಲ್ ನೆಹರೂರವರೇ ಹೇಳಿದ್ದಾರೆ.

5-00 P.M.

ಮಹಾಜನ್ ಆಯೋಗ ಬಂದಿದ್ದಾಗ ಈ ಪ್ರಶ್ನೆ ಹೇಗಿತ್ತು ಎನ್ನುವುದಕ್ಕೆ ಇಲ್ಲಿನ ಜನರ ಶಕ್ತಿ ಹೇಗಿದೆ ಎನ್ನುವುದನ್ನು ತೋರಿಸಲಾಗಿತ್ತು. ಇದರ ಬಗ್ಗೆ ಆಗ ನಮ್ಮ ನಾಯಕರೆಲ್ಲಾ ಸೇರಿ ಒಂದು ಮನವಿ ಕೊಟ್ಟು ಅದರಲ್ಲಿ ಎಲ್ಲ ವಿವರಗಳನ್ನೂ ಪೂರ್ಣವಾಗಿ ಕೊಟ್ಟಿರುವುದು ರಿಕಾರ್ಡಿನಲ್ಲಿ ಇದೆ. ಆಗ ಇಲ್ಲಿನ ಜನರು ಯಾವಾಗಲೂ ತಮ್ಮ ನಿಲುವೇನು ಎಂದು ಹೇಳುತ್ತಲೇ ಬಂದಿದ್ದಾರೆ. ಇದರಲ್ಲಿ ರಾಜ್ಯವನ್ನು ತುಂಡು ಮಾಡಿ ಅರ್ಧ ಭಾಗ ಈ ಕಡೆಗೆ ಅರ್ಧ ಭಾಗ ಆ ಕಡೆಗೆ ಹಂಚಬೇಕು ಎಂದು ಒಂದು ಪ್ರಯತ್ನ ಕೂಡ ಆಗಿತ್ತು. ಇವೆಲ್ಲಾ ಹೇಗೆ ಆಯಿತು ಎನ್ನುವುದು ಪ್ರಾಯಶಃ ನಮ್ಮ ಮಾನ್ಯ ಸದಸ್ಯರಾದ ಶ್ರೀ ಕದಂರವರಿಗೆ ಗೊತ್ತಿಲ್ಲ. ಪಾರ್ಲಿಮೆಂಟಿನ ಹಾಗೂ ಅಸೆಂಬ್ಲಿ ಸದಸ್ಯರುಗಳೆಲ್ಲರೂ ಆಗ ಇದ್ದ ಬೀದರು ಜಿಲ್ಲೆಯ ಒಂಬತ್ತು ತಾಲ್ಲೂಕುಗಳನ್ನೂ ಈಗಿರುವ ಹೈದರಾಬಾದು ಪ್ರದೇಶದ ತೆಲಂಗಾಣಕ್ಕೆ ಕೊಡಬೇಕು ಎಂದು ಆಗ ಬಂದಿದ್ದ ಫಜಲಾಲಿ ಕಮಿಷನ್ ಮುಂದೆ ಹೇಳಿದ್ದರು. ಇದರಲ್ಲಿ ತಾಲ್ಲೂಕು ಲೆವಲ್ ಮೇಲೆ ಹಂಚಬೇಕು ಎಂದು ಇತ್ತು. ವಿಲೇಜು ಲೆವಲ್ ಮೇಲೆ ಇಲ್ಲ ಎಂದು ಆಗಲೇ ಹೇಳಿದ್ದರು. ಆಗಿದ್ದ ರಾಜ್ಯವನ್ನು ಹತ್ತು ತುಂಡುಗಳಾಗಿ ಮಾಡಿ ಎಂದು ಹೇಳಿದಾಗ ಹಳ್ಳಿ ಹಳ್ಳಿಗಳು ಬೇರೆ, ಸರ್ಕಲ್ಲುಗಳೇ ಬೇರೆ ಎಂದು ಮಾಡುವುದು ಸರಿಯಿಲ್ಲ, ಇದು ಪ್ರಿನ್ಸಿಪಲ್‌ಗೆ ವಿರುದ್ಧ ಎಂದು ಆಗಲೇ ಹೇಳಲಾಗಿತ್ತು. ಆಗ ಇದ್ದ ಬೀದರು ಜಿಲ್ಲೆಯ ಪ್ರಮುಖರು ಎಂದರೆ ಮದರಗಣಿ ಶ್ರೀನಿವಾಸರಾವ್, ಮಾಧವ ರೆಡ್ಡಿ, ಶ್ರೀ ಬಾಪೂಜಿ ದೇಶಪಾಂಡೆ ಹಾಗೂ ಇನ್ನಿತರ 10—11 ಜನರು ಆಗಿದ್ದ ಎಂ. ಎಲ್. ಎ. ಗಳು ಮತ್ತು ಆಂಧ್ರದಲ್ಲಿದ್ದ ಎಂ. ಎಲ್. ಎ. ಗಳು ಮತ್ತು ಮಹಾರಾಷ್ಟ್ರದಲ್ಲಿದ್ದ ಎಂ. ಎಲ್. ಎಗಳು ಎಲ್ಲರೂ ಸೇರಿ ಒಂದು ರೆಸಲ್ಯೂಷನ್ ಮಾಡಿ ತಂದು ಕೊಟ್ಟಿರುವುದು ರಿಕಾರ್ಡಗಳಲ್ಲಿ ಇದೆ. ಇದರಲ್ಲಿ ನಮ್ಮ ಖಚಿತವಾದ ನಿಲುವು ಏನಿದೆ ಎನ್ನುವುದು ಗೊತ್ತಾಗುತ್ತದೆ. ಆಗ ಬಂದಿದ್ದ ಫಜಲಾಲಿ ಕಮಿಷನ್ ಮುಂದೆ ಇವನ್ನೆಲ್ಲಾ ಕೊಡಲಾಗಿದೆ ಮತ್ತು ಇವುಗಳೆಲ್ಲಾ ರಿಕಾರ್ಡುಗಳಲ್ಲಿ ಇದೆ. ಮಾನ್ಯ ಶ್ರೀ ಕದಂರವರು ಈಗಲೂ ಬೇಕಾದರೆ ಇದರ ರಿಕಾರ್ಡುಗಳು ಮತ್ತು ಫೈಲುಗಳನ್ನು ಓದಿದರೆ ಅವರಿಗೆ ಎಲ್ಲ ವಿವರಗಳೂ ಗೊತ್ತಾಗುತ್ತವೆ. ಆಗಿದ್ದ ಎಲ್ಲ ಮುಖಂಡರುಗಳೂ ಇಂತಹ ಒಂದು ನಿರ್ಣಯಕ್ಕೆ ಸೈನ್ ಮಾಡಿ ಫಜಲಾಲಿ ಕಮಿಷನ್ ಮುಂದೆ ಕೊಟ್ಟಿದ್ದಾರೆ. ಇದರ ಬಗ್ಗೆ ಆಗಿದ್ದ ಹೈದರಾಬಾದು ಅಸೆಂಬ್ಲಿಯಲ್ಲೂ ಚರ್ಚೆಯಾಗಿ ಎಲ್ಲ ಮುಖಂಡರೂ ಒಮ್ಮತದಿಂದ ತೀರ್ಮಾನಕ್ಕೆ ಬಂದಿದ್ದರು. ಇದರ ಬಗ್ಗೆ ಆಗ ಹೈದರಾಬಾದಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಬಿ. ರಾಮಕೃಷ್ಣರಾಯರು ದೆಹಲಿಗೆ ಹೋಗಿ ಪಂಡಿತ ಜವಹರಲಾಲ್ ನೆಹರೂರವರಲ್ಲಿಗೆ ಹೋಗಿ ನಮ್ಮ ಭಾಗದ ಪಾರ್ಲಿಮೆಂಟು ಸದಸ್ಯರುಗಳು ಹಾಗೂ ಎಲ್ಲ ಎಂ. ಎಲ್ ಎ. ಗಳು ಒಮ್ಮತದಿಂದ ಇಂತಹ ತೀರ್ಮಾನಕ್ಕೆ ಬಂದು ಒಪ್ಪಿದ್ದಾರೆ ಮತ್ತು ಯುನಾನಿಮಸ್ ಆಗಿ ಒಪ್ಪಿಕೊಂಡಿರುತ್ತಾರೆ ಎನ್ನುವ ವಿಚಾರವನ್ನೂ ಆಗಲೇ ತಿಳಿಸಿದ್ದರು. ಇದರಂತೆ ಬೀದರು ಜಿಲ್ಲೆಯ ನಾಲ್ಕು ತಾಲ್ಲೂಕುಗಳು ಕರ್ನಾಟಕಕ್ಕೆ, ಎರಡು ತಾಲ್ಲೂಕುಗಳು ಆಂಧ್ರದವರಿಗೆ ಮತ್ತು ಇನ್ನುಳಿದ ಮೂರು ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಎಂದು ವಿಭಾಗ ಮಾಡಿ ಕೊಡಲಾಯಿತು. ಇದರಲ್ಲಿ ಎಲ್ಲಿಯೂ ಭಾಲ್ಕಿಯಾಗಲೀ ಹುಮನಾಬಾದ್ ಆಗಲೀ ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಹೇಳಿರುವುದನ್ನು ನಾವು ನೋಡಲಿಲ್ಲ. ಇದರ ಬಗ್ಗೆ ಆಗ ಪಾರ್ಲಿಮೆಂಟಿನಲ್ಲಿ ಯಾವ ರೀತಿ ನಿರ್ಣಯವಾಗಿದೆ ಅದರಂತೆ ಇಲ್ಲಿ ಎಸ್. ಆರ್. ಸಿ. ಆಕ್ಟ್ ಬಂತು ಅದರಂತೆ ಇಲ್ಲಿಯವರೆಗೂ ನಡೆದುಕೊಂಡು ಬರುತ್ತಿದೆ. ಇದರ ಮಧ್ಯದಲ್ಲಿ ಶಕ್ತಿ ಇರುವ ಜನರು ಇಲ್ಲದ ಕಿರುಕುಳಗನ್ನು ತಂದು ಇಲ್ಲಿ ಒಂದು ರೀತಿಯ ವಾದ ಮಾಡುತ್ತಿದ್ದಾರೆ. ನಾನು ಆಗ ಕೂಡ ನಮ್ಮ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ಸು ಪ್ರೆಸಿಡೆಂಟು ಆಗಿದ್ದೆ ಮತ್ತು ಆ ನಂತರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯಾಗಿ ಕೂಡ ಕೆಲಸ ಮಾಡಿರುವುದರಿಂದ ಇದರ ವಿಚಾರಗಳೆಲ್ಲಾ ನನಗೆ ಚೆನ್ನಾಗಿ ಗೊತ್ತಿದೆ. ನಮ್ಮ ಬೀದರು ಜಿಲ್ಲೆ ಕನ್ನಡ ರಾಜ್ಯದಲ್ಲಿ ಸೇರಿ 12 ವರ್ಷಗಳಿಂದಲೂ ಇಲ್ಲಿನ ಜನರಿಗೆ ಯಾವ ರೀತಿಯ ಸೌಕರ್ಯಗಳು ಸಿಗುತ್ತಿವೆ ಮತ್ತು ಎಂತಹ ಸವಲತ್ತುಗಳನ್ನು ಜನ ಪಡೆಯುತ್ತಿದ್ದಾರೆ ಎನ್ನುವುದನ್ನು ಎಲ್ಲರೂ ನೋಡಬಹುದು. ಇಲ್ಲಿನ ಜನ ಸುಖವಾಗಿ ಜೀವನ ನಡೆಸುತ್ತಿದ್ದಾರೆ. ಇಲ್ಲಿರುವ ಪಂಚಾಯತಿಗಳಲ್ಲಿ ಹಾಗೂ ತಾಲ್ಲೂಕಾ ಬೋರ್ಡುಗಳಲ್ಲಿ ಜನರಿಗೆ ಏನೇನು ಸವಲತ್ತುಗಳು ಸಿಗುತ್ತಿವೆ ಎನ್ನುವ ವಿವರಗಳನ್ನೆಲ್ಲಾ ಮಹಜನ್ ಕಮಿಷನ್ ಬಂದಿದ್ದಾಗ ಅವರಿಗೆ

ಕೊಡಲಾಗಿದೆ ಮತ್ತು ಅವರೂ ಕೂಡ ಇದರ ಬಗ್ಗೆ ವಿಚಾರ ಮಾಡಿ ಇದರಲ್ಲಿ ಯಾವ ಹಳ್ಳಿಗಳನ್ನೂ ಮಹಾರಾಷ್ಟ್ರಕ್ಕೆ ಕೊಡಬೇಕು ಎಂದು ಹೇಳಲಿಲ್ಲ. ಹೀಗಿರುವಾಗ ಇಲ್ಲಿ ಈಗ ಮಹಾರಾಷ್ಟ್ರದ ನಾಯಕರಾಗಿರುವ ಶ್ರೀಮಾನ್ ಚವಾಣ್‌ರವರು ತಮ್ಮ ಜನಕ್ಕೆ ಅನುಕೂಲಮಾಡಬೇಕು ಎನ್ನುವ ಒಂದು ಸ್ವಾರ್ಥ ದೃಷ್ಟಿಯಿಂದ ಇಂತಹ ಸಮಾಜಘಾತುಕ ಪ್ರಯತ್ನ ಮಾಡುತ್ತಿರುವಂತೆ ಭಾಸವಾಗುತ್ತದೆ. ಇದಕ್ಕೆ ಜನರ ವಿರೋಧ ಇವೆ, ಹೀಗಿರುವಾಗ ಇಲ್ಲಿನ ಜನರನ್ನು ಸುಮ್ಮನೆ ಇಲ್ಲದ ಗೊಂದಲಕ್ಕೆ ಜನರನ್ನು ಸಿಕ್ಕಿಸಬೇಕು ಎಂದು ಇರುವ ಕಲಹಗಳಿಗೆ ಬೆಂಕಿ ಇಡುವಂತೆ ಕಾಣುತ್ತದೆ. ಇವರಲ್ಲಿ ಯಾವ ರಾಷ್ಟ್ರದ ಚಿಂತೆಯೂ ಇವರಿಗೆ ಇದ್ದ ಹಾಗೆ ಕಾಣುತ್ತಿಲ್ಲ. ಕೇವಲ ಸ್ವಾರ್ಥಕ್ಕಾಗಿ ಇಂತಹ ಒಂದು ತೀರ್ಮಾನ ಮಾಡುವಂತೆ ನಮಗೆ ಕಾಣುತ್ತದೆ. ಇದಕ್ಕೆ ನಾವೆಲ್ಲ ಈಗ ವಿಚಾರ ಮಾಡಬೇಕಾಗಿ ಬಂದಿದೆ. ಇದರಲ್ಲಿ ಯಾವ ಪಕ್ಷಗಳ ಬೇಧ ಭಾವವೂ ಇಲ್ಲದೆ ಕರ್ಣಾಟಕದಲ್ಲಿ ಜನ ಹೊಂದಿಕೊಂಡು ಇದ್ದಾರೆ. ಇದಕ್ಕೆ ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ಭಾಗದಿಂದ ಮಹಾರಾಷ್ಟ್ರದ ಕಡೆ ಹೋಗಿರುವ ಮೂರು ತಾಲ್ಲೂಕುಗಳು ಎಂದರೆ ಉದ್ಗೀರು ಹಾಗೂ ಇನ್ನೆರಡು ತಾಲ್ಲೂಕುಗಳಲ್ಲಿ ಸುಮಾರು 12 ಸಾವಿರ ಜನ ಕನ್ನಡಿಗರು ಇದ್ದು ಇಂದು ಮೂರು ಸಾವಿರಕ್ಕೆ ಇಳಿದಿದೆ ಎನ್ನುವುದು ಇಲ್ಲಿನ ರಿಕಾರ್ಡುಗಳು ತೋರಿಸುತ್ತದೆ. ಹಿಂದೆ ಇಲ್ಲಿದ್ದ 12 ಸಾವಿರ ಜನ ಕನ್ನಡಿಗರು ಬೇಕಾದಷ್ಟು ಶಾಲೆಗಳಲ್ಲಿ ಓದು ಬರಹ ಕಲಿಯಲು ಪ್ರಯತ್ನ ಮಾಡುತ್ತಿದ್ದದ್ದು ಇಂದು ಎಷ್ಟು ಮಟ್ಟಿಗೆ ಇಳಿಮುಖವಾಗಿದೆ ಎನ್ನುವುದು ಇರುವ ಸೆನ್ಸಸ್ ರಿಕಾರ್ಡುಗಳಿಂದ ನಮಗೆ ಗೊತ್ತಾಗುತ್ತದೆ. ಇವನ್ನೆಲ್ಲಾ ಮಹಜನ್ ಕಮಿಷನ್ ಬಂದಾಗ ಚೆನ್ನಾಗಿ ವಿಚಾರ ಮಾಡಿ ನೋಡಿ ಇದರ ಬಗ್ಗೆ ಸರಿಯಾದ ತೀರ್ಮಾನ ಕೊಟ್ಟಿದ್ದಾರೆ. ಇವೊತ್ತಿನ ದಿನ ಇದನ್ನು ಶಕ್ತಿ ಪ್ರಯೋಗ ಮಾಡಿ ತೋರಿಸಬೇಕೆಂದು ಕೆಲವು ನಾಯಕರು ಪ್ರಯತ್ನ ಮಾಡುತ್ತಿರುವಂತಿದೆ ಮತ್ತು ಇದನ್ನು ಹೇಗಾದರೂ ಮಾಡಿ ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಹೇಳುವುದು ದೇಶದ್ರೋಹತನ ಮತ್ತು ಸಮಾಜ ದ್ರೋಹತನ ಎಂದು ಹೇಳಲೇಬೇಕಾಗಿದೆ. ಆದುದರಿಂದ ಇದರ ಬಗ್ಗೆ ಎಲ್ಲರೂ ಸರಿಯಾಗಿ ವಿಚಾರ ಮಾಡಿ ನಾವು ಮಹಜನ್ ಕಮಿಷನ್ ತೀರ್ಪು ಏನು ಬಂದಿದೆ ಅದನ್ನು ಪೂರ್ತಿಯಾಗಿ ಕಾರ್ಯಗತವಾಗುವಂತೆ ಮಾಡಲೇಬೇಕು ಇದಕ್ಕಾಗಿ ಎಲ್ಲ ಪಾರ್ಟಿಗಳವರೂ ಒಟ್ಟಾಗಿ ನಿಲ್ಲಬೇಕು. ಇದರಲ್ಲಿ ಸಿಂಡಿಕೇಟು ಹಾಗೂ ಇಂಡಿಕೇಟು ವಿಚಾರ ಬರುವುದಿಲ್ಲ, ಇಲ್ಲಿ ಇತರ ರಾಜಕೀಯ ಪಕ್ಷಗಳು ಬರುವುದಿಲ್ಲ. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ಇದು ಎಲ್ಲ ದೇಶದ ಕನ್ನಡ ಜನರ ಪ್ರಶ್ನೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಕೇಂದ್ರ ಸರಕಾರಕ್ಕೆ ಒತ್ತಾಯ ತಂದರೆ ಅವರು ಒಪ್ಪಿಯೇ ಒಪ್ಪುತ್ತಾರೆ. ಆ ರೀತಿ ಮಹಾಜನ್ ಕಮಿಷನ್‌ವರದಿ ಒಪ್ಪುವಂತೆ ಮಾಡಲೇಬೇಕು. ಇದರಲ್ಲಿ ಭಾಷಾ ಸಂಖ್ಯೆ ಹೆಚ್ಚಿದೆ ಎಂದು ಹೇಳುವುದು ಬರೀ ಜನಕ್ಕೆ ಮರುಳು ಮಾಡುವ ಮಾತುಗಳು. ಇದರ ಬಗ್ಗೆ ಕೇಂದ್ರದವರು ವಿರೋಧವಾಗಿ ತೀರ್ಮಾನ ಮಾಡಿದರೆ ಮುಂದೆ ಭೀಕರ ಪರಿಣಾಮಗಳು ಇದರಿಂದುಂಟಾಗುತ್ತವೆ. ಇದಕ್ಕೆ ಅವಕಾಶ ಕೊಡಬಾರದು. ಭಾಲ್ಕಿಯನ್ನು ಮಹಾರಾಷ್ಟ್ರಕ್ಕೆ ಕೊಡುವುದು ಸಾಧ್ಯವೇ ಇಲ್ಲ ಎಂದು ಕೇಂದ್ರಕ್ಕೆ ಗಟ್ಟಿಯಾಗಿ ಹೇಳಲೇಬೇಕು. ಇಲ್ಲದಿದ್ದರೆ ಭಾರಿ ಚಳುವಳಿ ಮಾಡಲೇಬೇಕಾದೀತು. ಇದರ ಬಗ್ಗೆ ಆಗಲೇ ಎಸ್. ಆರ. ಸಿ. ಆಕ್ಟ್ ಆಗಿದೆ. ಇದರಂತೆ ಎಲ್ಲರೂ ಈಗ ಒಪ್ಪಲೇಬೇಕು. ಕೇಂದ್ರಸರ್ಕಾರದವರ ತೀರ್ಮಾನದ ಬಗ್ಗೆ ನಮಗೆ ಸಂತಾಪವಾಗುತ್ತಿದೆ. ಬಿದರ್ ಜಿಲ್ಲೆಯ ಅನೇಕ ಹಳ್ಳಿಗಳು ಮಹಾರಾಷ್ಟ್ರಕ್ಕೆ ಹೋಗುತ್ತವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಕದಂ ಅವರು ಹೇಳಿದರು, ಭಾಷಾ ಪ್ರೇಮದಿಂದ ಬೆಳಗಾಂನ್ನು ನಾವು ಕೇಳುತ್ತಿದ್ದೇವೆಂದು. ನಮ್ಮ ದೇಶದಲ್ಲಿ ಇಂಗ್ಲೀಷ್ ಭಾಷೆ ಕೂಡ ಕಳೆದ 200ವರ್ಷಗಳಿಂದಲೂ ಇದೆ. ಭಾಷಾ ಪ್ರೇಮ ಎಲ್ಲರಲ್ಲಿಯೂ ಕೂಡ ಇದೆ. ಇಂಗ್ಲೀಷ್ ಭಾಷೆ ಇನ್ನೂ ಸ್ವಲ್ಪ ಕಾಲ ಇರಬೇಕೆಂದು ನಾವೆಲ್ಲರೂ ಅಣ್ಣತಮ್ಮಂದಿರಂತೆ ಒಪ್ಪಿಕೊಂಡಿದ್ದೇವೆ. ಅದರಂತೆ ಮಹಾಜನ್ ಕಮೀಷನ್ ನೇಮಕ ಮಾಡುವ ವಿಚಾರದಲ್ಲಿ ಎರಡು ರಾಜ್ಯಗಳವರೂ ಒಪ್ಪಿಕೊಂಡಿದ್ದರಿಂದ ಅದರ ವರದಿಯ ಬಗ್ಗೆಯೂ ಕೂಡ ಎರಡು ರಾಜ್ಯಗಳವರೂ ಒಪ್ಪಿಕೊಳ್ಳಬೇಕು. ಇದರಲ್ಲಿ ಎರಡು ಮಾತು ಇಲ್ಲ. ವಾಸ್ತವಿಕ ಕಾರಣಗಳು ಇಲ್ಲದೆ ಮಹಾಜನ್ ವರದಿಯನ್ನು ಬದಲಾವಣೆ ಮಾಡುವುದು ಸರಿಯಲ್ಲ. ಕೇಂದ್ರಸರ್ಕಾರದವರು ಈ ವರದಿಯನ್ನೇ ಬದಲಾವಣೆ ಮಾಡದೆ ಒಪ್ಪಿಕೊಳ್ಳಬೇಕು. ಈ ವಿಚಾರದಲ್ಲಿ ಮಾನ್ಯ ವಿ. ಎನ್. ಪಾಟೀಲರು ಏನು ಒಂದು ರೆಜಲೂಷನ್ ತಂದಿದ್ದಾರೆ ಅದಕ್ಕೆ ನಾನು ಒಳ್ಳೆಯ ರೀತಿಯಿಂದ ಬೆಂಬಲಕೊಡುತ್ತೇನೆ. ಬೆಳಗಾಂ ಜೊತೆಗೆ ಬಿದರ್ ಜಿಲ್ಲೆಯ ಕೆಲವು ಭಾಗಗಳನ್ನು ಸಹ ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಕೇಂದ್ರಸರ್ಕಾರದವರು ಹೊರಟಿದ್ದಾರೆ. ಆ ರೀತಿ ಮಾಡಿದರೆ ದ್ರೋಹ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಇದನ್ನು ನಮ್ಮ ನಾಯಕರು ವಿಚಾರ ಮಾಡಬೇಕು. ಈಗಿರುವ ಪರಿಸ್ಥಿತಿಯೇ ಮುಂದುವರೆಯಬೇಕು. ನಾನು ಪ್ರಿನ್ಸಿಪಲ್ ಸಲುವಾಗಿ ಹೇಳುತ್ತಿದ್ದೇನೆ. ನಾವು ಮತ್ತು ಮಹಾರಾಷ್ಟ್ರದವರು ಭಾರತಮಾತೆಯ ಮಕ್ಕಳು. ನಮ್ಮನಮ್ಮಲ್ಲಿ ಕೇಂದ್ರಸರ್ಕಾರದವರು

(ಶ್ರೀ ಎಸ್. ಭೀಮಣ್ಣ)

ಒಡಕನ್ನು ಉಂಟುಮಾಡುವುದಕ್ಕೆ ಅವಕಾಶ ಕೊಡಬಾರದು. ಆ ರೀತಿ ಏನಾದರೂ ಮಾಡಿದರೆ ನಮ್ಮ ರಾಜ್ಯದಲ್ಲಿ ಮತ್ತೆ ಚಳುವಳಿ ಆರಂಭವಾಗುತ್ತದೆ. ಇಂತಹ ವಿಚಾರದಲ್ಲಿ ನಾವು ಶಾಂತಿಯಿಂದ ಇರುವ ಜನರು ಎಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ರಕ್ತದಲ್ಲಿಯೂ ಕೂಡ ಶೂರತ್ವ ಇದೆ. ಹಿಂದೆ ರಜಾಕರ್ ಕಾಲದಲ್ಲಿ ನಮ್ಮ ಶೂರತನವನ್ನು ತೋರಿಸಿ ಕೊಟ್ಟಿದ್ದೇವೆ. ಮತ್ತೊಮ್ಮೆ ನಮ್ಮ ಶೂರತನವನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬಾರದು. ಇದನ್ನು ಕೇಂದ್ರಸರ್ಕಾರದವರು ತಿಳಿದುಕೊಳ್ಳಬೇಕು. ಒಂದು ಪಕ್ಷದ ಮಾತನ್ನು ಕೇಂದ್ರಸರ್ಕಾರದವರು ಕೇಳಿಕೊಂಡು ಮಹಾಜನ್ ವರದಿಯನ್ನು ಬದಲಾವಣೆ ಮಾಡುವುದು ಸರಿಯಲ್ಲ. ಪ್ರಿನ್ಸಿಪಲ್ ದೃಷ್ಟಿಯಿಂದ, ಸೈದ್ಧಾಂತಿಕ ದೃಷ್ಟಿಯಿಂದ ಮಹಾಜನ್ ವರದಿಯನ್ನು ಜಾರಿ ಮಾಡಬೇಕು. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಬಹಳ ಜೋರಿನಿಂದ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮತ್ತು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನಾನು ಆಭಾರಿಯಾಗಿದ್ದೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಅಧ್ಯಕ್ಷರೇ, ಮೈಸೂರು ಮತ್ತು ಮಹಾರಾಷ್ಟ್ರ ಸೀಮೆ ವಿಷಯವಾಗಿ ಮೇಲಿಂದ ಮೇಲೆ ಉದ್ಭವವಾಗಿರುವ ಸಮಸ್ಯೆಯನ್ನು ಪರಿಶೀಲನೆ ಮಾಡಿದಾಗ ಈ ತಪ್ಪು ಎಲ್ಲಿಗೆ ಹೋಗಿದೆ ಎಂಬ ಮಾತನ್ನು ಈ ಮಾನ್ಯ ಸಭೆಯಲ್ಲಿ ವಿಚಾರ ಮಾಡಬೇಕಾಗಿದೆ. ಏಕೆಂದರೆ ಈ ಒಂದು ಸಮಸ್ಯೆಯನ್ನು ಅನೇಕ ಸಲದಿಂದ ಮಹಾರಾಷ್ಟ್ರದವರು ಎತ್ತುತ್ತಿದ್ದಾರೆ. ಮಹಾರಾಷ್ಟ್ರದವರು ಈ ರೀತಿ ಸಮಸ್ಯೆಯನ್ನು ಎತ್ತಿದಾಗ ನಮ್ಮ ನಾಯಕರು ಏನೋ ಸ್ವಲ್ಪ ಗುಡುಗು ಹಾಕಿ ನಂತರ ಸುಮ್ಮನೆ ಕೂತುಬಿಡುತ್ತಾರೆ. ಮಾನ್ಯ ನಿಜಲಿಂಗಪ್ಪನವರ ಆಳ್ವಿಕೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಪೇಶ್ವೆಯರ ಕೊನೆಯ ದೊರೆ ಬಾಜೀರಾಯ. ಇವನನ್ನು ಹುಂಡಿ ಬಾಜೀರಾಯ ಎಂದು ಕರೆಯುತ್ತಿದ್ದರು. ಇವನ ಕಾಲದಲ್ಲಿ ಪರಕೀಯರು ದಂಡೆತ್ತಿ ಬಂದಾಗ, ಹೇಳಿದನಂತೆ : ನಾನು ಮಡಿಯುಟ್ಟುಕೊಂಡು ಪೂಜೆ ಮಾಡುತ್ತಿದ್ದೇನೆ, ಯುದ್ಧ ಮಾಡಲು ಸಮಯ ಇಲ್ಲ ಎಂಬುದಾಗಿ. ಈ ಕಾರಣಗಳಿಂದ ಪೇಶ್ವೆಯರು ರಾಜ್ಯವನ್ನು ಕಳೆದುಕೊಂಡರು.

ಶ್ರೀ ಬಿ. ಪಿ. ಕದಂ.—ಪೇಶ್ವೆಯವರು ರಾಜರಾಗಿರಲಿಲ್ಲ !

ಶ್ರೀ ಕೆ. ಪಿ. ನಾಡಗೌಡ.—ಹುಬ್ಬಳ್ಳಿಯವರೆಗೆ ಪೇಶ್ವೆಯವರ ಆಳ್ವಿಕೆ ಇತ್ತು. ಇದನ್ನು ಮಾನ್ಯ ಕದಂ ಅವರು ಒಪ್ಪಿಕೊಳ್ಳಬೇಕು. ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿದರೆ ಗೊತ್ತಾಗುತ್ತದೆ. ಮೊದಲು ರಾಜ್ಯಗಳು ಯಾವ ರೀತಿ ವಿಸ್ತಾರವಾಗಿದ್ದವು, ನಂತರ ಹೇಗೆ ಸಂಕುಚಿತವಾಯಿತು ಎಂಬುದು ಇತಿಹಾಸದಿಂದ ಗೊತ್ತಾಗುತ್ತದೆ. ಹಿಂದಿನ ಅರಸರು ತಮ್ಮ ರಾಜ್ಯಗಳನ್ನು ಯಾವ ರೀತಿ ಕಳೆದುಕೊಂಡರು ಎಂಬುದು ಸಹ ಗೊತ್ತಾಗುತ್ತದೆ. ಇದೇ ಉದಾಹರಣೆಯನ್ನು ಈಗಿನ ಸನ್ನಿವೇಶಕ್ಕೂ ಕೂಡ ಇಟ್ಟುಕೊಳ್ಳಬಹುದು. ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲದ ತರುವಾಯ ಮಾನ್ಯ ವೀರೇಂದ್ರಪಾಟೀಲರ ಮಂತ್ರಿಮಂಡಲ ಬಂತು. ಯುವಕರ ಮಂತ್ರಿಮಂಡಲ ಬಂತು. ಈ ಮಂತ್ರಿಮಂಡಲದಲ್ಲಿರುವವರನ್ನು ಹುಂಡಿಬಾಜೀರಾಯನ ಮೊಮ್ಮಕ್ಕಳು ಎಂದು ಹೇಳಿದರೆ ತಪ್ಪಾಗಲಾರದು. ಮಂತ್ರಿಗಳಾದರೆ ವಾಸಕ್ಕೆ ಒಳ್ಳೆಯ ಬಂಗಲೆ ಸಿಗುತ್ತದೆ, ಓಡಾಡುವುದಕ್ಕೆ ಒಳ್ಳೆಯ ಕಾರು ಸಿಗುತ್ತದೆ, ಸುಖಮಯ ಜೀವನ ನಡೆಸಬಹುದು ಎಂಬ ಕಾರಣದಿಂದ ಮಂತ್ರಿಗಳಾಗುತ್ತಿದ್ದಾರೆ ವಿನಃ ರಾಜ್ಯಪರಿಪಾಲನೆ ಯಾವ ರೀತಿ ಮಾಡಬೇಕು ಎಂಬುದು ಈಗಿನ ಮಂತ್ರಿಗಳ ಮನಸ್ಸಿನಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇನ್ನೂ ತರುಣರು. ಅವರು ಒಳ್ಳೆಯ ಅನುಭವಿಕರಾದವರನ್ನು ಉಪಮಂತ್ರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದರೆ ಅವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಈಗ ಅನುಭವಿಕರಾದಂಥ ಉಪಮಂತ್ರಿಗಳು ಇಲ್ಲದಿರುವುದರಿಂದಲೇ ಈ ತೊಂದರೆ ಬಂದಿರುವುದು. ಈಗಿನ ಮಂತ್ರಿಮಂಡಲದಲ್ಲಿ ಒಳ್ಳೆಯ ವಿಚಾರವಂತರು ಒಬ್ಬರೂ ಇಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಈ ವಿಚಾರದಲ್ಲಿ ವಿರೋಧ ಪಕ್ಷದವರ ಸಲಹೆಗಳನ್ನು ತಗೆದುಕೊಂಡಿದ್ದರೆ ಈ ತೊಂದರೆ ಉಂಟಾಗುತ್ತಿರಲಿಲ್ಲ. ಬೆಳಗಾಂ ಮೇಲೆ ಮಹಾರಾಷ್ಟ್ರದವರ ಕಣ್ಣು ಏತಕ್ಕೆ ಇದೆ ಎಂಬುದನ್ನು ನಾನು ಅನೇಕ ಸಲ ಇದೇ ಸಭೆಯಲ್ಲಿ ಹೇಳಿದ್ದೇನೆ. ಬೆಳಗಾಂನಲ್ಲಿ, ಸೊಲ್ಲಾಪುರದಲ್ಲಿ ಮತ್ತು ಗೋವಾದಲ್ಲಿ ಮಹಾರಾಷ್ಟ್ರದವರೇ ಸೇರಿಕೊಂಡು ಏನು ಮಾಡುತ್ತಿದ್ದಾರೆಂಬುದು ಮೊದಲಿನಿಂದಲೂ ಎಲ್ಲರಿಗೂ ಗೊತ್ತಿದೆ. ಪ್ರಜಾರಾಜ್ಯದಲ್ಲಿ ರಾಜ್ಯದ ರಕ್ಷಣೆಯನ್ನು ಮಾಡುವುದು ಹೇಗೆ ಎಂದರೆ, ಬಹುಸಂಖ್ಯಾತರ ಬೆಂಬಲದಿಂದ ನಮ್ಮ ರಾಜ್ಯದ ಸೀಮೆಯನ್ನು ಭದ್ರವಾಗಿ ಕಾಪಾಡಿಕೊಳ್ಳುವುದು. ನಮ್ಮ ರಾಜ್ಯಕ್ಕೆ

ಸೇರಿದ ಒಂದು ಅಂಗುಲ ಭೂಮಿಯನ್ನು ಮಹಾರಾಷ್ಟ್ರದವರಿಗೆ ಬಿಟ್ಟುಕೊಡುವುದಿಲ್ಲ ಎಂಬುದಾಗಿ ಉಚ್ಚಕಂಠದಿಂದ ಮಾನ್ಯ ವೀರೇಂದ್ರಪಾಟೀಲರವರು ಬೆಳಗಾಂನಲ್ಲಿ ಮೊನ್ನೆ ಶಪಥ ಮಾಡಿದ್ದಾರೆ. ಮೊದಲಿನಿಂದಲೂ ಕೂಡ ಈ ಬಗ್ಗೆ ಶ್ರದ್ಧೆ ತೆಗೆದುಕೊಂಡಿದ್ದರೆ ಇವತ್ತಿನದಿವಸ ಮಹಾರಾಷ್ಟ್ರದವರು ಬೆಳಗಾಂನ್ನು ಕೇಳುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಹಿಡ್‌ಕಲ್ ಡ್ಯಾಮ್ ಕಟ್ಟುವ ಸಮಯದಲ್ಲಿ ಮುಳುಗಡೆಯಾದಂಥ ಪ್ರದೇಶದ ಜನರಿಗೆ ಬೆಳಗಾಂನಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದರೆ ಅಲ್ಲಿ ಕನ್ನಡಿಗರ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಈ ಕಡೆಗೆ ಸರ್ಕಾರದವರು ದೃಷ್ಟಿಯನ್ನು ಹರಿಸಲಿಲ್ಲ. ಕನ್ನಡಿಗರ ಸಂಖ್ಯೆ ಬೆಳಗಾಂನಲ್ಲಿ ಜಾಸ್ತಿಯಾಗುವುದಕ್ಕೆ ಕಳೆದ 10–12 ವರ್ಷಗಳಿಂದ ಈ ಸರ್ಕಾರದವರು ಯಾವ ಮುನ್ನೆಚ್ಚರಿಕೆ ಕ್ರಮವನ್ನು ಸಹ ತೆಗೆದುಕೊಳ್ಳಲಿಲ್ಲ. ಅಂದರೆ ಇವರಿಗೆ ದಕ್ಷತೆ ಇಲ್ಲ ಎಂದು ಹೇಳಬಹುದು. ಇವತ್ತಿನದಿವಸ ಬೆಳಗಾಂನಲ್ಲಿ ಕನ್ನಡ ಮಾತನಾಡುವ ಕ್ಷೌರಿಕರು ಇಲ್ಲ. ಇವತ್ತಿನದಿವಸ ಬೆಳಗಾಂ ಬಗ್ಗೆ ಬಂಡವಾಳಷಾಹಿಗಳಿಗೆ ಆಗಲೀ, ಉದ್ದಿಮೆದಾರರಿಗಾಗಲೀ, ಜಮೀನುದಾರರಿಗಾಗಲೀ ಆಸಕ್ತಿ ಇಲ್ಲ. ಇವರಿಗೆ ಬೆಳಗಾಂ ಮೈಸೂರಿನಲ್ಲಿಯೇ ಇದ್ದರೂ ಒಂದೇ, ಮಹಾರಾಷ್ಟ್ರಕ್ಕೆ ಹೋದರೂ ಒಂದೇ.

ಬೆಳಗಾಮು ಮಹಾರಾಷ್ಟ್ರದವರಿಗೆ ಯಾರಿಗೆ ಬೇಕಾಗಿದೆ ಎಂದರೆ ಸಾಧಾರಣವಾಗಿ ರಾಜಕಾರಣಿಗಳಿಗೆ ಬೇಕಾಗಿದೆ. ಬೆಳಗಾಮು ಬಂಡವಾಳಷಾಹಿಗಳಿಗೆ ಬೇಕಾಗಿಲ್ಲ, ಉದ್ದಿಮೆದಾರರಿಗೆ ಬೇಕಾಗಿಲ್ಲ ಮಹಾರಾಷ್ಟ್ರ ಏಕೀಕರಣ ಪಕ್ಷದವರಿಗೆ ಬೆಳಗಾವಿ ಬೇಕಾಗಿದೆ. ಇವೊತ್ತಿನ ದಿವಸ ಸಾಮಾನ್ಯವಾಗಿ ಬೆಳಗಾವಿಯಿಂದ ಮಹಾರಾಷ್ಟ್ರ ಏಕೀಕರಣ ಪಕ್ಷದವರೇ ಪದೇ ಪದೇ ಚುನಾವಣೆಯಲ್ಲಿ ಆರಿಸಿ ಬರುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಮಹಾರಾಷ್ಟ್ರದ ಕಾಂಗ್ರೆಸ್ ಕಮಿಟಿಯವರು ಲಕ್ಷಗಟ್ಟಲೇ ಹಣವನ್ನು ಚುನಾವಣೆಯಲ್ಲಿ ಖರ್ಚು ಮಾಡಿ ಮಹಾರಾಷ್ಟ್ರ ಏಕೀಕರಣ ಪಕ್ಷದವರನ್ನೇ ಚುನಾವಣೆಯಲ್ಲಿ ಆರಿಸಿ ತರುತ್ತಾರೆ. ನಮ್ಮ ಸರ್ಕಾರದವರು ಯಾರೋ ಶ್ರೀಮಂತರಿಗೆ ಕಾಂಗ್ರೆಸ್ ಟಿಕೇಟ್ ಕೊಟ್ಟು ಅವನನ್ನು ಚುನಾವಣೆಯಲ್ಲಿ ಕೆಡವಿ ಹಾಳು ಮಾಡತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ನಮ್ಮಲ್ಲಿ ಮುಂದಾಲೋಚನೆ ಇಲ್ಲದೇ ಇರುವುದು. ನಮ್ಮ ಸರ್ಕಾರದವರು ಕಲ್ಕತ್ತಾ ಮತ್ತು ಮುಂಬೈ ನಗರಗಳಿಂದ ಉದ್ದಿಮೆದಾರರನ್ನು ಆಮಂತ್ರಣ ಮಾಡುತ್ತಾರೆ. ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಕೊಡುತ್ತಾರೆ. ಅವರು ಬೆಳಗಾಮಿನಲ್ಲಿ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇವೆಂದು ಒಪ್ಪಿಕೊಳ್ಳುತ್ತಾರೆ, ಅವರು ಬರುವಾಗ ತಮ್ಮ ನೌಕರರನ್ನು ಕೆಲಸಗಾರರನ್ನು ಆ ಫ್ಯಾಕ್ಟರಿಗೆ ಕರೆದುಕೊಂಡು ಬರುತ್ತಾರೆ. ಆ ಫ್ಯಾಕ್ಟರಿಗಳಲ್ಲಿ ಕನ್ನಡಿಗರಿಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಕೊಡುವುದಿಲ್ಲ. ಬೆಳಗಾಮಿನ ಮುನಿಸಿಪಾಲಿಟಿಯು ಮಹಾರಾಷ್ಟ್ರೀಯರ ಕೈಯಲ್ಲಿರುವುದರಿಂದ ನಮ್ಮ ಅಸೆಂಬ್ಲಿಗೆ ಬೆಳಗಾವಿನಿಂದ ಮಹಾರಾಷ್ಟ್ರೀಯರೇ ಪದೇಪದೇ ಆರಿಸಿ ಬರುತ್ತಿದ್ದಾರೆ. ಆದ್ದರಿಂದ ನಮಗೆ ಕನ್ನಡಿಗರ ಬೆಂಬಲ ದೊರಕಬೇಕಾದರೆ ಬೆಳಗಾಮ್ ಮತ್ತು ಸೊಲ್ಲಾಪುರದಲ್ಲಿ ಹೆಚ್ಚು ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡಿ ಅದರಲ್ಲಿ ಕನ್ನಡಿಗರಿಗೆ ಉದ್ಯೋಗಗಳನ್ನು ದೊರಕಿಸಿಕೊಟ್ಟು ಅವರು ಅಲ್ಲಿ ಹೆಚ್ಚಾಗಿ ನೆಲಸುವಂತೆ ಮಾಡಬೇಕು. ವಿರೋಧಪಕ್ಷದವರೇನಾದರೂ ಸಲಹೆಗಳನ್ನು ಕೊಟ್ಟರೆ ಅವರಿಗೆ ಅನುಭವ ಇಲ್ಲ ಎಂದು ಹೇಳುತ್ತಾರೆ. ನೀವು ಇದೇ ಧೋರಣೆಯನ್ನು ಅನುಸರಿಸುತ್ತಾ ಹೋದರೆ ನೀವು ಇನ್ನು 10 ವರ್ಷಗಳಲ್ಲಿ ಬೆಳಗಾಮನ್ನು ಕಳೆಯುತ್ತೀರಿ ಎನ್ನುವ ಮಾತನ್ನು ನೀವು ಲಕ್ಷ್ಯದಲ್ಲಿಡಬೇಕು. ಅಲ್ಲಿರತಕ್ಕ ಉದ್ದಿಮೆಗಳೆಲ್ಲಾ ಮಹಾರಾಷ್ಟ್ರದ ಜನರ ಕೈಯಲ್ಲಿ ಇದೆ. ಈ ದೃಷ್ಟಿಯಿಂದ ಆ ಬಗ್ಗೆ ಸರ್ಕಾರದವರು ಏನು ಒಂದು ವ್ಯವಸ್ಥೆಯನ್ನು ಮಾಡಬೇಕೋ ಅದನ್ನು ಮಾಡದೇ ಹೋದರೆ ಬೆಳಗಾಮ್ ನಗರದಿಂದ ಕನ್ನಡಿಗರು ಚುನಾವಣೆಯಲ್ಲಿ ಆರಿಸಿ ಬರುವುದಕ್ಕೆ ಬಹಳ ಕಠಿಣವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರಿಗೆ ಪ್ರತಿಯೊಬ್ಬ ಸದಸ್ಯರ ಸಹಕಾರವಿಲ್ಲದೆ ಯಾವ ಸಮಸ್ಯೆಯನ್ನೂ ಬಿಡಿಸುವುದಕ್ಕೆ ಆಗುವುದಿಲ್ಲ. ಬೆಳಗಾಮ್ ಮತ್ತು ಸೊಲ್ಲಾಪುರಗಳಲ್ಲಿ ಕರ್ನಾಟಕದ ಸಂಸ್ಕೃತಿ ಸ್ಥಾಪನೆಯಾಗಿದೆ. ಅಲ್ಲಿ ವೀರಶೈವರ ವಿದ್ಯಾಸಂಸ್ಥೆಗಳು ಸ್ಥಾಪನೆಯಾಗಿವೆ ಮತ್ತು ಮಹಾರಾಷ್ಟ್ರೀಯರ ವಿದ್ಯಾಸಂಸ್ಥೆಗಳು ಈ ಎರಡು ಇವೆ. ನಗರಗಳಲ್ಲಿ ವೀರಶೈವರ ಸಂಕೇತಗಳು ಇವೆ. ಇದು ಕನ್ನಡಿಗರಭೂಮಿ. ಈ ಸ್ಥಳಗಳಲ್ಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡಿ ಅಲ್ಲಿಗೆ ಕನ್ನಡಿಗರನ್ನು ಒಯ್ದು ಅವರಿಗೆ ಉದ್ಯೋಗ ದಂಧೆಗಳನ್ನು ಒದಗಿಸಿಕೊಡಬೇಕು. ಸೊಲ್ಲಾಪುರದಲ್ಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡಿ ಅವುಗಳಲ್ಲಿ ನಮ್ಮ ಕನ್ನಡಿಗರನ್ನು ಹಚ್ಚಿದರೆ ಸೊಲ್ಲಾಪುರ ಕರ್ನಾಟಕಕ್ಕೆ ಸೇರುತ್ತದೆ. ಇದೇ ರೀತಿ ಬೆಳಗಾಮಿನಲ್ಲಿಯೂ ಹೆಚ್ಚು ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಸಹಾಯಮಾಡಿ ಅದರಲ್ಲಿ ಕನ್ನಡಿಗರಿಗೆ ಉದ್ಯೋಗಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಬೆಳಗಾಮಿನಲ್ಲಿ ಕನ್ನಡಿಗರ ಜನಸಂಖ್ಯೆ ಹೆಚ್ಚು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಆವಷ್ಟು ತೀವ್ರವಾಗಿ ನಮ್ಮ

(ಶ್ರೀ ಕೆ. ಪಿ. ನಾಡಗೌಡ)

ಗಡಿ ಪ್ರದೇಶಗಳ ಸಂರಕ್ಷಣೆಯನ್ನು ಮಾಡಿಕೊಳ್ಳಬೇಕು. ಪ್ರಜಾಸತ್ತೆಯ ಯುಗದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಯೋಗ್ಯ ವಿಚಾರಗಳನ್ನು ಕೈಗೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡಿಗರಿಗೆ ಉದ್ಯೋಗದಂಧೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಉದ್ದಿಮೆಗಳಲ್ಲಿ ಹೆಚ್ಚ ಹೆಚ್ಚು ಕನ್ನಡಿಗರನ್ನು ನೇಮಿಸಿಕೊಂಡು ಅವರ ಸಂಖ್ಯೆಯನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸುತ್ತಾ ಹೋದರೆ ನಮ್ಮ ಗಡಿಗಳು ಭದ್ರವಾಗಿ ಉಳಿಯುತ್ತವೆ. ಬರೀ ಅಧಿಕಾರ ಲಾಲಸೆಯಿಂದ ಕೆಲಸ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಈವೊತ್ತಿನ ದಿವಸ ಕೇಂದ್ರ ಸರ್ಕಾರದವರು ಯಾವುದೇ ಒತ್ತಾಯವನ್ನು ತಂದರೂ ಕೂಡ ಅದಕ್ಕೆ ಸರ್ಕಾರದವರು ಮಣಿಯದೇ ಕೆಲಸ ಮಾಡಬೇಕು. ಬೆಳಗಾಮು ಮತ್ತು ಸೊಲ್ಲಾಪುರಗಳಲ್ಲಿ ನಮ್ಮ ಕನ್ನಡಿಗರಿಗೆ ಸೌಲಭ್ಯಗಳನ್ನೂ ಸಹಾಯವನ್ನು ಒದಗಿಸಿಕೊಟ್ಟು ಅಲ್ಲಿ ಕನ್ನಡಿಗರ ಜನಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರದವರು ಸಹಾಯಮಾಡುತ್ತಾರೆ ಎನ್ನುವ ಆಶೆಯನ್ನು ಇಟ್ಟುಕೊಂಡು ನನಗೆ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಜಿ. ವಾಲಿ (ಹುಬ್ಬಳ್ಳಿ).—ಮಾನ್ಯ ಸಭಾಪತಿಯವರೇ, ಇವೊತ್ತು ಮೈಸೂರು ಮತ್ತು ಮಹಾರಾಷ್ಟ್ರದ ಗಡಿಯ ಬಗ್ಗೆ ಹೊಸ ವಿಚಾರಗಳು ಬರುತ್ತಾ ಇರುವುದು, ಮತ್ತು ಈ ಬಗ್ಗೆ ಪತ್ರಿಕೆಗಳಲ್ಲಿ ಕೆಲವೊಂದು ವಿಚಾರಗಳನ್ನು ತಿಳಿದುಕೊಂಡಾಗ ಯಾವ ಕನ್ನಡಿಗರೂ ಸುಮ್ಮನೆ ಕೂಡುವುದಕ್ಕಾಗುವುದಿಲ್ಲ. ಎಸ್. ಆರ್. ಸಿ. ಕಮಿಟಿಯಲ್ಲಿ ತೀರ್ಮಾನವಾದಂತಹ ವಿಚಾರಗಳು ಬಹಳ ಮಹತ್ತರವಾದಂತಹ ವಿಷಯಗಳು ಈ ಎಸ್. ಆರ್. ಸಿ. ಕಮಿಟಿಯವರು ರಾಜ್ಯ ಪುನರ್ ವಿಂಗಡಣೆಯ ಬಗ್ಗೆ ತಮ್ಮ ನಿರ್ಣಯವನ್ನು ಕೊಟ್ಟು ಪಾರ್ಲಿಮೆಂಟಿನಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆಯಾಗಿ ರಾಜ್ಯಗಳ ಗಡಿಯನ್ನು ನಿರ್ಣಯ ಮಾಡಿದಮೇಲೆ ತಿರುಗಿ ಇಷ್ಟು ವರ್ಷಗಳ ನಂತರ ಇಂದಿನವರೆಗೂ ಗಡಿಯ ಬಗ್ಗೆ ವಿವಾದಗಳು ನಡೆಯುತ್ತಾ ಇರುವುದು ದುಃಖದಾಯಕವಾದ ಸಂಗತಿ. ಗಡಿ ನಿರ್ಣಯದ ಬಗ್ಗೆ ಎಸ್. ಆರ್. ಸಿ. ಕಮಿಷನ್ನಿನವರು ಮತ್ತು ಪಾರ್ಲಿಮೆಂಟಿನವರು ನಿರ್ಣಯವನ್ನು ತೆಗೆದುಕೊಂಡಮೇಲೆ ಕನ್ನಡಿಗರು ತಮ್ಮ ಒಂದು ನೈಜವಾದ ತಾಳ್ಮೆಯ ಗುಣದಿಂದ ಏನೇ ಆದರೂ ನಮಗೆ ರಾಜ್ಯ ಮತ್ತು ಭಾಷೆ ಎಲ್ಲಕ್ಕಿಂತ ರಾಷ್ಟ್ರೀಯತೆ ಹೆಚ್ಚು ಆದ್ದರಿಂದ ರಾಷ್ಟ್ರದ ಐಕ್ಯತೆಗೆ ಹೆಚ್ಚು ಮಹತ್ವ ಕೊಟ್ಟು ರಾಷ್ಟ್ರವನ್ನು ಬೆಳಸಬೇಕು, ಇದು ಮುಖ್ಯ ಎಂದು ನಾವೆಲ್ಲರೂ ನಡೆದುಕೊಂಡು ಬಂದಿದ್ದೇವೆ. ಮತ್ತು ಅದೇ ರೀತಿ ನಮ್ಮ ರಾಜ್ಯವನ್ನು ಬೆಳಸಿಕೊಂಡು ಬಂದಿದ್ದೇವೆ. ಬೇರೆ ರಾಜ್ಯಗಳಲ್ಲಿ ಇದ್ದು ಹಿಂದುಳಿದಂತಹ ಕನ್ನಡ ಪ್ರದೇಶಗಳನ್ನು ಬೆಳೆಸಿಕೊಂಡು ಬಂದು ಸರಿಯಾಗಿ ಅಭಿವೃದ್ಧಿಪಡಿಸಬೇಕು ಎಂದು ನಾವೆಲ್ಲರೂ ಒಮ್ಮನಸ್ಸಿನಿಂದ ಪ್ರಯತ್ನ ಮಾಡುವಾಗ ಕೆಲವು ಮಹಾರಾಷ್ಟ್ರದ ರಾಜಕಾರಿಣಿಗಳು ಉದರ ನಿರ್ವಹಣೆಗಾಗಿ ಗಡಿ ಪ್ರಶ್ನೆಯನ್ನು ಪದೇಪದೇ ಎತ್ತಿ ಗೊಂದಲವನ್ನುಂಟು ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಗಡಿ ಪ್ರದೇಶದಲ್ಲಿರುವ ಜನಗಳಿಗೆ ಬೇಕಾಗಿಲ್ಲ. ಅವರು ನಾವು ಯಾವುದೇ ರಾಜ್ಯದಲ್ಲಿದ್ದರೂ ಸುಖವಾಗಿರುತ್ತೇವೆ ಎನ್ನುವ ಮನೋಭಾವನೆಯನ್ನು ಹೊಂದಿರುವಾಗ ಮಹಾರಾಷ್ಟ್ರೀಯರು ಕುಹಕದಿಂದ ಈ ಗಡಿ ಪ್ರಶ್ನೆಯನ್ನು ಎತ್ತಿಕೊಂಡು ಜನತೆಯಲ್ಲಿರುವಂತಹ ಶಾಂತಿಯನ್ನು ಕದಡಿ ಜನಗಳಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಇದರಿಂದ ದೇಶದಲ್ಲಿ ಒಂದು ಅರಾಜಕತೆಯನ್ನುಂಟು ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಒಂದು ವಿಚಾರವನ್ನು ಕೇಳುತ್ತೇನೆ. ಈಗ ಸಂಸ್ಥಾ ಕಾಂಗ್ರೆಸ್ಸಿನ ಅಧ್ಯಕ್ಷರು ಏನಿದ್ದಾರೆ, ಅವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಎ.ಐ.ಸಿ.ಸಿ. ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದರು. ಆಗ ಬಾಂಬೆಯಲ್ಲಿ ಆಗಿದ್ದಂತಹ ಮೀಟಿಂಗಿನಲ್ಲಿ ಎಸ್. ಆರ್. ಸಿ. ಕಮಿಶನಿನ ತೀರ್ಪಿನ ಪ್ರಕಾರ ಪಾರ್ಲಿಮೆಂಟಿನಲ್ಲಿ ತೀರ್ಮಾನವಾದ ಒಂದು ಗಡಿಯ ವಿಚಾರದಲ್ಲಿ ಪುನಃ ಅದನ್ನು ವಿಮರ್ಶೆ ಮಾಡಲು, ಮಹಾಜನ್ ಆಯೋಗವನ್ನು ನೇಮಕ ಮಾಡುವುದಕ್ಕೆ ಅವಕಾಶ ಯಾಕೆ ಕೊಟ್ಟರು? ಈ ಬಗ್ಗೆ ಪುನರ್‌ವಿಮರ್ಶೆ ಮಾಡಲು ಅವಕಾಶ ಕೊಟ್ಟಿದ್ದರ ಬಗ್ಗೆ ತಾವು ಏನು ಹೇಳುತ್ತೀರಿ?

5-30 P.M.

ಶ್ರೀ ಆರ್. ಜಿ. ವಾಲಿ.—ಆ ವಿಷಯಕ್ಕೆ ನಾನು ಬರುತ್ತಿದ್ದೇನೆ. ರಾಜಕೀಯವಾಗಿ ಅಲ್ಲಿಯ ಜನರು ಸತತವಾಗಿ ಕಾದಾಡಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡು ಈ ಸಮಸ್ಯೆಯನ್ನು

ನಿರಂತರವಾಗಿ ಬೆಳೆಸಿಕೊಂಡು ಬಂದಿದ್ದಾರೆ. ಆದರೆ, ಈ ಪ್ರಶ್ನೆಯಲ್ಲಿ ಒಮ್ಮೆ ನಿರ್ಣಯವಾಗಬೇಕು, ಒಮ್ಮೆ ಇತ್ಯರ್ಥ ಆಗಬೇಕು ಎನ್ನುವ ದೃಷ್ಟಿಯಿಂದ ಕನ್ನಡ ನಾಡಿನ ಜನರು ಕನ್ನಡ ರಾಜ್ಯ ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ. ಆಗ ನಮ್ಮ ಮುಂದಾಳಾದ ಮಾನ್ಯ ನಿಜಲಿಂಗಪ್ಪ ನವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಸದಸ್ಯರಾಗಿದ್ದರು ಮತ್ತು ರಾಜ್ಯದ ಮುಖ್ಯ ಮಂತ್ರಿಯೂ ಆಗಿದ್ದರು. ನಮ್ಮ ರಾಜ್ಯದ ಮುಖ್ಯ ಮಂತ್ರಿಯಾಗಿದ್ದು, ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು, ಯಾಕೆ ಮಹಾಜನ್ ಆಯೋಗಕ್ಕೆ ಒಪ್ಪಿಕೊಂಡರು ಎಂದು ಕೇಳಿದರು. ನಾವು ಯಾವುದಾದರೂ ನಿರ್ಣಯ ತೆಗೆದುಕೊಳ್ಳುವುದಾದರೆ, ಅವರ ಒಂದು ಕೊನೆಯ ಹಂತಕ್ಕೆ ಬರ ಬೇಕಾಗುತ್ತದೆ. ನಮ್ಮ ಕನ್ನಡ ನಾಡಿನ ಹಿತದೃಷ್ಟಿಯಿಂದ ಯಾವುದಾದರೂ ಒಂದು ದೃಷ್ಟಿಯಿಂದ ಈ ಪ್ರಶ್ನೆ ಪರಿಹಾರವಾಗಬೇಕೆನ್ನುವ ಒಂದು ಅಭಿಪ್ರಾಯದಿಂದ ಮಾನ್ಯ ನಿಜಲಿಂಗಪ್ಪನವರು ಈ ಎಸ್.ಆರ್.ಸಿ. ಕಮಿಶನ್‌ಗೆ ಒಪ್ಪಿದ್ದಾರೆಂದು ಕಾಣುತ್ತದೆ. ಆದರೆ ಒಂದು ವಿಚಾರವೇನೆಂದರೆ, ಕನ್ನಡ ನಾಡಿನ ಜನರು ತಾಳ್ಮೆಪ್ರಿಯರು. ಯಾವುದೇ ಪ್ರಶ್ನೆಯನ್ನು ಶಾಂತ ರೀತಿಯಿಂದ ಬಗೆ ಹರಿಸುವವರು. ಇಂಥ ಒಂದು ಪ್ರಶ್ನೆಯನ್ನು ಬಗೆಹರಿಸಲು ಯಾವುದೇ ರೀತಿಯಲ್ಲಿ ಚಳವಳಿಮಾಡುತ್ತಾ ಹೋದರೆ ರಾಜ್ಯಕ್ಕೆ ಹಾನಿಯಾಗುತ್ತದೆ, ಎಂಬುದನ್ನು ಅರಿತುಕೊಂಡು, ರಾಜ್ಯದ ಹಿತದೃಷ್ಟಿ ಯಿಂದ, ದೇಶದ ಹಿತದೃಷ್ಟಿಯಿಂದ ಉಚ್ಚ ನ್ಯಾಯಾಧೀಶರು ನ್ಯಾಯವಾಗಿ ಮಾಡುತ್ತಾರೆಂದು ತಿಳಿದಿರಬಹುದು. ಯಾವುದೇ ಒಂದು ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾದರೆ, ಅದಕ್ಕೆ ಒಂದು ಕೊನೆಬೇಕಾಗುತ್ತದೆ. ಯಾವುದಾದರೂ ಒಂದು ಸಮಿತಿಯನ್ನು ನೇಮಿಸುವಾಗ, ಪಾರ್ಲಿಮೆಂಟರಿ ಕಮಿಟಿಯನ್ನು ನೇಮಿಸುವಾಗ, ಅದು ಒಂದು ಇತ್ಯರ್ಥವನ್ನು ಮಾಡಬೇಕು. ನಮ್ಮ ಬಾರ್ಡರ್ ಏನಿದೆ, ಅದು ಅಂತರ್‌ರಾಷ್ಟ್ರ ಬಾರ್ಡರ್ ಅಲ್ಲ. ಯುದ್ಧ ಮಾಡಿ ಗಳಿಸುವಂತದ್ದು ಅಲ್ಲ. ನಾವು ಒಂದೇ ದೇಶದ ಮಕ್ಕಳು, ಯಾವಾಗಲೂ ಒಂದೇ ರೀತಿಯಾಗಿರಬೇಕು. ಆದರೆ ಕನ್ನಡ ನಾಡಿನ ಜನರು ಸುಖವಾಗಿ ಇರಬೇಕಾದುದು ಮುಖ್ಯವಾದುದು. ನಮಗೆ ಎಸ್. ಆರ್. ಸಿ. ಕಮಿಷನ್ ಬಂದರೂ, ಅದರಂತೆ ಸೋಲಾಪುರ, ಅಕ್ಕಲ್ ಕೋಟೆ ಮುಂತಾದ ಪ್ರದೇಶಗಳ ಕನ್ನಡಿಗರ ಸ್ಥಿತಿ ಯನ್ನು ನೆನೆಸಿಕೊಂಡರೆ ಬಹಳ ಕಳವಳವಾಗುತ್ತದೆ. ಅದೇ ರೀತಿ ತಾಳವಾಡಿಯ ಕನ್ನಡಿಗರ ವಿಚಾರದಲ್ಲೂ ಬಹಳ ಕಳವಳವಾಗುತ್ತದೆ. ಅದೇ ರೀತಿ ರಾಷ್ಟ್ರದಲ್ಲಿರುವ ಬೇರೆ ಪ್ರದೇಶಗಳ ಜನ ರಿಗೂ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು. ಮಾನ್ಯ ಕದಂರವರು ಮಹಾ ರಾಷ್ಟ್ರೀಯರಿಗೆ ಮೈಸೂರು ರಾಜ್ಯದಲ್ಲಿ ಬಹಳ ಕಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ನಾನಾ ದರೂ ಹೇಳುತ್ತೇನೆ, ಮರಾಠಿ ಜನರು ನಮ್ಮ ರಾಜ್ಯದಲ್ಲಿ ಎಷ್ಟೋ ಸುಖವಾಗಿದ್ದಾರೆ. ನಮ್ಮ ಕನ್ನಡಿಗರು ಮಹಾರಾಷ್ಟ್ರದಲ್ಲಿ ಎಷ್ಟು ಕಷ್ಟಪಡುತ್ತಿದ್ದಾರೋ ಅಷ್ಟು ಕಷ್ಟ ಮರಾಠಿಯರಿಗೆ ವೆ... ...ನಲ್ಲಿ ಇಲ್ಲ. ಇಲ್ಲಿ ಮರಾಠಿಯವರು ಬಹಳ ಜನರು ಇದ್ದಾರೆ.

Sri B. P. KADAM.—May I know from the hon. Member when the Kannada School of Hubli is collapsing, why has it been continued to remain in that condition if he is so much devoted to cause of the Kannadiga people ?

Sri R. G. WALI.—It must be the bad luck of Kannada people if the Kannada School has collapsed.

ಹುಬ್ಬಳ್ಳಿಯಲ್ಲೂ ಮರಾಠಿ ಜನರು ಬಹಳ ಇದ್ದಾರೆ. ಮರಾಠಿ ಶಾಲೆಗಳು ಇವೆ. ಅಲ್ಲಿ ಮರಾಠಿ ಜನರಿಗೆ ಯಾವ ರೀತಿಯ ತೊಂದರೆಯಾಗದಹಾಗೆ ನೋಡಿಕೊಳ್ಳುತ್ತಿದ್ದೇವೆ. ಮತ್ತು ನಾನು ಈ ಮನೆಯ ಸದಸ್ಯನಾಗಿ ಅಲ್ಲಿ ಮರಾಠಿ ಜನರಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳು ತ್ತಿದ್ದೇನೆ. ಇದರಿಂದ ನಮ್ಮ ರಾಜ್ಯದ ಮರಾಠಿ ಜನರು ಎಷ್ಟೋ ನೆಮ್ಮದಿಯಿಂದ, ಪ್ರೇಮಭಾವನೆ ಯಿಂದ ಇಲ್ಲಿ ಇದ್ದಾರೆ. ಇದು ನಿಜವಾಗಿಯೂ ಹೆಮ್ಮೆ ಪಡತಕ್ಕ ವಿಚಾರ. ಆದರೆ ನಮ್ಮ ಕನ್ನಡಿಗರು ಬೇರೆ ಪ್ರದೇಶಗಳಲ್ಲಿ ಪಡುತ್ತಿರುವ ಕಷ್ಟವನ್ನು ನೋಡುತ್ತಿರುವಾಗ ಬಹಳ ದುಃಖವಾಗುತ್ತದೆ. 30 ಮಂದಿ ಇರುವ ಒಂದು ಕ್ಲಾಸಿನಲ್ಲಿ 100 ಮಂದಿ ಹುಡುಗರನ್ನು ಹಾಕುತ್ತಿದ್ದಾರೆ. ಮತ್ತು ಅಲ್ಲಿ ಸರಿಯಾದ ರೀತಿಯಲ್ಲಿ ಉಪಾಧ್ಯಾಯರಿಲ್ಲ. ಇಂಥ ಒಂದು ಸ್ಥಿತಿಗತಿಗಳನ್ನು ನಾವು ಎದುರಿಸು ತ್ತಿದ್ದೇವೆ. ನಾವು ಯಾರೇ ಇದ್ದರೂ ನಾವು ಕನ್ನಡಿಗರೇ ಆಗಿರಲಿ, ಅಥವಾ ಮರಾಠಿಗರೇ ಆಗಿರಲಿ, ಅಥವಾ ತೆಲುಗರು, ತಮಿಳರು, ಯಾರೇ ಆಗಿದ್ದರೂ ನಾವೆಲ್ಲಾ ಭೇದಭಾವವಿಲ್ಲದೆ, ಮಧುರ ಬಾಂಧವ್ಯದಿಂದ ಇರಬೇಕಾಗಿದೆ. ಆದ್ದರಿಂದ ಈ ಒಂದು ಬಾರ್ಡರ್ ವಿಚಾರದಲ್ಲಿ ಜಗಳ ಮುಗಿಯ ಬೇಕು ಎನ್ನುವ ದೃಷ್ಟಿಯಿಂದ ಮಹಾಜನ್ ಕಮಿಶನನ್ನು ನೇಮಿಸಿದ್ದಾರೆ. ಅವರು ಅಷ್ಟೊಂದು ಕಷ್ಟ ತೆಗೆದುಕೊಂಡು ಸ್ವತಃ ಒಬ್ಬರೇ ಎಲ್ಲಾ ಜಾಗಗಳಿಗೂ ಹೋಗಿ ಅಲ್ಲಿ ನಿಜವಾಗಿಯೂ ಮರಾಠಿ

(SRI R. G. WALI)

ಮಾತನಾಡತಕ್ಕವರೇ, ಅಥವ ಕನ್ನಡ ಮಾತನಾಡತಕ್ಕವರೇ ಎಂದು ತಿಳಿದುಕೊಂಡಿದ್ದಾರೆ. ಒಂದುಸಾರಿ ಅವರು ಕಾರವಾರಕ್ಕೆ ಹೋಗುವಾಗ ರಸ್ತೆಯಲ್ಲಿ ಹಣ್ಣು ಮಾರುವ ಹೆಣ್ಣುಮಗಳನ್ನು ಪ್ರಶ್ನೆ ಮಾಡುತ್ತಾರೆ. ಅವಳಿಗೆ ಕನ್ನಡವೂ ಬರುವುದಿಲ್ಲ, ಮರಾಠಿಯೂ ಬರುವುದಿಲ್ಲ, ಅದಕ್ಕೆ ಕೊಂಕಣಿಯಲ್ಲಿ ಮಾತನಾಡಿ ಎಂದು ಹೇಳಿದಳು. ಹೀಗೆ ಅಷ್ಟೊಂದು ಕಷ್ಟಪಟ್ಟು ತಯಾರುಮಾಡಿದ ಒಂದು ರಿಪೋರ್ಟನ್ನು ನಾವು ಈ ರೀತಿ ಮಾತಬಾರದು. ಅವರ ವರದಿಯನ್ನು ನೋಡಿದಾಗ ಯಾವುದೇ ಒಂದು ಪ್ರಶ್ಯರಾಗಲಿ, ಒಂದು ಸರ್ಕಾರದ ಹಿಡಿತವಾಗಲಿ ಇದ್ದಂತೆ ಕಾಣುವುದಿಲ್ಲ. ಆ ಶಿಫಾರಸನ್ನು ನಾವೆಲ್ಲರೂ ಈ ಮನೆಯಲ್ಲಿ ಒಪ್ಪಿಕೊಂಡಿದ್ದೇವೆ ಮತ್ತು ಕೇಂದ್ರಸರ್ಕಾರದವರೂ ಅದನ್ನು ಒಪ್ಪಿಕೊಳ್ಳಬೇಕೆಂದು ಪದೇ ಪದೇ ಕೇಳುತ್ತಿದ್ದೇವೆ. ದುರ್ದೈವದಿಂದ ಇಷ್ಟುದಿವಸ ಆದರೂ ಕೂಡ ಕೇಂದ್ರಸರ್ಕಾರದವರು ನಾವು ಕೇಳಿದಂತಹ ಮಾತಿಗೆ ಯಾವ ಲಕ್ಷವನ್ನೂ ಕೊಡುತ್ತಾ ಇಲ್ಲ. ಆದರೆ ಇವೊತ್ತಿನ ದಿವಸ ರಾಜಕೀಯ ಪರಿಸ್ಥಿತಿಯಲ್ಲಿ ಏನೋ ಒಂದು ಬದಲಾವಣೆಯಾದಾಗ, ಇದನ್ನು ತಗೆದಕೊಳ್ಳುತ್ತಾ ಇರುವುದು ನಿಜವಾಗಿಯೂ ಬಹಳ ವಿಷಾದಕರವಾದ ಸಂಗತಿ ಮತ್ತು ಇದರಿಂದ ನಮಗೆ ಭಯವಾಗುತ್ತಾ ಇದೆ. ಇವತ್ತು ಇದರಿಂದ ಕನ್ನಡ ಜನತೆಗೆ ತೊಂದರೆಯಾಗುತ್ತದೆ, ದುಃಖವಾಗುತ್ತದೆ ಎಂಬುದನ್ನು ಪ್ರಧಾನಮಂತ್ರಿಯವರು ತಿಳಿದುಕೊಳ್ಳಬೇಕಾಗಿದೆ. ಪ್ರಧಾನ ಮಂತ್ರಿಯವರು ತಮಗೆ ಬಲ ಇದೆಯೆಂದು ಯಾವುದೇ ಒಂದು ನಿರ್ಣಯವನ್ನು ತಗೆದುಕೊಂಡಷ್ಟೇ ಆದರೆ, ಕನ್ನಡಿಗರಾದ ನಾವೆಲ್ಲರೂ ಈ ಮನೆಯಲ್ಲಿ ಎಲ್ಲರೂ ಒಂದೇ ಮನಸ್ಸಿನಿಂದ, ಒಂದೇ ಮತದಿಂದ, ಒಂದೇ ಶಕ್ತಿಯಿಂದ ಅವರಿಗೆ ಹೇಳಬೇಕಾಗಿದೆ. ಕನ್ನಡ ನಾಡಿನ ಜನರೆಲ್ಲರೂ ಒಂದಾಗಿದ್ದಾರೆ. ಕನ್ನಡ ನಾಡಿನ ಜನರಿಗೆ ಯಾವುದೇ ಮನನೋಯುವ ಕೆಲಸವನ್ನು ಮಾಡುವುದಾದರೆ, ಇಲ್ಲಿಯ ಜನರು ಬಹಳ ಅಸಮಾಧಾನಪಡುತ್ತಾರೆ ಮತ್ತು ಅಂಥ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದಲ್ಲ ಎಂದು ಹೇಳಬೇಕು. ಅದನ್ನು ಎಲ್ಲಾ ಜನರಿಗೆ ಹಿತವಾಗುವ ಹಾಗೆ ತೆಗೆದುಕೊಳ್ಳಬೇಕು. ಇದನ್ನು ರಾಜಕೀಯವಾಗಿ ಅಥವಾ ಬಲ ಪ್ರದರ್ಶನದಿಂದ ನಿರ್ಣಯಿಸುವುದಾದರೆ, ಆ ನಿರ್ಣಯ ಯಶಸ್ವಿಯಾಗಿ ಬರಲಾರದು ಮತ್ತು ಅದು ಯೋಗ್ಯವಾದುದಲ್ಲ. ಮಹಾಜನ್ ಕಮಿಷನ್ ನೇಮಕವಾದಾಗ ಮಾನ್ಯ ಚವಾಣರು ಸ್ವತಃ ಹೇಳಿದ್ದಾರೇನೆಂದರೆ, ಮಹಾಜನ್ ವರದಿಯನ್ನು ಎಲ್ಲರೂ ಒಪ್ಪತಕ್ಕದ್ದು ಎಂದು. ಅದನ್ನು ವಿ. ಪಿ. ನಾಯ್ಕರೂ ಹೇಳಿದ್ದಾರೆ. ಆದರೆ ರಿಪೋರ್ಟ್ ಬಂದಮೇಲೆ ಅದನ್ನು ಬದಲು ಮಾಡಿದರು. ಆದರೆ ಈ ವಿಚಾರದಲ್ಲಿ ಒಂದು ವಿಚಿತ್ರವಾದ ನೀತಿಯನ್ನು ಅನುಸರಿಸುತ್ತಿದ್ದಾರೆ. ಈ ಗಡಿ ನಿರ್ಣಯವನ್ನು ಮೊದಲು ಶ್ರೀ ಚವಾಣರೂ ಮತ್ತು ಶ್ರೀ ವಿ. ಪಿ. ನಾಯಕ್ ಅವರೂ ಒಪ್ಪಿಕೊಂಡಿದ್ದರು. ಆದರೆ ಕೇವಲ ಎರಡು ವರ್ಷಗಳಿಂದ ಯಾವುದೋ ಒಂದು ರಾಜಕೀಯ ಒತ್ತಡಕ್ಕಾಗಿ, ಅಲ್ಲಿನ ಜನರ ಪ್ರೇಮವನ್ನು ಗಳಿಸುವುದಕ್ಕಾಗಿ ಈ ದೇಶದ ಹಿತವನ್ನೇ ಮರೆತು ತಮ್ಮದೇ ಆದ ಒಂದು ವಿಚಾರದಿಂದ ಮೊದಲು ಒಪ್ಪಿಕೊಂಡಿದ್ದ ತೀರ್ಮಾನವನ್ನು ಏಕೆ ಬದಲಾವಣೆ ಮಾಡಿದರೋ ಗೊತ್ತಿಲ್ಲ. ಇದು ನಿಜವಾಗಿ ದುಃಖಕರವಾದ ವಿಷಯ. ಮಹಾಜನ್ ಅವರ ವರದಿಯನ್ನು ನಾವು ಬಹಳ ಕಷ್ಟಪಟ್ಟು ಒಪ್ಪಿಕೊಂಡೆವು. ಇವತ್ತು ನಮಗೆ ಬರಬೇಕಾದಂಥ ಕನ್ನಡ ಭಾಗಗಳು ಇನ್ನೂ ಬೇಕಾದಷ್ಟು ಇವೆ. ಇವತ್ತು ಕೇವಲ ಗಲಭೆ, ಮುಷ್ಕರಗಳಿಂದ ಅವನ್ನು ನಾವು ಪಡೆಯಬೇಕಾಗಿಲ್ಲ. ಅದರ ಬಗ್ಗೆ ಒಂದು ಹೆಚ್ಚಿನ ತಾಳ್ಮೆ ಬೇಕು. ಏಕೆಂದರೆ ನಮ್ಮ ಕನ್ನಡ ನಾಡಿಗೆ ಬರಬೇಕಾದ ಭಾಗಗಳು ಇನ್ನೂ ಅನೇಕವಿದೆ. ದೇಶದ ಹಿತದೃಷ್ಟಿಯಿಂದ ಈಗ ಈ ದೇಶ ಅನುಭವಿಸುತ್ತಿರುವ ಸ್ಥಿತಿಯನ್ನು ನೋಡಿದರೆ, ಇಂತಹ ಚಿಕ್ಕಚಿಕ್ಕ ವಿಚಾರಗಳನ್ನು ನಾವು ಇಲ್ಲಿ ತರಬಾರದು. ಎಲ್ಲರೂ ಒಗ್ಗಟ್ಟಾಗಿ ದೇಶಾಭಿವೃದ್ಧಿಯ ದೃಷ್ಟಿಯಿಂದ ಕೆಲಸಮಾಡಬೇಕೆನ್ನುವ ಮನೋಭಾವವನ್ನು ಇಟ್ಟುಕೊಂಡು ನಾವು ಕನ್ನಡಿಗರಾಗಿ ಕೆಲಸ ಮಾಡುತ್ತಿದ್ದೇವೆ. ಅಂದಮೇಲೆ ಇವತ್ತು ಮಹಾಜನ್ ಅವರ ಅಂತ್ಯ ತೀರ್ಪನ್ನು ಪಾರ್ಲಿಮೆಂಟ್ ಒಪ್ಪಬೇಕೆನ್ನುವಾಗ ಅದನ್ನು ಬಿಟ್ಟು ಈಗ ಬೇರೆ ಹೊಸ ವಿಚಾರವನ್ನು ತರುವುದು ಬಹಳ ದುಃಖಕರವಾದ ವಿಚಾರವಾಗಿದೆ. ಯಾವುದೇ ದೃಷ್ಟಿಯಿಂದಲಾಗಲೀ ನಮ್ಮ ಕನ್ನಡ ನಾಡಿನ ಜನರು ನಮ್ಮ ಪ್ರಧಾನಮಂತ್ರಿಗಳು ಇದಕ್ಕೆ ಪೂರ್ಣ ಜವಾಬ್ದಾರಿ ಎಂಬುದಾಗಿ ಹೇಳಿದರೆ ತಪ್ಪಾಗುವುದಿಲ್ಲ. ಇದರಿಂದ ಕನ್ನಡನಾಡಿನ ಜನತೆಗೆ ಎಷ್ಟೊಂದು ಖೇದವಾಗಿದೆ ಎಂಬುದನ್ನು ಈಗ ವಿಚಾರಮಾಡಬೇಕಾಗಿದೆ. ಈ ಪ್ರಶ್ನೆ ಈಗ ಪ್ರತಿಯೊಂದು ಮೂಲೆ ಮೂಲೆಯಲ್ಲಿಯೂ ಬರುತ್ತಾ ಇದೆ. ಅದನ್ನು ಜನತೆ ಕೇಳುತ್ತಿದ್ದಾರೆ. ಯಾವ ಊರಿನಲ್ಲಿ ಅಥವಾ ಯಾವ ಹಳ್ಳಿಯಲ್ಲಿ ಜನತೆ ಇದ್ದಾರೆಯೋ ಅವರೆಲ್ಲರೂ ಇದೇ ಪ್ರಶ್ನೆಯನ್ನು ಹಾಕುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದ ಕೆಲವು ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಕೇಂದ್ರದಿಂದ ಸೂಚನೆಮಾಡಿರುವುದನ್ನು ವೃತ್ತಪತ್ರಿಕೆಗಳಲ್ಲಿ ನೋಡಿದರೆ, ಅವರು ವಿಷಯಗಳನ್ನು ಸರಿಯಾಗಿ

ಇನ್ನೂ ತಿಳಿದುಕೊಂಡು ಮಾಡುತ್ತಾ ಇಲ್ಲ, ಜನತೆಯ ಹಿತ ದೃಷ್ಟಿಯಿಂದ ಅವರು ಮಾಡುತ್ತಾ ಇಲ್ಲ ಯೋಗ್ಯವಾದ ನಿರ್ಣಯ ಆಗಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತು ಇದರ ಬಗ್ಗೆ ಮಹತ್ತರವಾದ ಹೊಣೆ ಜವಾಬ್ದಾರಿ ಕನ್ನಡ ಜನತೆಯ ಪರವಾಗಿ ಬಿದ್ದಿದೆ. ಕನ್ನಡ ಜನತೆ ಈಗ ಸರ್ಕಾರದ ಕಡೆ, ಈ ಸಭೆಯ ಎಲ್ಲ ಸದಸ್ಯರ ಕಡೆಗೆ ನೋಡುತ್ತಿದೆ. ಕನ್ನಡಿಗರ ಹಿತರಕ್ಷಣೆಗಾಗಿ ಹಾಗೂ ಕನ್ನಡಿಗರ ಗಡಿ ರಕ್ಷಣೆಗಾಗಿ ನಾವು ಏನು ಮುಂದೆ ಮಾಡುತ್ತೇವೆಂಬುದನ್ನು ಅವರು ನೋಡುತ್ತಿದ್ದಾರೆ. ನಾವೆಲ್ಲರೂ ಒಂದಾಗಿ ಇದರ ಬಗ್ಗೆ ಏನು ಅಂತಿಮ ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆಂಬುದನ್ನು ಅವರೆಲ್ಲರೂ ನೋಡುತ್ತಿದ್ದಾರೆ. ಆದ್ದರಿಂದ ಇವತ್ತೇ ನಾವು ಒಂದು ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ನಾನು ಮೊದಲೇ ಹೇಳಿದಹಾಗೆ ಮಹಾ ಜನ್ ಅವರ ವರದಿ ಏನಿದೆಯೋ ಅದು ಒಂದು ಅವಾರ್ಡ್ ಎಂದು ಎಲ್ಲರೂ ಭಾವನೆಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಹಾಗೂ ತೀವ್ರವಾಗಿ ಇಡೀ ಎಲ್ಲಾ ಭಾಗಗಳಿಗೂ ಅನ್ವಯಿಸುವಂತೆ ಮಾಡಿದರೆ ಒಳ್ಳೆಯದಾಗುತ್ತದೆ. ಇಲ್ಲದೆ ಹೋದರೆ ಮುಂದೆ ಕನ್ನಡಿಗರೂ ಸಹ ಹೊಸ ಹೊಸ ವಿಚಾರಗಳನ್ನು ತೆಗೆಯಬೇಕಾಗಿದೆ. ಇದರಿಂದ ಕನ್ನಡಿಗರಲ್ಲಿ ಅಶಾಂತಿ ಹುಟ್ಟಿ, ದುಷ್ಟವಾದ ಹಾಗೂ ಕ್ರೂರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಯಾರೂ ಅವಕಾಶಮಾಡಿಕೊಡಬಾರದು. ಏಕೆಂದರೆ ಇದುವರೆಗೆ ಜನತೆ ಒಂದು ತಾಳ್ಮೆಯಿಂದ, ಶಾಂತಿಯಿಂದ, ಒಂದು ಶಿಸ್ತಿನ ಕ್ರಮವನ್ನು ನಡೆಸಿಕೊಂಡು ಬಂದಿದ್ದಾರೆ. ಈ ಸಮಸ್ಯೆಯನ್ನು ಬಡಿಸುವುದಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಟಮಾಡಬೇಕು. ಈಗ ನಮ್ಮ ರಾಜ್ಯದ ಈ ಗಡಿ ಸಮಸ್ಯೆ ಬೇಗ ಬಗೆಹರಿಯುತ್ತದೆ. ಅದಕ್ಕಾಗಿ ನಾವೆಲ್ಲರೂ ಈ ಸಭೆಯಲ್ಲಿ ಈಗ ಒಂದೇ ರೀತಿಯ ನಿರ್ಣಯವನ್ನು ತೆಗೆದುಕೊಳ್ಳಬೇಕು ಮತ್ತು ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಸೇರಿ ಅವರವರ ಜಿಲ್ಲೆಗೆ ಹೋಗಿ ಅಲ್ಲಿ ಯೋಗ್ಯನಿರ್ಣಯ ತೆಗೆದುಕೊಂಡು ಪಾರ್ಲಿಮೆಂಟಿಗೆ ಮತ್ತು ಪ್ರಧಾನಮಂತ್ರಿಗಳಿಗೆ ಮಹಾಜನ್ ಅವರ ಕಮಿಷನ್ ವರದಿಗೆ ಅವಾರ್ಡ್‌ನಂತೆ ಗೌರವ ಕೊಡಬೇಕು ಎಂದು ಹೇಳಬೇಕು. ಇಲ್ಲದಿದ್ದರೆ ಮುಂದೆ ನಮ್ಮೆಲ್ಲ ರಿಗೂ ಬಹಳ ತೊಂದರೆಯಾಗುತ್ತದೆ, ಮತ್ತು ನಮ್ಮ ಜನತೆ ಮುಂದೆ ಇನ್ನೂ ಕಷ್ಟಪಡಬೇಕಾದೀತು. ಇಂತಹ ಸಮಯದಲ್ಲಿ ನಾವೆಲ್ಲರೂ ತೀವ್ರವಾಗಿ ಒಂದು ಯೋಗ್ಯ ನಿರ್ಣಯವನ್ನು ತೆಗೆದು ಕೊಳ್ಳಬೇಕು, ಅದನ್ನು ಈಗ ಹಾಗೆಯೇ ಬಿಟ್ಟುಕೊಡಬಾರದು. ಎರಡನೆಯದಾಗಿ, ಈಗ ನಮ್ಮ ದೇಶದಲ್ಲಿ ಈಗಾಗಲೇ ಎಷ್ಟೋ ತೊಂದರೆಗಳಿರುವಾಗ ಈಗ ಗಡಿ ಪ್ರಶ್ನೆ ಅವುಗಳ ಸಂಧಿಯಲ್ಲಿ ಏಕೆ ಬಂತು ? ಇದು ಬಹಳ ವಿವಾದಾಸ್ಪದವಾಗಿದೆ. ಏನೇ ಆಗಲೀ ಇವತ್ತು ಇದರ ಬಗ್ಗೆ ಬಹಳವಾಗಿ ವಿಚಾರಮಾಡಬೇಕು. ಒಂದು ಯೋಗ್ಯವಾದ ನಿರ್ಣಯವನ್ನು ತೆಗೆದುಕೊಂಡು ಈ ಗಡಿ ಪ್ರಶ್ನೆಯನ್ನು ಇತ್ಯರ್ಥಮಾಡಿ ಮುಗಿಸಬೇಕು. ಅದಕ್ಕಾಗಿ ಕನ್ನಡ ಜನತೆಯ ಪ್ರತಿನಿಧಿಗಳು ಎಲ್ಲರೂ ಸರ್ಕಾರದ ಜೊತೆಯಲ್ಲಿ ಒಂದುಗೂಡಿ ಮಹಾಜನ್ ಅವರ ಕಮಿಷನ್ ವರದಿ ಪ್ರಕಾರ ತೀರ್ಮಾನವಾಗಬೇಕೆಂದು ಒಂದು ಯೋಗ್ಯವಾದ ನಿರ್ಣಯವನ್ನು ಮಾಡಿಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕಾಗಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ-ಬೆಂಗಳೂರು).—ಮಾನ್ಯ ಸಭಾಪತಿಗಳೇ, ನಾನು ವೈಯಕ್ತಿಕವಾಗಿ ಹೇಳಬೇಕಾದರೆ, ಈಗ ಈ ಭಾಷಾವಾರು ವಿಂಗಡನೆಯಿಂದ ಈ ದೇಶಕ್ಕೆ ಹೆಚ್ಚಿನ ಅನಾಹುತಗಳು ಆಗುತ್ತಿವೆಯೇ ಹೊರತು ಯಾವ ವಿಧವಾದಂಥ ಕ್ಷೇಮವೂ ಆಗಿಲ್ಲ. ದೇಶದಲ್ಲಿ ಒಗ್ಗಟ್ಟಿಗೆ ಬದಲು, ಒಡೆದುಹೋಗಿ ಛಿದ್ರವಾಗಿರತಕ್ಕ ಪರಿಸ್ಥಿತಿಯನ್ನು ನೋಡಿ ನಾನು ಬಹಳ ವ್ಯಸನಪಡಬೇಕಾಗಿದೆ. ನಮ್ಮ ನಾಯಕರು ತಮ್ಮ ನಾಯಕತ್ವವನ್ನು ಉಳಿಸಿಕೊಳ್ಳುವುದ ಕ್ಕೋಸ್ಕರವಾಗಿ ಭಾಷೆಯನ್ನು ಮುಂದಿಟ್ಟುಕೊಂಡು ಈ ದೇಶದ ಜನಗಳನ್ನು ಸತತವಾಗಿ ಕಷ್ಟಕ್ಕೀಡು ಮಾಡುತ್ತಿದ್ದಾರೆ. ನಾವು ಈ ರಾಜ್ಯದ ಗಡಿಗಳ ಪ್ರಶ್ನೆಯ ಬಗ್ಗೆ ಹೋರಾಟಮಾಡುತ್ತಾ ಜನಗಳ ಸೌಖ್ಯದ ಬಗ್ಗೆ ಏನೇನು ಮಾಡಬೇಕೋ ಅವನ್ನು ಮರೆಯುವುದಕ್ಕೆ ಇದೂ ಒಂದು ಕಾರಣ ವಾಗಿದೆ. ಆದರೂ ಕೂಡ ನಾವು ಈ ಸಂದರ್ಭದಲ್ಲಿ ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಹಕ್ಕುಬಾಧ್ಯತೆ ಬಗ್ಗೆ, ಕನ್ನಡಿಗರ ಕ್ಷೇಮದ ಬಗ್ಗೆ ಏನೇನು ಮಾಡಬೇಕೆನ್ನುವುದಕ್ಕೆ ಕೆಲವು ಅಂಕಿ ಅಂಶಗಳನ್ನು ಕುರಿತು ನಾನು ಮಾತನಾಡುತ್ತೇನೆ. ಮೊಟ್ಟಮೊದಲನೆಯದಾಗಿ ನಾವು ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ ನಮ್ಮಲ್ಲಿ ಒಂದು ನಿಯಮ ಇರಬೇಕು. ಹಿಂದೆ ಒಬ್ಬ ಶ್ರೇಷ್ಠ ನ್ಯಾಯಾಧೀಶರನ್ನು ಇಟ್ಟು ಒಂದು ಕಮಿಷನ್ನನ್ನು ನೇಮಕ ಮಾಡಿದಮೇಲೆ, ಅವರು ಕೊಟ್ಟಂಥ ತೀರ್ಪಿಗೆ ಈಗ ಬೆಲೆ ಇಲ್ಲವೆಂದು ಹೇಳುವುದಾದರೆ, ಮುಂದೆ ಯಾವ ವ್ಯಕ್ತಿಯೇ ಆಗಲಿ, ಮರ್ಯಾದೆ, ಮಾನ ಇರುವಂಥ ನ್ಯಾಯಾಧೀಶ ಇಂಥಾದ್ದಕ್ಕೆಲ್ಲಾ

(ಶ್ರೀ ಟಿ. ಆರ್. ಶಾಮಣ್ಣ)

ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಮೊದಲು ನಿರ್ಣಯ ಮಾಡಿದ ಪ್ರಕಾರ ಚಂಡೀಗಡ ಹರಿಯಾಣಕ್ಕೆ ಹೋಗಬೇಕಾಗಿತ್ತು. ಈಗ ರಾಜಕೀಯ ಕಾರಣಗಳಿಗೋಸ್ಕರ ಅದನ್ನು ಪಂಜಾಬಿಗೆ ಕೊಟ್ಟರು. ಈ ಮಹಾಜನ್ ಕಮಿಷನ್ ರಚನೆಯಾದುದು ಮಹಾರಾಷ್ಟ್ರದವರ ಒತ್ತಡದಿಂದ. ಅವರು ಕೆಲವಾರು ಅಂಕಿ ಅಂಶಗಳನ್ನು ಸಂಗ್ರಹ ಮಾಡಿ ವರದಿಯನ್ನು ಒಪ್ಪಿಸಿದರು. ಆದರೆ ಈಗ ಆ ವರದಿಗೆ ಬೆಲೆ ಇಲ್ಲದಂತೆ ಮಾಡಿ ತಮ್ಮದೇ ಅವಂಥ ಒಂದು ನಿಲುವನ್ನು ಹೂಡಿರುವುದರಿಂದ ಅದರ ಬಗ್ಗೆ ನಮ್ಮ ಖಂಡನೆಯನ್ನು ಮತ್ತು ನಿರಾಶೆಯನ್ನು ಈ ಸಂದರ್ಭದಲ್ಲಿ ತೋರಿಸಬೇಕಾಗಿದೆ. ಬಹು ಮುಖ್ಯವಾಗಿ ಈ ಮಹಾಜನ್ ವರದಿಯಿಂದ ಮೈಸೂರಿನವರಿಗೆ ಅನುಕೂಲವಾಗಿದೆಯೆಂದು ಮಹಾರಾಷ್ಟ್ರದವರು ಈಗ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಒಂದು ವೇಳೆ ಮಹಾಜನ್ ವರದಿಯಿಂದ ಮಹಾರಾಷ್ಟ್ರಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದರೆ ಇದುವರೆಗೂ ನಮ್ಮ ಹಾಗೆ ಶಾಂತಿಯಿಂದ ಕೂತುಕೊಳ್ಳುತ್ತಿದ್ದರೇ ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ಮಹಾಜನ್ ವರದಿ ಮೈಸೂರಿನ ಪರವಾಗಿದೆಯೆಂದು ಮಹಾರಾಷ್ಟ್ರದವರು ಮಹಾಜನ್ ಅವರ ಮೇಲೆ ಶಾಪ ಹಾಕಿದರು, ಅದಕ್ಕಾಗಿ ಅವರು ಸತ್ತುಹೋದರು. ಆದರೆ ಮಹಾರಾಷ್ಟ್ರದ ಪರವಾಗಿ ಅದು ಇದ್ದಿದ್ದರೆ, ಇದುವರೆಗೂ ನಮ್ಮನ್ನು ಈ ಸ್ಥಿತಿಗೆ ಬಿಡುತ್ತಿರಲಿಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಒಂದೇ ಸಾರಿ ಎಸ್.ಆರ್.ಸಿ. ಕಮಿಷನ್ನಿನವರು ತೀರ್ಮಾನ ಕೊಟ್ಟಮೇಲೆ ಇದರ ಬದಲಾವಣೆಗೆ ಅವಕಾಶವಿಲ್ಲವೆಂದು ಮೊದಲೇ ಪಟ್ಟು ಹಿಡಿಯಬೇಕಾಗಿತ್ತು. ಆ ರೀತಿ ಪಟ್ಟು ಹಿಡಿದಿದ್ದರೆ ಇದು ಇಂಥ ಸ್ಥಿತಿಗೆ ಹೋಗುತ್ತಿರಲಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಆ ರೀತಿಯಾಗಿ ಪಟ್ಟು ಹಿಡಿದಿದ್ದರೆ ಅವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುತ್ತಿದ್ದರೇ?

ಶ್ರೀ ಟಿ. ಆರ್. ಶಾಮಣ್ಣ.—ಈಗ ತೀರ್ಮಾನವಾಗಿ ಕಳೆದ ಎರಡು ವರ್ಷಗಳು ಹತ್ತಿರ ಆಗುತ್ತಾ ಬಂದರೂ ಕೂಡ ಕಾಂಗ್ರೆಸ್ ಅಧ್ಯಕ್ಷರು ಆಗಿದ್ದವರು ಈ ವಿಷಯದಲ್ಲಿ ಒಂದು ಖಚಿತ ಅಭಿಪ್ರಾಯಕ್ಕೆ ಬರಲು ಅವಕಾಶ ಮಾಡದೆ ಹೋದರೆ ನಮ್ಮ ಅಶಕ್ತಿಯನ್ನು ಮತ್ತು ನಮ್ಮ ಲೋಪದೋಷಗಳನ್ನು ಎತ್ತಿ ತೋರಿಸಿದ ಹಾಗಾಗುತ್ತದೆ. ಈಗ ಆಗಬಾರದಂತಹ ಅನ್ಯಾಯವಾಗಿದೆ. ಆದರೆ ಈಗ ನಾವು ಎಚ್ಚೆತ್ತುಕೊಳ್ಳಬೇಕು. ಕಾರಣ ಇಷ್ಟೇ. ಈವೊತ್ತಿನ ದಿವಸ ಏನಾದರೂ ಶ್ರೀಮತಿ ಇಂದಿರಾಗಾಂಧಿಯವರು ಈ ಸಮಸ್ಯೆಯನ್ನು ತೀರ್ಮಾನ ಮಾಡಬೇಕು ಎಂದರೆ ಅದು ಅಲ್ಲಿಗೆ ನಿಲ್ಲುವುದಿಲ್ಲ. ನಮ್ಮ ಡಿ. ಎಂ. ಕೆ. ಸ್ನೇಹಿತರು ಬೆಂಗಳೂರಿನಲ್ಲಿ ಇರತಕ್ಕ ಸಿವಿಲ್ ಸ್ಟೇಷನ್‌ನಲ್ಲಿ ತಮಿಳು ಮಾತನಾಡುವವರು ಹೆಚ್ಚು ಇದ್ದಾರೆ, ಅದನ್ನು ನಮಗೆ ಕೊಡಿ ಎಂದು ಕೇಳುತ್ತಾರೆ. ಆಂಧ್ರದವರು ಕೋಲಾರ ಬಿಟ್ಟು ಕೊಡಿ ಎಂದು ಕೇಳುತ್ತಾರೆ. ಮೈಸೂರಿನವರು ಕುರಿಗಳು ಏನುಮಾಡಿದರೂ ಕುರಿಗಳಾಗಿರುತ್ತಾರೆ ಎನ್ನುವ ಸಂದರ್ಭ ಬರುತ್ತದೆ. ಆದುದರಿಂದ ಈ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು ಎನ್ನುವ ಬಗ್ಗೆ ಹೇಳುತ್ತಿದ್ದೇನೆ. ಎಲ್ಲದಕ್ಕಿಂತ ಮುಖ್ಯವಾಗಿ ಈಗ ಬೊಂಬಾಯಿನಲ್ಲಿ ನಮ್ಮ ಕನ್ನಡಿಗರು ಪಡುತ್ತಿರುವ ಕಷ್ಟ ಎಷ್ಟು ಹೇಳಿದರೂ ತೀರದು. ಅವರು ಮನೆಗೆ ಕ್ಷೇಮವಾಗಿ ಹಿಂದಿರುಗುತ್ತಾರೆಯೋ ಇಲ್ಲವೇ ಎಂದು ಅವರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಮಹಾರಾಷ್ಟ್ರಕ್ಕೆ ಕನ್ನಡಿಗರು ಹೋದ ಪಕ್ಷದಲ್ಲಿ, ಮಹಾರಾಷ್ಟ್ರದವರು ಇಲ್ಲಿ ಸುಖವಾಗಿ ಇರುವ ಹಾಗೆ, ಕನ್ನಡಿಗರು ಅಲ್ಲಿ ಇರುವುದಕ್ಕೆ ಆಗುವುದಿಲ್ಲ. ಬೊಂಬಾಯಿನಲ್ಲಿ ಕನ್ನಡಿಗರು ಪಡುತ್ತಿರುವ ಕಷ್ಟ ಎಷ್ಟು ಎನ್ನುವುದನ್ನು ನಾವು ನೋಡಿದ್ದೇವೆ. ನಮ್ಮ ಹಾಗೆ ಸೌಮ್ಯ ಭಾವನೆ, ಅಣ್ಣ ತಮ್ಮಂದಿರ ಹಾಗೆ ಇರತಕ್ಕ ಭಾವನೆ ಮಹಾರಾಷ್ಟ್ರದವರಿಗೆ ಇಲ್ಲ ಎನ್ನುವುದನ್ನು ಶಿವಸೇನೆಯವರು ತೋರಿಸಿಕೊಟ್ಟಿದ್ದಾರೆ. ಅದೇ ರೀತಿ ಕನ್ನಡ ನಾಡಿನ ಜನಗಳು ಮಹಾರಾಷ್ಟ್ರಕ್ಕೆ ಹೋದ ಪಕ್ಷದಲ್ಲಿ ಅವರನ್ನು ನಾವು ಬಲಿ ಕೊಟ್ಟ ಹಾಗಾಗುತ್ತದೆ. ಆದುದರಿಂದ ಕನ್ನಡ ಜನಗಳ ಹಿತರಕ್ಷಣೆಗೆ ಅವರ ಕೂಡ ಹೋರಾಡಬೇಕಾದ ಪರಿಸ್ಥಿತಿ ನಮ್ಮ ಮುಂದೆ ಇದೆ. ಈ ಪ್ರಶ್ನೆ ಬೇಗ ಇತ್ಯರ್ಥವಾಗುತ್ತಾ ಇತ್ತು. ಇತ್ಯರ್ಥ ಆಗದೆ ಇರುವುದಕ್ಕೆ ಮುಖ್ಯ ಕಾರಣ ಹೋಂ ಪೋರ್ಟ್‌ಫೋಲಿಯೋ ಮಹಾರಾಷ್ಟ್ರದ ಪಕ್ಷಪಾತಿಗಳಾದ ಚವಾಣರು ಇಟ್ಟುಕೊಂಡಿರುವುದೇ ಆಗಿದೆ. ಹಾಗೆ ಇಲ್ಲದೆ ಹೋದ ಪಕ್ಷದಲ್ಲಿ ಇಂತಹ ಪರಿಸ್ಥಿತಿ ಬರುತ್ತಾ ಇರಲಿಲ್ಲ. ನಮ್ಮ ಪರಿಸ್ಥಿತಿ ಬಹಳ ಕಷ್ಟಕ್ಕೆ ಬಂದಿದೆ. ಏತಕ್ಕೆಂದರೆ ಕಾಂಗ್ರೆಸ್ ಒಡೆದು ಇಂಡಿಕೇಟ್, ಸಿಂಡಿಕೇಟ್ ಆಗಿ, ಈಗ ಸಿಂಡಿಕೇಟ್ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಹೋಗಿ ಕನ್ನಡಿಗರನ್ನು ಬಲಿ ಹಾಕುತ್ತಿದ್ದಾರೆ ಎಂದು ನಾನು ಹೇಳಿದರೆ ತಪ್ಪಾಗಲಾರದು ಎಂದು ತಿಳಿದುಕೊಂಡಿದ್ದೇನೆ. ಏನಾದರೂ ಆಗಲೀ, ಎಷ್ಟೇ ತೊಂದರೆಗಳು ಇರಲಿ ನಮ್ಮ ನಮ್ಮಲ್ಲಿ ಎಷ್ಟೇ ವಾಜ್ಯಗಳು ಇರಲಿ, ಹಿಂದೆ ಎಷ್ಟೇ ಅನ್ಯಾಯ

ಮಾಡಿರಲಿ, ಹಿಂದೆ ಇದ್ದ ನಿಜಲಿಂಗಪ್ಪನವರಾಗಲಿ ಈಗ ಇರತಕ್ಕ ವೀರೇಂದ್ರ ಪಾಟೀಲರು ಆಗಲಿ, ಅವರು ಮಾಡಿರತಕ್ಕ ಅನ್ಯಾಯದಮೇಲೆ ನಾವು ಟೀಕೆ ಮಾಡುತ್ತಾ ಹೋಗಿ ಸುಮ್ಮನೆ ಇದ್ದ ಪಕ್ಷದಲ್ಲಿ ಬರತಕ್ಕ ಸೌಲಭ್ಯ ಕೂಡ ಸಿಕ್ಕದೆ ಇರತಕ್ಕ ಸಂದರ್ಭ ಬರುತ್ತದೆ. ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಬಾರ್ಡರ್ ವಿಚಾರದಲ್ಲಿ ಪಾಕೀಸ್ಥಾನದೊಡನೆ ಚೈನಾದವರೊಡನೆ ಹಿಂದೂಸ್ಥಾನದವರು ಹೋರಾಡಿದಹಾಗೆ ನಾವು ಈಗ ಹೋರಾಡುವ ಪರಿಸ್ಥಿತಿ ಬಂದಿದೆ. ಬಾರ್ಡರ್ ಸಮಸ್ಯೆ ಬಹಳ ದೊಡ್ಡ ಸಮಸ್ಯೆ ಮತ್ತು ನಮ್ಮ ದೇಶವನ್ನು ಕಾಡುವ ಬಹಳ ಕಠಿಣ ಸಮಸ್ಯೆಯಾಗಿದೆ. ಈ ರೀತಿ ತೀರ್ಮಾನವನ್ನು ಬದಲಾವಣೆ ಮಾಡುತ್ತಾ ಹೋದ ಪಕ್ಷದಲ್ಲಿ ಪ್ರತಿ ಗಳಿಗೆಯಲ್ಲಿಯೂ ಹೊಸ ವಾತಾವರಣ ಉಂಟಾಗುತ್ತದೆ. ನ್ಯಾಯಕ್ಕೆ, ಧರ್ಮಕ್ಕೆ, ನೀತಿಗೆ ಬಗ್ಗುವುದಿಲ್ಲ. ಯಾರು ಹೆಚ್ಚಿಗೆ ಬೆಂಕಿ ಇಟ್ಟು ಲೂಟಿ ಮಾಡುತ್ತಾರೋ, ರೈಲ್ವೆ ಕಂಬಿ ಕೀಳುತ್ತಾರೋ, ಉಪವಾಸ ಮಾಡಿ ಸಾಯುತ್ತೇವೆ ಎಂದು ಹೆದರಿಸುತ್ತಾರೋ, ಅಂತಹವರಿಗೆ ಬೆಲೆ ದೊರಕುತ್ತದೆಯೇ ವಿನಾ ನ್ಯಾಯ, ನೀತಿಗೆ ಬೆಲೆ ಇಲ್ಲದ ಪರಿಸ್ಥಿತಿ ಒದಗಿದೆ. ಆದುದರಿಂದ ನಾವು ಬರೀ ಮಂತ್ರಹಾಕಿ ನ್ಯಾಯವಾಗಿ ಬರಬೇಕು ಎಂದು ಬಾಯಲ್ಲಿ ಹೇಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಕಾರ್ಯತಃ ಮಾಡಬೇಕಾದರೆ ನಮ್ಮೆಲ್ಲರ ಮೇಲೆ ಈಗ ದೊಡ್ಡ ಜವಾಬ್ದಾರಿ ಇದೆ. ಅದರಲ್ಲಿ ಮುಖ್ಯವಾಗಿ ನಾವು ಯೋಚಿಸಬೇಕಾದರೆ ನಮ್ಮ ಇಂದಿರಾಗಾಂಧಿ ಪಂಗಡಕ್ಕೆ ಸೇರಿರತಕ್ಕ ಮಿತ್ರರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಅವರಲ್ಲಿ ಹೆಚ್ಚು ಅರಿತವರು ನುರಿತವರು ಬೇಕಾದಷ್ಟು ಜನ ಇದ್ದಾರೆ. ಅವರು ಮೈಸೂರಿಗೆ ಅನ್ಯಾಯವಾಗುತ್ತಿದೆ ಎಂದು ಒತ್ತಿ ಹೇಳಬೇಕು. ಅವರು ಇಂದಿರಾಗಾಂಧಿ ಪರವಾಗಿ ಇದ್ದರೂ ಕೂಡ, ಮೈಸೂರಿನ ಹಿತರಕ್ಷಣೆ ಬಗ್ಗೆ ಅವರು ಯಾರಿಗೂ ಕಮ್ಮಿ ಇಲ್ಲ ಎನ್ನುವ ವಿಷಯ ಗೊತ್ತಿದೆ. ಇದರಲ್ಲಿ ಹಠ ಹಿಡಿದು ಕೆಲಸ ಮಾಡಬೇಕೇ ವಿನಹ ಸುಮ್ಮನೆ ಕುಳಿತುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ ಎಂದು ತಿಳಿದಿದ್ದೇನೆ. ಕೇಂದ್ರ ಸರಕಾರದವರು ಯಾವುದಾದರೂ ರೀತಿ ಒತ್ತಡ ಬಂದರೆ ಬಗ್ಗುತ್ತಾರೆ, ಇಲ್ಲದಿದ್ದರೆ ಇಲ್ಲ ಎನ್ನುವುದು ಅನೇಕ ಸನ್ನಿವೇಶಗಳಿಂದ ಗೊತ್ತಾಗುತ್ತದೆ. ಹಿಂದೆ ಪಾಕೀಸ್ಥಾನ ಯುದ್ಧ ಆದಾಗ ಚೈನಾ ಯುದ್ಧ ಆದಾಗ ಯಾವರೀತಿ ಎಲ್ಲವನ್ನೂ ಮರೆತು ಒಗ್ಗಟ್ಟಿನಿಂದ ವರ್ತಿಸಿದೆವೋ ಅದೇ ರೀತಿ ಇಂಡಿಕೇಟು, ಸಿಂಡಿಕೇಟು ಎನ್ನತಕ್ಕ ಭಾವನೆ ಇಟ್ಟುಕೊಳ್ಳದೆ ಪಕ್ಷ, ಪಂಗಡ ಎಂದು ಇಟ್ಟುಕೊಳ್ಳದೆ ನಾವೆಲ್ಲರೂ ಕನ್ನಡಿಗರು ಕನ್ನಡ ದೇಶದ ಪ್ರತಿಯೊಂದು ಭಾಗವೂ ಕನ್ನಡ ನಾಡಿಗೆ ಸೇರಬೇಕು ಎಂದು ಪಣವನ್ನು ತೊಟ್ಟು ಬರೀ ಮಾತಿನಿಂದ ಕೆಲಸಗಳನ್ನು ಮಾಡದೆ ಕಾರ್ಯತಃ ಆಗುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಅದನ್ನು ಹಾಕಿಕೊಂಡು ಒಗ್ಗಟ್ಟಿನಿಂದ ಒಂದೇ ಕೂಗಿನಿಂದ ಸಮಸ್ಯೆ ಬಗೆಹರಿಸಬೇಕು. ನಿರ್ಲಕ್ಷ್ಯ ಮಾಡಿದರೆ ಮುಂದೆ ಇನ್ನೂ ಹೆಚ್ಚಿನ ತೊಂದರೆ ಆದೀತು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಪುಗೌಡ (ಶಾಹಪುರ).—ಸಭಾಪತಿಗಳೇ, ಈ ಬಜೆಟ್ ಅಧಿವೇಶನದಲ್ಲಿ ಮೈಸೂರು ಮಹಾರಾಷ್ಟ್ರ ಗಡಿ ಸಮಸ್ಯೆ ಚರ್ಚೆ ಆಗುವ ಸಂದರ್ಭ ಬರುತ್ತದೆ ಎನ್ನುವ ಮಾತು ಆಶ್ಚರ್ಯಕರವಾದ ಮಾತಾಗಿದೆ. ಈ ಸಂದರ್ಭದಲ್ಲಿ ತಾರೀಖು 17-18-19 ಪತ್ರಿಕೆಗಳಲ್ಲಿ ಮೈಸೂರು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಬಂದ ವರದಿ ಸರಕಾರದ್ದೋ ಅಥವಾ ಅಧಿಕಾರಿಗಳದ್ದೋ ಗೊತ್ತಿಲ್ಲ. ಅದರ ಪ್ರಕಾರ ಕೆಲವು ಹಳ್ಳಿಗಳು ಮಹಾರಾಷ್ಟ್ರಕ್ಕೆ ಹೋಗಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ನೀವೆಲ್ಲ ಇಂದಿರಾಗಾಂಧಿ ಗುಂಪಿಗೆ ಸೇರಿದರೆ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಬಾಪುಗೌಡ.—ನಾವೆಲ್ಲಾ ಕನ್ನಡಿಗರಾಗಿ ಹೋರಾಡಿದರೆ ಸಮಸ್ಯೆ ಬಗೆಹರಿಯುತ್ತದೆ. ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಹಾಜನ್ ಕಮಿಷನ್ ವರದಿ ಬಂದನಂತರ ಸುಮಾರು ಮೂರು ವರ್ಷಗಳ ವರೆಗೆ ಕೇಂದ್ರಸರಕಾರದಿಂದ ಆಗಲೀ ಕೇಂದ್ರದಲ್ಲಿರತಕ್ಕ ಮುಖಂಡರಿಂದಾಗಲೀ ಯಾವ ರೀತಿಯ ಮಾತಾಗಲೀ ಅಭಿಪ್ರಾಯವಾಗಲೀ ಬರಲಿಲ್ಲ. ಈವೊತ್ತಿನ ದಿವಸ ಕೇಂದ್ರದಲ್ಲಿ 19ನೇ ತಾರೀಖು ಬಜೆಟ್ ಅಧಿವೇಶನ ಅಲ್ಲಿ ಸೇರಿದಾಗ ಮತ್ತು ಇಲ್ಲಿ 23ನೇ ತಾರೀಖು ಮೈಸೂರಿನಲ್ಲಿ ಬಜೆಟ್ ಅಧಿವೇಶನ ಸೇರಿದಾಗ ಈ ರೀತಿ ಹಠಾತ್ತನೆ ಈ ಸಮಸ್ಯೆ ಬಗೆಹರಿಸಲಿಕ್ಕೆ ಒಂದು ಅಭಿಪ್ರಾಯ ಕೇಂದ್ರದ ವರದಿಯಿಂದ ಬಂದಿದೆ.

ಶ್ರೀ ಎಂ. ನಾಗಪ್ಪ.—ತಪ್ಪನ್ನು ಇಂದಿರಾಗಾಂಧಿಯವರ ಮೇಲೆ ಹಾಕುತ್ತೀರೋ ಅಥವಾ ನಿಜಲಿಂಗಪ್ಪನವರ ಮೇಲೆ ಹಾಕುತ್ತೀರೋ? ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದು ಕೇಂದ್ರದಲ್ಲಿ ತಮ್ಮ ಸರಕಾರ ಇದ್ದರೂ ಕೂಡ ಅವರು ಸರಕಾರವನ್ನು ಒಪ್ಪಿಸದೇ ಇದ್ದರೆ ತಪ್ಪು ಯಾರ ಮೇಲೆ ಹಾಕುತ್ತೀರಿ?

6-00 P.M.

ಶ್ರೀ ಬಾಪೂಗೌಡ.—ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಸಲುವಾಗಿ ಈ ಸಮಸ್ಯೆ ಬಂದದ್ದು ಸರಿಯೋ ತಪ್ಪೋ ಎಂಬ ಮಾತು ಈ ಸದನ ವಿಚಾರ ಮಾಡಬೇಕಾಗಿದೆ. ನನಗೆ ಅನಿಸುತ್ತದೆ ಈ ದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡತಕ್ಕ ರಾಜ್ಯಗಳು ಇವೆ. ಮೈಸೂರಾಗಲಿ, ಮಹಾರಾಷ್ಟ್ರವಾಗಲಿ, ಆಂಧ್ರವಾಗಲಿ, ತಮಿಳುನಾಡಾಗಲಿ ಪ್ರತಿಯೊಂದು ರಾಜ್ಯಕ್ಕೂ ಆ ರಾಜ್ಯದ ಭಾಷೆಗನುಗುಣವಾಗಿ ರಾಜ್ಯಗಳ ಸ್ಥಾಪನೆಯಾಗಬೇಕೆಂಬ ಬೇಡಿಕೆ ಬಂದು ಎಸ್.ಆರ್.ಸಿ. ಆಯಿತು. ಭಾಷಾವಾರು ತತ್ವದ ಆಧಾರದ ಮೇಲೆ ದೇಶ ವಿಭಜನೆಯಾಯಿತು. ಆದಾದ ನಂತರ ಮೈಸೂರು ಮಹಾರಾಷ್ಟ್ರದ ಗಡಿ ವಿವಾದ ಮುಗಿದಿಲ್ಲ, ಆ ಕೂಗು ಸತತವಾಗಿ ಬರುತ್ತಾ ಇದೆ. ಅದನ್ನು ಆದಷ್ಟು ಮಟ್ಟಿಗೆ ಹಿಂದೆಯೇ ಪರಿಹಾರ ಮಾಡಬೇಕಾಗಿತ್ತು. ಆದರೆ ಭಾಷಾವಾರು ಪ್ರಾಂತಗಳ ರಚನೆಯಾಗಲಿ ಎಂಬ ಉದ್ದೇಶದಿಂದ ಸ್ವಲ್ಪ ಹೆಚ್ಚುಕಮ್ಮಿಯಾದರೂ ಪರವಾಗಿಲ್ಲ ಮುಂದೆ ಸರಿಪಡಿಸಿಕೊಳ್ಳೋಣ ಎಂಬ ಉದ್ದೇಶದಿಂದ ಆಗಿನ ಕಾಲಕ್ಕೆ ಎಸ್. ಆರ್. ಸಿ. ಯನ್ನು ಒಪ್ಪಿಕೊಳ್ಳಲಾಯಿತು. ಅಂದೇ ಎಲ್ಲಿ ತೀರ್ಮಾನವಾಗಿದ್ದ ಪಕ್ಷದಲ್ಲಿ ಇವತ್ತು ಈ ಮಹಾಜನ ಕಮಿಷನ್ ವರದಿ ಬರುತ್ತಾ ಇರಲಿಲ್ಲ. ಬರುವುದಕ್ಕೆ ಅವಕಾಶವೂ ಇರುತ್ತಾ ಇರಲಿಲ್ಲ. ಇಂದು ಯಾವ ಒಂದು ಸೂಚನೆ ಬರುತ್ತಾ ಇದೆ ಇದು ಹಿಂದೆಯೇ ಬಂದಿದ್ದರೆ ಮಹಾಜನ್ ಕಮಿಷನ್ ರಚನೆಗೆ ಮೈಸೂರು ರಾಜ್ಯದ ಮುಖಂಡರೂ ಕೂಡ ಒಪ್ಪುತ್ತಾ ಇರಲಿಲ್ಲ. ನನಗೆ ಅನಿಸುತ್ತದೆ ಮಹಾರಾಷ್ಟ್ರ ಮತ್ತು ಮೈಸೂರಿನ ಮುಖಂಡರಿಗೆ ಯಾವುದೋ ಒಂದು ರೀತಿಯ ಭರವಸೆಯನ್ನು ಕೊಟ್ಟು ಒಪ್ಪಿಸಿಕೊಂಡರು. ಶ್ರೀಮಾನ್ ನಿಜಲಿಂಗಪ್ಪನವರು ಅದಕ್ಕೆ ಒಪ್ಪಿದರು ಅಂತ ಹೇಳಿ ನಾವೆಲ್ಲರೂ ಅದಕ್ಕೆ ಒಪ್ಪಿದೆವು. ಅಂತೂ ಒಪ್ಪಿ ಆಯಿತು.

[MR DEPUTY SPEAKER in the Chair]

ನನ್ನ ತಿಳುವಳಿಕೆ ಪ್ರಕಾರ ಮಹಾಜನ್ ಕಮಿಷನ್ ಅವರ ವರದಿಯನ್ನು ಕಾರ್ಯರೂಪಕ್ಕೆ ತರುತ್ತಾರೆ ಎಂದು ಸ್ಪಷ್ಟವಾಗಿ ತಿಳಿಸಿದ ಮೇಲೆಯೇ ಮೈಸೂರು ಮುಖಂಡರು ಅವರ ನೇಮಕಕ್ಕೆ ಒಪ್ಪಿಕೊಂಡರು. ಅವರ ವರದಿ ಬಂದನಂತರ 3 ವರ್ಷದವರೆಗೂ ಕೇಂದ್ರದವರು ಯಾವರೀತಿಯ ಲಕ್ಷ್ಯವನ್ನೂ ಅದಕ್ಕೆ ಕೊಡಲಿಲ್ಲ. ಆ ಕಾಲಕ್ಕೆ ಕೆಲವು ಸದಸ್ಯರು ಹೇಳಿದ ಪ್ರಕಾರ ನಮ್ಮ ಒತ್ತಾಯ ಎಂದರೆ ಈ ರಾಜ್ಯದ ಒತ್ತಾಯ, ಮುಖಂಡರ ಒತ್ತಾಯ ಅಷ್ಟು ಸಂಪೂರ್ಣವಾಗಿ ಇರಲಿಲ್ಲ. ಈ ಮೂರು ವರ್ಷದಿಂದ ಕೇಂದ್ರದಲ್ಲಿ ಇದ್ದಂಥ ಮುಖಂಡರು ಮೈಸೂರು ಮಹಾರಾಷ್ಟ್ರದ ಗಡಿ ಸಮಸ್ಯೆಯನ್ನು ಪರಿಹಾರ ಮಾಡತಕ್ಕ ಯಾವ ಗೋಜಿಗೂ ಹೋಗಲಿಲ್ಲ. ಅದರ ಬಗ್ಗೆ ಯಾವ ಒಂದು ಚಕಾರವನ್ನೂ ಕೂಡ ಹೇಳಲಿಲ್ಲ. 3 ವರ್ಷದ ನಂತರ ಈಗ ಯಾವ ರಾಜಕೀಯ ಪಕ್ಷಗಳು ತಮ್ಮ ಅಧಿಕಾರ ಉಳಿಯಬೇಕೆಂದು ಪೈಪೋಟಿ ನಡೆಸಿವೆ. ಅವು ಜನರನ್ನು ಮೋಸದಲ್ಲಿ ಹಾಕಿ ತಮಗೆ ಅನುಕೂಲಕರವಾದ ರೀತಿಯಲ್ಲಿ ಮಾಡಿಕೊಳ್ಳಬೇಕೆಂಬ ಪ್ರಯತ್ನವನ್ನು ನಡೆಸಿವೆ. ಮೈಸೂರು ಮಹಾರಾಷ್ಟ್ರ ಗಡಿ ಸಂಬಂಧದಲ್ಲಿ ಇವತ್ತಿನ ದಿವಸ ಅವರು ಯಾವ ಒಂದು ಧೋರಣೆಯನ್ನು ಅನುಸರಿಸಲು ಹೊರಟಿದ್ದಾರೆ ಆದರಿಂದ ಈ ರಾಜ್ಯಕ್ಕೂ ತೊಂದರೆ, ದೇಶಕ್ಕೂ ತೊಂದರೆ. ಇಂತಹ ಒಂದು ಸಮಸ್ಯೆಯ ಬಗ್ಗೆ ಅವರು ಯಾವ ಒಂದು ತೀರ್ಮಾನವನ್ನು ಕೊಡಲಿಕ್ಕೆ ಹೊರಟಿದ್ದಾರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಇವತ್ತಿನ ದಿವಸ ನಾವು ವಿಚಾರಮಾಡಬೇಕಾಗಿದೆ. ಇವತ್ತಿನ ದಿವಸ ಸಿಂಡಿಕೇಟ್ ಆಗಲಿ ಇಂಡಿಕೇಟ್ ಆಗಲಿ ಯಾವ ಪಕ್ಷವೇ ಇರಲಿ, ಯಾವ ಪಂಗಡವೇ ಇರಲಿ, ಕಮ್ಯೂನಿಸ್ಟ್ ಪಂಗಡ ಇರಲಿ ಜನಸಂಘ ಇರಲಿ ನ್ಯಾಯವಾದ ಒಂದು ನಿಲುವು ತೆಗೆದುಕೊಂಡಮೇಲೆ ಅದರಂತೆ ನಡೆಯಬೇಕಾದ್ದು ಧರ್ಮ ಅದಕ್ಕೆ ಬೆಂಬಲ ಕೊಡುತ್ತೇವೆ ಎಂದು ಎಲ್ಲರೂ ಹೇಳುತ್ತಾ ಇದ್ದಾರೆ. ಆದ್ದರಿಂದ ಸಿಂಡಿಕೇಟ್ ಆಗಲಿ, ಇಂಡಿಕೇಟ್ ಆಗಲಿ ಆ ಭಾವನೆಯನ್ನು ಬಿಟ್ಟು ತತ್ವದ ಮೇಲೆ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗಿರುವಾಗ ಇಂತಹ ಒಂದು ತೀರ್ಮಾನವನ್ನು ಕೈಕೊಳ್ಳಬೇಕೆಂದು ಅವರು ಸೂಚನೆ ಮಾಡುತ್ತಿರುವುದು ಸರಿಯಲ್ಲ ಎಂದು ನಾವು ಹೇಳಬೇಕಾಗಿದೆ. ಇಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದರಿಂದ ದೇಶದಲ್ಲಿ ರಾಜಕೀಯ ವಾತಾವರಣ ಕಲ್ಮಷವಾಗಲಿಕ್ಕೆ ನಮಗೆ ನಾವೇ ಕಾರಣೀಭೂತರಾಗುತ್ತೇವೆ ಎಂದು ನಿಶ್ಚಯವಾಗಿ ಹೇಳಬೇಕಾಗಿದೆ. ಕೇಂದ್ರದ ಮುಖಂಡರು ಇಂತಹ ಒಂದು ಕಲುಷಿತ ವಾತಾವರಣ ಕಲ್ಪನೆಯಾಗತಕ್ಕ ಸನ್ನಿವೇಶವನ್ನುಂಟು ಮಾಡುವುದಕ್ಕೆ ಹೊರಟಿದ್ದು ಒಂದು ಶೋಚನೀಯವಾದ ವಿಷಯವಾಗಿದೆ. ನಾವು ಕನ್ನಡಿಗರು, ನಮಗೆ ಇತಿಹಾಸ ಇದೆ. ನಮ್ಮಲ್ಲೂ ಶೂರರು ಇದ್ದಾರೆ. ಹರಿಯಾಣ ಮತ್ತು ಪಂಜಾಬಿನ ಸಮಸ್ಯೆ ಉಂಟಾದಾಗ ಎಂತಹ ಒಂದು ಪರಿಸ್ಥಿತಿ ಉಂಟಾಯಿತೋ ಅಂತಹ ಪರಿಸ್ಥಿತಿ ಉಂಟಾಗಲು ಅವಕಾಶ ಮಾಡಬಾರದು. ಇಂದು ಈ

ಗಡಿ ವಿವಾದದಲ್ಲಿ ನಮ್ಮ ನಿಲುವಿಗೆ ಸಂಪೂರ್ಣ ಬೆಂಬಲ ದೊರೆಯುವುದೆಂಬ ಭರವಸೆ ಇದೆ. ಮೇಲಿನವರು ಯಾವುದೇ ಮಾಡಿದರೂ ಸಂಪೂರ್ಣ ಬೆಂಬಲ ತಮಗೆ ದೊರೆಯುವುದು, ಸ್ಟೀಲ್ ಪ್ಲಾಂಟನ್ನು ತಮಿಳುನಾಡಿಗೆ ಕೊಟ್ಟರೆ ಅಲ್ಲಿನವರ ಬೆಂಬಲ ದೊರೆಯುವುದು ಎಂಬ ಮನೋಭಾವನೆ ಇಟ್ಟುಕೊಂಡಿರುವುದು ಸ್ಪಷ್ಟವಾಗಿದೆ. ಇದಕ್ಕೆ ಅವಕಾಶ ಕೊಡಬಾರದು. ಕನ್ನಡಿಗರೆಲ್ಲಾ ಒಂದಾಗಿ ನಮ್ಮ ಹಕ್ಕುಬಾಧ್ಯತೆಗೆ ಹೋರಾಡಬೇಕು. ಇಲ್ಲಿನ ಬೆಳವಣಿಗೆಗೆ ಸಂಸ್ಕೃತಿಯ ಉದ್ಧಾರಕ್ಕೆ ಶ್ರಮಿಸಬೇಕು. ಈಗ ಮಹಾಜನ್ ಅವಾರ್ಡಿದೆ, ಅದನ್ನು ಅಪೇಕ್ಷೆಮಾಡಿದವರು ನಾವಲ್ಲ. ಎರಡು ರಾಜ್ಯಗಳ ಒಪ್ಪಂದದ ಪ್ರಕಾರ ಆಗಿರುವ ಅವಾರ್ಡಿನ ತೀರ್ಮಾನವನ್ನು ಕೇಂದ್ರ ಸರಕಾರ ಚಾಚೂ ತಪ್ಪದೆ ಕಾರ್ಯರೂಪಕ್ಕೆ ತರಬೇಕು. ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಕೂಡ ಎಲ್ಲ ಸದಸ್ಯರೂ ಒಗ್ಗಟ್ಟಿನಿಂದ ಠರಾವು ಅಂಗೀಕಾರ ಮಾಡಬೇಕು, ಹಾಗೆ ಮಾಡಿ ಕೇಂದ್ರಕ್ಕೆ ನಮ್ಮ ನಿಲುವನ್ನು ಸ್ಪಷ್ಟಪಡಿಸುವುದು ಅಗತ್ಯ. ಕೇಂದ್ರ ಸರಕಾರಕ್ಕೆ ಮೈಸೂರಿನವರನ್ನು ಹೇಗಾದರೂ ಮಾಡಿ ಒಪ್ಪಿಸಬಹುದು ಎಂಬ ಅಭಿಪ್ರಾಯವಿರಬಹುದು. ಅದಕ್ಕೆ ಮಹಜನ್ ವರದಿಯನ್ನು ಜಾರಿಗೆ ಕೊಟ್ಟಿಲ್ಲ. ಬೇಡಿಕೆ ಈಡೇರಬೇಕಾದರೆ ರೈಲು ಬಸ್ಸುಗಳನ್ನು ಸುಡಬೇಕು ಆಸ್ತಿಪಾಸ್ತಿಗಳನ್ನು ಹಾಳುಮಾಡಬೇಕು ಎಂಬ ಭಾವನೆ ಮೂಡುವಂತೆ ಮಾಡುವುದು ಉಚಿತವಲ್ಲ. ಹಾಗೆ ಮಾಡಿದರೆ ಉದ್ದೇಶ ಈಡೇರುವುದೋ ಏನೋ ಎಂಬ ಅನುಮಾನ ಬರುತ್ತಿದೆ. ಸುಮ್ಮನೆ ಕೇಳಿದರೆ ಬೇಡಿಕೆ ಈಡೇರುವಂತೆ ಕಾಣುತ್ತಿಲ್ಲ. ಏನೇ ಆಗಲಿ ಎಲ್ಲರೂ ಕೂಡ ಒಂದಾಗಿ ಏಕಮನಸ್ಸಿನಿಂದ ಕನ್ನಡನಾಡಿನ ಹಿತ ರಕ್ಷಿಸಬೇಕು, ಅದನ್ನು ಕಾಪಾಡಲು ಹೋರಾಡಬೇಕು ಎಂದು ವಿಜ್ಞಾಪನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The House now stands adjourned to meet again tomorrow at 1-00 P.M.

The House adjourned at Fifteen Minutes past Six of the Clock to meet again at One of the Clock on Wednesday, the 25th February, 1970.